ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 03 ಪುಟ 16
ಜನವರಿ 15, 2012 ರೂ. 5/-

Blog :janashakthi.wordpress.com e-mail : js_weekly@yahoo.com




ಮಾರ್ಕ್ಸ್‌ವಾದಿ ಚಳುವಳಿಯ ಒಂದು ನೋಟ



ಸಮರಗಳ ನಾಲ್ಕು ವರುಷಗಳು

ಸಾಹಿತ್ಯ-ಸಂಸ್ಕೃತಿಯ ಮೇಲೆ ಪ್ರಭಾವ



ಜನರ ಪಾಲಿಗೆ ಇಲ್ಲದ ಸರ್ಕಾರ

ಮಹಿಳೆಯರ ಸ್ಥಾನವೆಲ್ಲಿ ?




ಯಾಕೀ ಸುಳ್ಳು ಕಾಳಜಿ ಪ್ರಧಾನಿಗಳೇ?

ಸಿಂಧಗಿ : ದೇಶದ್ರೋಹದ ರಾಜಕೀಯ ಹುನ್ನಾರ

ಜಿಲ್ಲೆಯ ಜನತೆಯ ಜ್ವಲಂತ ಸಮಸ್ಯೆಗಳ ವಿರುದ್ದ ಜನಚಳುವಳಿ ರೂಪಿಸಿ,

ಬಲಿಷ್ಠ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು

ಸಿಪಿಐಎಂ ಚಿಕ್ಕಬಳ್ಳಾಪುರ 14ನೇ ಜಿಲ್ಲಾ ಸಮ್ಮೇಳನ ನಿರ್ಧಾರ



ಸಿಪಿಐಎಂ ಚಿಕ್ಕಬಳ್ಳಾಪುರ ಜಿಲ್ಲಾ 14 ನೇ ಸಮ್ಮೇಳನವು 29-30 ನವೆಂಬರ್ 2011 ರಂದು ಗುಡಿಬಂಡೆಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ಈ ಸಮ್ಮೇಳನದಲ್ಲಿ ಒಟ್ಟು 185 ಸಂಗಾತಿಗಳು ಹಾಜರಿದ್ದರು ಇವರಲ್ಲಿ 169 ಪ್ರತಿನಿಧಿಗಳು 16 ವೀಕ್ಷಕರು ವಿವಿದ ತಾಲ್ಲೂಕು ಸಮ್ಮೇಳನಗಳಿಂದ ಆಯ್ಕೆಯಾಗಿ ಬಂದಿದ್ದರು. ಸಮ್ಮೇಳನವು ಸರಳವಾಗಿ ನಡೆದಿದ್ದರೂ ಅತ್ಯಂತ ಸ್ಪೂರ್ತಿದಾಯಕವಾಗಿ ಮತ್ತು ಚಳುವಳಿಯನ್ನು ಬಲಿಷ್ಠಗೊಳಿಸುವ ದೃಡ ತೀರ್ಮಾನವನ್ನು ತೆಗೆದುಕೊಂಡ ಅತ್ಯಂತ ಮಹತ್ವದ ಸಮ್ಮೇಳನ ಇದಾಗಿದೆ. ಈ ಸಮ್ಮೇಳದ ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾಂ.ವಿ.ಜೆ.ಕೆ.ನಾಯರ್ ರವರು ನೆರವೇರಿಸಿದರು ಅವರು ಮಾತನಾಡುತ್ತಾ ವಿಶ್ವದಲ್ಲೇ ಮಾರ್ಕ್ಸ್‌ವಾದಕ್ಕೆ ಸಾವಿಲ್ಲ ಎಂಬುದನ್ನು ಪ್ರಪಂಚದಲ್ಲಿ ಈಗ ನಡೆಯುತ್ತಿರುವ ವಿದ್ಯಮಾನಗಳೇ ತೋರಿಸುತ್ತಿವೆ ಎಂದರು. ಪ್ರಪಂಚದ ಬಹುಬಾಗದ ದೇಶಗಳಲ್ಲಿ ಅದರಲ್ಲೂ ಸಾಮ್ರಾಜ್ಯಶಾಹಿ ಅಧಿನಾಯಕರಾದ ಅಮೇರಿಕಾ ಮತ್ತು ಯುರೋಪ್ ದೇಶಗಳಲ್ಲಿ ವರ್ಗ ಹೋರಾಟ ಶುರುವಾಗುತ್ತಿದೆ. ಇದು ಕ್ರಿಯಾಶೀಲವಾಗಿ ನಡೆಯುತ್ತಿರುವುದು ಮಾರ್ಕ್ಸ್‌ವಾದಕ್ಕಿರುವ ವೈಜ್ಞಾನಿಕತೆಯನ್ನು ತೋರಿಸುತ್ತದೆ. ಇದರ ಭಾಗವಾಗಿ ಅಕ್ಯುಪೈ ವಾಲ್‌ಸ್ಟ್ರೀಟ್ ಚಳುವಳಿಯು ಉತ್ತಮ ಉದಾಹರಣೆಯಾಗಿದೆ. ಕಾರ್ಮಿಕ ವರ್ಗದ ಹಿತವೇ ಕಮ್ಯೂನಿಸ್ಟ್ ಪಕ್ಷದ ಹಿತ, ಆದರೆ ರಾಜ್ಯದಲ್ಲಿ ಮತ್ತು ದೇಶದಲ್ಲಿ ಕಾರ್ಮಿಕರನ್ನು ನೇರವಾಗಿ ದೋಚುವಂತಹ ಹಾಗೂ ಕಾರ್ಮಿಕರನ್ನು ನಿಯಮಗಳ ಬಾಹಿರವಾಗಿ ಕೆಲಸದಲ್ಲಿ ಇಳಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದೇಶದಲ್ಲಿ ಸಾರ್ವಜನಿಕ ವಲಯಗಳನ್ನು ಮುಚ್ಚಿ ಬೃಹತ್ ಬಹುರಾಷ್ಟ್ರೀಯ ಕಂಪನಿಗಳಿಗೆ ಕೆಂಪು ಹಾಸಿಗೆ ಹಾಸಿ ಸ್ವಾಗತಿಸಿದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕ್ರಮಗಳಿಂದಾಗಿ ಕಾರ್ಮಿಕರ ಬದುಕು ಅಸಹನೀಯ ಪರಿಸ್ಥಿತಿಗೆ ತಲುಪಿದೆ. ಲಕ್ಷಾಂತರ ಗುಡಿ ಕೈಗಾರಿಕೆಗಳು ಮುಚ್ಚಿವೆ. ಇದರಿಂದಾಗಿ ಲಕ್ಷಾಂತರ ಜನ ಕಾರ್ಮಿಕರು ಬೀದಿಗೆ ಬಂದಿದ್ದಾರೆ. ಈ ಸಮಸ್ಯೆಗಳಿಗೆ ಹೋರಾಟವೊಂದೇ ಪರಿಹಾರವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀರಾವರಿ ಸಮಸ್ಯೆ ಬೃಹತ್ ಸಮಸ್ಯೆಯಾಗಿದೆ ಈ ಸಮಸ್ಯೆ ವಿರುದ್ಧ ಪಕ್ಷವು ಹಲವಾರು ಹೋರಾಟಗಳನ್ನು ಮಾಡುತ್ತಿದ್ದು ಇದನ್ನು ಮತ್ತೊಷ್ಟು ಬಲಿಷ್ಠಗೊಳಿಸಬೇಕಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿರುವ ಹಿನ್ನೆಲೆಯಲ್ಲಿ ದುಡಿಯುವ ಜನರ ಸಮಸ್ಯೆಗಳು ದುಪ್ಪಟ್ಟಾಗುತ್ತಿವೆ. ಈ ಎಲ್ಲಾ ಸಮಸ್ಯೆಗಳ ವಿರುದ್ಧ ಹೋರಾಡಲು ಕೆಂಬಾವುಟದಿಂದ ಮಾತ್ರ ಸಾಧ್ಯವಾಗಬೇಕಾಗಿದೆ. ಆದ್ದರಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಮೂಲಕ ಪಕ್ಷವನ್ನು ಮತ್ತು ಚಳುವಳಿಯನ್ನು ಬಲಿಷ್ಠಗೊಳಿಸಿ, ರಾಜ್ಯದಲ್ಲಿ ಬಲಿಷ್ಠ ಚಳುವಳಿಯನ್ನು ರೂಪಿಸಲು ಕರೆ ನೀಡಿದರು.



ಕರಡುವರದಿ ಮೇಲೆ ಅತ್ಯುತ್ತಮವಾಗಿ ಚರ್ಚೆನಡೆಸಿದ ಪ್ರತಿನಿಧಿಗಳು ಜಿಲ್ಲೆಯಲ್ಲಿ ಪಕ್ಷವನ್ನು ವಿಸ್ತರಿಸಿ ಬಲಿಷ್ಠಗೊಳಿಸಲು ದೃಡ ಸಂಕಲ್ಪತೊಟ್ಟರು.

ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು 1. ಜಿಲ್ಲೆಯ ಕೆರೆಗಳಲ್ಲಿ ಹೂಳು ತೆಗೆಯಲು ಒತ್ತಾಯಿಸಿ, 2. ಶಾಶ್ವತ ನೀರಾವರಿ ಯೋಜನೆಗಳ ಜಾರಿಗಾಗಿ ಒತ್ತಾಯಿಸಿ, 3. ದಲಿತ ಹಕ್ಕುಗಳ ಪ್ರಶ್ನೆಗಳಿಗೆ ಸಂಬಂಧಿಸಿ, 4. ಎಲ್ಲಾ ಬಡವರಿಗೂ ಭೂಮಿ, ಉಚಿತ ನಿವೇಶನ ಮತ್ತು ವಸತಿಗೆ ಆಗ್ರಹಿಸಿ, 5.ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆಗಳನ್ನು ನೀಡಲು ಆಗ್ರಹಿಸಿ, 6. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ, ಭ್ರಷ್ಟಾಚಾರ ತಡೆಗಟ್ಟಲು ಆಗ್ರಹಿಸಿ. 8, ಚಿಲ್ಲರೇ ವ್ಯಾಪದಲ್ಲಿ ವಿದೇಶಿ ನೇರ ಬಂಡವಾಳ ವಿರೋಧಿಸಿ. 9, ಎಲ್ಲಾ ಬಡವರಿಗೂ ರೇಷನ್ ಕಾರ್ಡ್, 2ರೂ ಕೆಜಿಗೆ ಅಕ್ಕಿ ಮತ್ತು ಅಗತ್ಯ ದಿನ ಬಳಕೆಯ 14 ವಸ್ತುಗಳನ್ನು ನೀಡುವಂತೆ ಆಗ್ರಹಿಸಿ, ಇನ್ನೂ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅಂತಿಮವಾಗಿ 21 ಜನರ ನೂತನ ಜಿಲ್ಲಾ ಸಮಿತಿಯನ್ನು ಸಮ್ಮೇಳನ ಆಯ್ಕೆಮಾಡಿತು. ಕಾಂ.ಜಿ.ವಿ ಶ್ರೀರಾಮರೆಡ್ಡಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಕಾಂ. ಸಿದ್ದಗಂಗಪ್ಪ, ಕಾಂ.ಎಂ.ಪಿ. ಮುನಿವೆಂಕಟಪ್ಪ, ಕಾಂ.ಸಿ.ಗೋಪಿನಾಥ್, ಕಾಂ.ಚನ್ನರಾಯಪ್ಪ, ಕಾಂ.ಕೆ.ನಾಗರಾಜ್, ಕಾಂ.ಜಯರಾಮರೆಡ್ಡಿ ಯವರು ಆಯ್ಕೆಯಾದರು.

ವರದಿ : ಎಂ.ಪಿ.ಮುನಿವೆಂಕಟಪ್ಪ

ಅವಿಭಜಿತ ಸಿಪಿಐ ರಾಜ್ಯ ಸಮ್ಮೇಳನಗಳ ವಿವರ

ಸಮ್ಮೇಳನ	ದಿನಾಂಕ	ಸ್ಥಳ	ಕಾರ್ಯದರ್ಶಿ
1	1948		ಎನ್.ಎಲ್.ಉಪಾಧ್ಯಾಯ(ಸಂಘಟಕರು)
2	1951		ಎನ್.ಎಲ್.ಉಪಾಧ್ಯಾಯ(ಸಂಘಟಕರು)
3	28 ಅಕ್ಟೋಬರ್-1		
	ನವೆಂಬರ್ 1953	ಬೆಂಗಳೂರು	ಎನ್.ಎಲ್.ಉಪಾಧ್ಯಾಯ
4	22-28 ಫೆಬ್ರವರಿ 1956	ಬೆಂಗಳೂರು	ಬಿ.ವಿ.ಕಕ್ಕಿಲಾಯ
5			
6	1-4 ಫೆಬ್ರವರಿ 1960	ಮೈಸೂರು	ಎನ್.ಎಲ್.ಉಪಾಧ್ಯಾಯ

ಸಿಪಿಐಎಂ ರಾಜ್ಯ ಸಮ್ಮೇಳನಗಳ ವಿವರಗಳು

ಸಮ್ಮೇಳನ	ದಿನಾಂಕ	ಸ್ಥಳ	ಕಾರ್ಯದರ್ಶಿ
7	1964	ಮಂಗಳೂರು	ಎನ್.ಎಲ್.ಉಪಾಧ್ಯಾಯ
8	1968	ದಾವಣಗೆರೆ	ಎಂ.ಹೆಚ್.ಕೃಷ್ಣಪ್ಪ
9	1973	ಗುಲ್ಬರ್ಗಾ	ಎಂ.ಹೆಚ್.ಕೃಷ್ಣಪ್ಪ
10	1978 1978 ಆಗಸ್ಟ್	ಬೆಂಗಳೂರು	ಎಂ.ಹೆಚ್.ಕೃಷ್ಣಪ್ಪ ಎಂ.ಕೆ.ಭಟ್
11	11-14 ಡಿಸೆಂಬರ್, 1981	ಮಂಗಳೂರು	ಎಂ.ಕೆ.ಭಟ್
			ಪಿ.ರಾಮಚಂದ್ರ ರಾವ್
12	18-20 ಅಕ್ಟೋಬರ್, 1985	ಕೆ.ಜಿ.ಎಫ್	ಪಿ.ರಾಮಚಂದ್ರರಾವ್
13	27-30 ನವೆಂಬರ್, 1988	ಬೆಂಗಳೂರು	ಪಿ.ರಾಮಚಂದ್ರರಾವ್
14	11-14 ನವೆಂಬರ್, 1991	ಮಂಗಳೂರು	ಪಿ.ರಾಮಚಂದ್ರರಾವ್
15	24-28 ಫೆಬ್ರವರಿ, 1995	ಗುಲ್ಬರ್ಗಾ	ಪಿ.ರಾಮಚಂದ್ರರಾವ್
16	30 ಡಿಸೆಂಬರ್, 1997		
	02 ಜನವರಿ, 1998	ಕೋಲಾರ	ಪಿ.ರಾಮಚಂದ್ರರಾವ್
	18 ಸೆಪ್ಟೆಂಬರ್ 1998		ಎಸ್.ಸೂರ್ಯ ನಾರಾಯಣರಾವ್
17	28-31 ಜನವರಿ, 2002	ಬಳ್ಳಾರಿ	ಎಸ್.ಸೂರ್ಯನಾರಾಯಣ ರಾವ್
	01 ಜುಲೈ 2002		ಜಿ.ಎನ್.ನಾಗರಾಜ್
18	21-24 ಜನವರಿ, 2005	ಉಡುಪಿ	ಜಿ.ಎನ್.ನಾಗರಾಜ್
19	21-24 ಜನವರಿ, 2008	ಮೈಸೂರು	ವಿ.ಜೆ.ಕೆ.ನಾಯರ್
20	8-11 ಜನವರಿ, 2012	ಚಿಕ್ಕಬಳ್ಳಾಪುರ	

ಸಂಪಾದಕೀಯ

ದೇಶದ್ರೋಹದ ರಾಜಕೀಯ ಹುನ್ನಾರ

ಸಿಂದಗಿಯ ತಹಶೀಲ್ದಾರ ಕಛೇರಿಯ ಧ್ವಜಸ್ಥಂಬದಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದ್ದು ಸಂಘಪರಿವಾರವೇ ಎಂಬುದು ತನಿಖೆಯಿಂದ ಹೊರ ಬಂದಿದೆ. ಇದು ಎಲ್ಲ ನಾಗರೀಕರೂ ಬೆಚ್ಚಿಬೀಳುವ ದೇಶದ್ರೋಹದ ಕೃತ್ಯವಾಗಿದೆ. ಬಿಜೆಪಿ ಸರಕಾರವೇನೋ ಇದು ಪ್ರಮೋದ್ ಮುತಾಲಿಕನ ಶ್ರೀರಾಮ ಸೇನೆಯ ಕೃತ್ಯವೆನ್ನುತ್ತಿದೆ. ಮುತಾಲಿಕ ಇದು ಆರ್.ಎಸ್.ಎಸ್.ನದು ಎನ್ನುತ್ತಾನೆ. ಆರೆಸ್ಸಸ್ ಗೂ– ಮುತಾಲಿಕನ ಸೇನೆಗೂ ಸಂಬಂಧವೇ ಇಲ್ಲವೆಂದು ಅವರೆಷ್ಟು ಬಾರಿ ಹೇಳಿಕೊಂಡರೂ ಅವರ ಉದ್ದೇಶ ಫ್ಯಾಶಿಸ್ಟ್ ಮಾದರಿಯ ಹಿಂದುತ್ವದ ಗುರಿ ಸಾಧನೆ! ಅದಕ್ಕಾಗಿ ಅವರಲ್ಲಿ ಕೆಲಸದ ವಿಭಜನೆ ಆಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಇವರ ಉದ್ದೇಶ ಸಮಾಜವನ್ನು ಮತೀಯ ನೆಲೆಯಲ್ಲಿ ಒಡೆಯುವುದು. ಅದಕ್ಕಾಗಿ ಹಿಂದೂಗಳನ್ನು ಮುಸ್ಲಿಂರ ವಿರುದ್ಧ ಎತ್ತಿ ಕಟ್ಟಿ ದ್ವೇಷ ಬೆಳೆಸಿ ಆ ಮೂಲಕ ದೇಶವನ್ನೇ ಒಡೆಯುವುದು. ಆದ್ದರಿಂದಲೇ ಬಿಜೆಪಿ – ಆರ್.ಎಸ್.ಎಸ್.ಗಳಾಗಲಿ, ಮುತಾಲಿಕನ ಸೇನೆಯಾಗಲಿ ಕೃತ್ಯ ಎಸಗಿದವರ ತನಿಖೆಗೆ ಒತ್ತಾಯಿಸದೇ, ಒಂದು ಸಮುದಾಯದ ವಿರುದ್ಧವೇ ದ್ವೇಷ ಖಾರಿ ಅಪರಾಧಿಗಳೆಂದು ಘೋಷಿಸಿ ಬಂದ್, ಗಲಭೆಗಳನ್ನು ಸೃಷ್ಟಿಸಿದ್ದು ಆ ದುರುದ್ದೇಶವನ್ನೇ ಸಾರುತ್ತದೆ. ದುರದೃಷ್ಟವೆಂದರೆ ಇಂತಹ ಅನುಮಾನಗಳಿಗೆ ಒಂದು ವಿಭಾಗ ಬಲಿಯಾಗುತ್ತಿರುವುದು ಆತಂಕದ ಸಂಗತಿ.

ಸಂಘ–ಪರಿವಾರದ ಇಂತಹ ಕುತಂತ್ರದ ಕೃತ್ಯಗಳು ಹೊಸದೇನಲ್ಲ. ಸಂಜೋತಾ ಎಕ್ಸಪ್ರೆಸ್ ರೈಲು ಸ್ಪೋಟ, ಮಕ್ಕಾ–ಮಸೀದಿ ಸ್ಪೋಟ, ಮಲೆಗಾಂವ್‌ನಲ್ಲಾದ ಸ್ಪೋಟ ಇವುಗಳಲ್ಲಿ ಈ ಪರಿವಾರದ ಕಾರ್ಯಕರ್ತರು ಸಿಕ್ಕಿಬಿದ್ದಿದ್ದಾರೆ. ಈ ಕೆಲ ಪ್ರಕರಣಗಳಲ್ಲಿ ಬೆಂಗಳೂರಿನೊಂದಿಗೆ ನಂಟೂ ಇದೆ. ಮಾತ್ರವಲ್ಲ ಈ ಅವಧಿಯಲ್ಲೇ 2009ರಲ್ಲಿ ಲೋಕಸಭಾ ಚುನಾವಣೆಗೂ ಮೊದಲು ಬೆಂಗಳೂರಿನ ಜೆ.ಸಿ.ನಗರದ ಮಸೀದಿಯಲ್ಲಿ ಹಂದಿ ಮಾಂಸ ಹಾಕಿದ್ದು ಇದೇ ಬಜರಂಗದಳವೇ ಎಂಬುದು ತನಿಖೆಯಿಂದ ಹೊರಬಂತು. ಕಲಾವಿದನೊಬ್ಬನನ್ನು ಖ್ಯಾತಿಗೊಳಿಸಲು ಗಲಬೆಯೆಬ್ಬಿಸುವ ಒಳಸಂಚಿನ ಡೀಲ್‌ನಲ್ಲಿ ಹಣ ಪಡೆದ ವ್ಯವಹಾರವನ್ನು ಆಂಗ್ಲ ಟಿ.ವಿ.ಚಾನಲ್ ಬಹಿರಂಗ ಪಡಿಸಿತು.

ಈ ಹಿಂದೆ ಉಡುಪಿ, ಈಗ ವಿಜಾಪುರ ಮುಂತಾದ ಕಡೆ ಧ್ವಜ ಹಾರಿಸಿದ ಪ್ರಶ್ನೆಗಳಲ್ಲಿ ನಿಷ್ಠುರ ಹಾಗೂ ಆಳ ತನಿಖೆ ನಡೆದರೆ ಇನ್ನಷ್ಟು ಸತ್ಯಗಳು ಹೊರ ಬಂದಾವು. ಆದರೆ ತನಿಖೆ ನಡೆಸಿ ದೇಶದ್ರೋಹಿಗಳನ್ನು ಮಟ್ಟಹಾಕಬೇಕಾದ ರಾಜ್ಯದ ಬಿಜೆಪಿ ಸರಕಾರವೇ ಬಜರಂಗದಳ, ಶ್ರೀರಾಮಸೇನೆ, ವಿಶ್ವ ಹಿಂದೂ ಪರಿಷತ್‌ಗಳ ಮೇಲಿನ ನೂರಾರು ಮೊಕದ್ದಮೆಗಳನ್ನು ವಾಪಾಸು ತೆಗೆದು ಕೊಂಡಿತು. ಇಂತಹ ಸಮಾಜದ್ರೋಹಿ, ದೇಶದ್ರೋಹಿ ಕೃತ್ಯಗಳನ್ನು ಖುಲಾಸೆಗೊಳಿಸುವ ಸರ್ಕಾರದ ನಿಜ ಉದ್ದೇಶವಾದರೂ ಏನು? ಇಂದಿನ ಸಿಂದಗಿಯ ಘಟನೆಯನ್ನು ಸೀಮಿತವಾಗಿ ನೋಡಲಾಗದು. ಇಲ್ಲೂ ಒಂದು ವ್ಯಾಪಕ ಪಿತೂರಿಯ ಕಾರ್ಯಾಚರಣೆ, ಸಂಘಟನೆಯ ಜಾಲವಿರುವ ಸಾಧ್ಯತೆಗಳಿದ್ದು ರಾಷ್ಟ್ರ ವಿರೋಧಿ ಶಕ್ತಿಗಳನ್ನು ಬಯಲಿಗೆಳೆಯಬೇಕು. ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿಯೂ ಚಡ್ಡಿಪಡೆಯ ಒಂದು ವಿಭಾಗ ಸಶಸ್ತ್ರ ತರಬೇತಿ ಪಡೆಯುತ್ತಿರುವ ಅನುಮಾನದ ಹಲವು ಪ್ರಸಂಗಗಳು ಹೊರಬಂದಿವೆ. ಆದರೆ ರಾಜ್ಯ ಸರಕಾರ ಏನೊಂದು ಕ್ರಮ ವಹಿಸಿಲ್ಲ.ಈ ಹಿನ್ನೆಲೆ ಇರುವಾಗ ಈ ತನಿಖೆಯನ್ನು ಕೇಂದ್ರದ ಸಿಬಿಐಗೆ ಒಪ್ಪಿಸುವುದು ಅತ್ಯಗತ್ಯ.


ಇಂತಹ ಕೃತ್ಯಗಳ ಹಿಂದೆ ಸಮಾಜವನ್ನು ಒಡೆಯುವ ಉದ್ದೇಶಗಳಿರುವಾಗಲೇ ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರುವ ಹುನ್ನಾರಗಳೂ ಇವೆ. ಜನದ್ರೋಹಿ ನೀತಿಗಳು, ಬ್ರಹ್ಮಾಂಡ ಭ್ರಷ್ಟಾಚಾರ, ಭೂ–ಗಣಿ ಮಾಫಿಯಾಗಳು, ಕಾರ್ಪೋರೇಟ್ ಉದ್ದಿಮೆಗಳ ಲೂಟಿಗೆ ಮುಕ್ತ ಅವಕಾಶ ಕಲ್ಪಿಸಿರುವ ಬಿಜೆಪಿ ಸರ್ಕಾರ ಅಧಿಕಾರದಾಹದ ಕಿತ್ತಾಟದಲ್ಲಿ ಮುಳುಗೇಳುತ್ತಿದೆ. ಜನರಪಾಲಿಗೆ ಸರಕಾರವೇ ಇಲ್ಲವಾಗಿದ್ದು ಜನರಲ್ಲಿಯೂ ತೀವ್ರ ಅತೃಪ್ತಿಯೂ ಹೆಚ್ಚುತ್ತಿದೆ. ಆದ್ದರಿಂದ ಜನರ ಗಮನವನ್ನು ನೈಜ ವಿಷಯಗಳಿಂದ ಬೇರೆಡೆಗೆ ಸೆಳೆದು, ಮತೀಯವಾದದ ಮಂಕುಬೂದಿ ಎರಚಿ, ಪುನಃ ಕೋಮುವಾದೀ ಕ್ರೋಢೀಕರಣ ಮಾಡಲು ಬಿಜೆಪಿ–ಸಂಘಪರಿವಾರ ಹೊರಟಿವೆ. ಆದ್ದರಿಂದಲೇ ರಾಜ್ಯದ ಹಲವಾರು ಕಡೆ ಮುಸ್ಲಿಂ – ಕ್ರೈಸ್ತ ಸಮುದಾಯಗಳು ಮತ್ತವರ ಧಾರ್ಮಿಕ ಕೇಂದ್ರಗಳ ಮೇಲೆ ಧಾಳಿ ಪುನರಾರಂಭವಾಗಿವೆ. ಉದಾರೀಕರಣದ ಆರ್ಥಿಕ ನೀತಿಯೊಂದಿಗೆ ಕೋಮುವಾದದ ಅಜೆಂಡಾವೂ ಜೊತೆಯಲ್ಲೇ ಜಾರಿಯಾಗುತ್ತಿದೆ.

ಈ ಸಂಗತಿಗಳನ್ನು ಜನತೆ ಅರಿಯಬೇಕು. ಕೋಮುವಾದಿಗಳ ಕಾರ್ಯಾಚರಣೆ ಎದುರಿಸುವಲ್ಲಿ ಪ್ರಗತಿಪರ, ಜಾತ್ಯಾತೀತ ಶಕ್ತಿಗಳು ಜಾಗೃತಗೊಳ್ಳಬೇಕು, ಪ್ರತಿರೋಧಿಸಬೇಕು. ಇಲ್ಲವಾದಲ್ಲಿ ಕರ್ನಾಟಕ ಮತ್ತು ಭಾರತದ ಸಮಗ್ರತೆಗೆ, ಸೌಹಾರ್ದತೆಗೆ ಭಾರೀ ಅಪಾಯ ಕಟ್ಟಿಟ್ಟದ್ದು ಎಂಬುದನ್ನು ನೆನಪಿಡಬೇಕು.

ಸದಾನಂದರಿಗೆ ಸ್ಥಾನ 'ಸಂಕಟ' ಜನರಿಗೆ ಸದಾ ಸಂಕಷ್ಟ

ಸಾವಿಲ್ಲದ ಮನೆಯ ಸಾಸಿವೆಯನ್ನು ತಂದು ಕೊಡುವುದು ಎಷ್ಟು ದುರ್ಲಭವೋ ಹಾಗೆಯೇ ಹಗರಣ, ಅಧಿಕಾರದಾಹ, ಭಿನ್ನಮತ–ಕಿತ್ತಾಟಗಳಿಲ್ಲದ ಬಿಜೆಪಿಯನ್ನು ನೋಡುವುದೂ ಅಷ್ಟೇ ಅಸಂಭವ. ಮತ್ತೆ ಅಲ್ಲೀಗ ಕದನ ತಾರಕಕ್ಕೆ ಏರುವ ಎಲ್ಲಾ ಸೂಚನೆಗಳಿವೆ. ಯಾಗ ಮುಗಿಸಿ ಬಂದ ಯಡಿಯೂರಪ್ಪ ಯುದ್ಧ ಘೋಷಿಸಿಯಾಗಿದೆ. ಪಕ್ಷದ ಹೈಕಮಾಂಡನತ್ತ ಅವರ ರಾಯಭಾರಿಗಳ ಓಡಾಟ, ಇಂಗಿತಗಳ ಸಲ್ಲಿಕೆಯೂ ಆಗಿದೆ.

ತನಗೇನು ಬೇಡ, ಪಕ್ಷದ ರಾಜ್ಯ ಅಥವಾ ಕೇಂದ್ರದಲ್ಲಿ ಸ್ಥಾನಗಳು ಬೇಡ, ಏನಿದ್ದರೂ ಅದು ಮುಖ್ಯಮಂತ್ರಿ ಸ್ಥಾನವೇ ಆಗಬೇಕು, ಇಲ್ಲವಾದರೆ ನನ್ನ ದಾರಿ ನನಗೆ ಎಂದು ಯಡಿಯೂರಪ್ಪ ಗುಟುರು ಹಾಕಿ ನಿಂತಿದ್ದಾರೆ. ಹೀಗಾಗಿಯೇ ಯಡಿಯೂರಪ್ಪನವರ ಬಣ ಒಂದಿಷ್ಟು ದೀರ್ಘಾವಧಿಯ ಕಾರ್ಯಸೂಚಿಯನ್ನು ರೂಪಿಸಿದೆ. ಈಗಾಗಲೇ ದೆಹಲಿಯ ನಾಯಕರನ್ನು ಬಿಎಸ್ವೈ ಆಪ್ತ ಸಚಿವೆ ಶೋಭಾ ಕರಂದ್ಲಾಜೆ ಭೇಟಿ ಮಾಡಿ ಬಂದಿದ್ದಾರೆ. ಅದೇ ಹೊತ್ತಿನಲ್ಲಿ ಸಚಿವ ರೇಣುಕಾಚಾರ್ಯ ಚಂಚಲಗಡ ಜೈಲಿನಲ್ಲಿರುವ ಗಾಲಿ ಜನಾರ್ಧನ ರೆಡ್ಡಿಯನ್ನು ಕಾಣಲು ಮುಹೂರ್ತ ನಿಗದಿಪಡಿಸುತ್ತಿದ್ದಾರೆ. ಬಿಎಸ್ವೈ ಜನವರಿ 15ರೊಳಗೆ ಸಿಎಂ ಗಾದಿ ಇತ್ಯರ್ಥ ಮಾಡಿರೆಂದು ಹೈಕಮಾಂಡ್ ಗೆ ತಿಳಿಸಿರುವುದರಿಂದ ನಂತರದ ಬೆಳವಣಿಗೆಗಳೂ ಕುತೂಹಲಕರ!.



ಈ ನಿಯೋಗಗಳಲ್ಲದೇ ರಾಜ್ಯದಲ್ಲಿ ಪಕ್ಷದ ಸಂಘಟನೆಯನ್ನು ಅಂದರೆ ತಮ್ಮ ಬೆಂಬಲಿಗರನ್ನು ಕ್ರೋಢೀಕರಿಸುವ ಪ್ರಯತ್ನಕ್ಕೂ ಮುಂದಾಗಿರುವುದು ವಿಶೇಷ. ಧಾರ್ಮಿಕ, ಸಾಮಾಜಿಕ ಅಲ್ಲದೇ ನಿಷ್ಠ ಶಾಸಕರ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಜನರನ್ನು ಸೇರಿಸುವುದು, ಮುಂದೆ ಅದನ್ನು ತಮ್ಮ ಹಿಂದೆ ಕೊಂಡೊಯ್ಯುವುದು.

ಕಿತ್ತಾಟದ ಈ ಎಲ್ಲಾ ಕಾರಣಗಳಿಂದಾಗಿಯೇ ಕಣ್ಣಿನ ಶಸ್ತ್ರಕ್ರಿಯೆಗೆ ಒಳಗಾದ ಯಡಿಯೂರಪ್ಪನವರನ್ನು ಭೇಟಿ ಮಾಡಲು ಬಂದ ಸಿ.ಎಂ. ಸದಾನಂದಗೌಡರಿಗೆ ಭೇಟಿ ನಿರಾಕರಿಸುತ್ತಾ, ಜಾಗ ಬದಲಿಸಿ ಫಜೀತಿಗೀಡು ಮಾಡಿದ್ದು ಇರುಸು ಮುರುಸಿನ ಪ್ರಸಂಗ.

ಹೀಗಿರುವಾಗಲೂ ವಿಧಾನ ಸಭಾ ಅಧಿವೇಶನ 10 ದಿನಗಳ ಕಾಲ ಈ ತಿಂಗಳ ಕೊನೆಯಲ್ಲಿ ನಡೆಯಲಿದೆ ಎಂಬ ಗೌಡ ರ ಹೇಳಿಕೆ ತನ್ನ ಸ್ಥಾನ ಅಭಾದಿತ, ಯಡಿಯೂರಪ್ಪನವರಿಂದ ಏನು ಆಗಲಾರದು ಎಂದು ತೋರಿಸಿಕೊಳ್ಳುವ ಪ್ರಯತ್ನವಷ್ಟೇ.... ಅದೇನಿದ್ದರೂ ಪಕ್ಷದ ಹೈಕಮಾಂಡ್ ವಿವಾದ ಇತ್ಯರ್ಥಗೊಳಿಸುವುದಾಗಿ ಹೇಳಿದ್ದರೂ ಆತಂಕ ಅವರಿಗೆ ತಪ್ಪಿಲ್ಲ.

ಮೊದಲು ವಿಧಾನಪರಿಷತ್ ಗೆ ಸದಾನಂದಗೌಡರನ್ನು ಆಯ್ಕೆ ಮಾಡದಂತೆ ಸಂಸದರಾಗಿಯೇ ಮುಂದುವರಿಯುವಂತೆ ಒತ್ತಾಯಿಸಿದ ಯಡಿಯೂರಪ್ಪ ನಂತರ ಸಿ.ಎಂ. ಸ್ಥಾನಕ್ಕೆ ರಾಜಿನಾಮೆ ಕೊಡಿಸಿ ತನಗೆ ವಹಿಸಲು ಕೇಳಿದ್ದಿದೆ. ಈ ಎಲ್ಲಾ ಪ್ರಶ್ನೆಗಳನ್ನೂ ಇತ್ಯರ್ಥ ಮಾಡುವ ಶಕ್ತಿ ಹೈಕಮಾಂಡಗೂ ಇಲ್ಲ. ಮೊದಲೇ ಅವರೆಲ್ಲರೂ ಒಂದಿಲ್ಲೊಂದು ಬಗೆಯಲ್ಲಿ ಫಲಾನುಭವಿಗಳು.

ಅಲ್ಲದೇ ಅಲ್ಲಿಯೂ ವಿಪರೀತ ಗುಂಪುಗಾರಿಕೆ, ಕಿತ್ತಾಟ .ಹೀಗೆ ದುರ್ಬಲವಾಗಿರುವ ಹೈಕಮಾಂಡ್ ರಾಜ್ಯದ ಬಿಜೆಪಿಯ ವಿದ್ಯಮಾನಗಳನ್ನು ಸರಿಪಡಿಸುವುದು, ಶಿಸ್ತು ತರುವುದು ದೂರದ ಮಾತು. ಆದ್ದರಿಂದಲೇ ಹಾಗೋ ಹೀಗೋ ಹೀಗೇ ಸಾಗಿ ಹಾಕುವ ಕಸರತ್ತು!

ಇವೆಲ್ಲದರ ಪರಿಣಾಮ ಸರ್ಕಾರದ ಕಾರ್ಯನಿರ್ವಹಣೆ ಸ್ಥಗಿತವಾಗಿದೆ. ಹಗರಣ, ಅಕ್ರಮಗಳನ್ನು ಮುಚ್ಚಿ ಹಾಕಿಕೊಳ್ಳುವ, ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಹೆಸರಲ್ಲಿ ಉಳಿದದ್ದನ್ನು ದೋಚುವುದರಲ್ಲಿಯೇ ಸಂಪುಟ ಮಗ್ನವಾಗಿದೆ. ರಾಜ್ಯದ ಅಭಿವೃದ್ಧಿಗಾಗಿ ದೆಹಲಿಗೆ ಹೋಗದವರು ಭಿನ್ನಮತದ ಕಾರಣಕ್ಕೆ ಸದಾ ದೆಹಲಿಗೆ ಸುತ್ತುತ್ತಿದ್ದಾರೆ. ಜನರ ಅಹವಾಲು ಕೇಳಲು ಪುರುಸೊತ್ತು ಇಲ್ಲದಂತೆ ಬ್ಯುಸಿಯಾಗಿದ್ದಾರೆ. ಸಿ.ಎಂ. ಬದಲಾದರೂ ಸನ್ನಿವೇಶ ಬದಲಾಗಲಿಲ್ಲ ಎಂಬುದೇ ಇಂದಿನ ಸ್ಥಿತಿ. ಆದ್ದರಿಂದ ಯಾವುದಕ್ಕಾಗಿ ಈ ಸರಕಾರ ಅಧಿಕಾರದಲ್ಲಿ ಮುಂದುವರಿಯಬೇಕು.

ಸದಾನಂದರು ಸಿ.ಎಂ.ಆಗಿ ಇನ್ನೂ 6 ತಿಂಗಳು ಪೂರೈಸಿಲ್ಲ. ಆದರೀಗ ಸದಾನಂದರಿಗೆ ಸ್ಥಾನದಲ್ಲುಳಿಯುವ ಸಂಕಟ , ಜನರಿಗೋ ಸದಾ ಸಂಕಷ್ಟ !



ತಾನೊಂದು ಸುಸಂಸ್ಕೃತ, ವಿಭಿನ್ನ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ಸರ್ಕಾರ ಮಹಿಳೆಯರನ್ನು ಹೇಗೆ ನಡೆಸಿಕೊಂಡಿದೆ?

ಇಲ್ಲಿ ಮಹಿಳೆಯರಿಗೆ ಸ್ಥಾನವಲ್ಲಿ?

ಕೆ. ನೀಲಾ

ಕೋಮುವಾದಿ ಬಿಜೆಪಿಗೆ ಎಷ್ಟು ಮುಖಗಳು? ಕರಿನಾಗರ ಹಾವಿಗಿರುವಂತೆ ಎರಡೆರಡು ನಾಲಿಗೆಗಳು. ಭಾರತದ ಸಾರ್ವಭೌಮತೆಯನ್ನು ಕದಡಲು ಪಣ ತೊಟ್ಟು ಅದು ಆಡಿದ ಆಟಗಳೆಲ್ಲ ದೇಶದ್ರೋಹಿ ಆಟಗಳೇ. ಮೊನ್ನೆ ದಿನ ಸಿಂದಗಿಯಲ್ಲಿ ಪಾಕಿಸ್ತಾನ ಧ್ವಜ ಹಾರಿಸಿ ಉದ್ವಿಗ್ನ ವಾತಾವರಣ ಹುಟ್ಟು ಹಾಕಿತು. ಆರಂಭದಲ್ಲಿ ಜನರ ಸಿಟ್ಟು ಮುಸ್ಲಿಂರ ಮೇಲೇ ಇತ್ತು. ಆದರೆ ನೈಜ ತನಿಖೆ ನಡೆದ ಮೇಲೆ ಗೊತ್ತಾಗಿದ್ದು ಈ ಷಡ್ಯಂತ್ರ ಮಾಡಿದ್ದು ಸ್ವತಃ ಶ್ರೀರಾಮ ಸೇನಾ ಸಂಘಟನೆಯವರು. ಪೊಲಿಸರು ಅವರನ್ನು ಬಂಧಿಸಿರುವರು. ಈಗ ಬಿಜೆಪಿಯು ಶ್ರೀರಾಮಸೇನೆಯ ವಿರುದ್ಧ ಮಾತಾಡಬಹುದು. ಆದರೆ ಶ್ರೀರಾಮಸೇನೆ ಸಹ ಕೋಮುವಾದಿ ಸಂಘಟನೆಯೇ. ಮತ್ತು ಅದು ಜಾರು ಮಾಡುವುದು ಬಿಜೆಪಿಯ ಮುಚ್ಚಿಟ್ಟ ಅಜೆಂಡಾ ಮಾತ್ರ. ದೇಶದಾದ್ಯಂತ ಭಯೋತ್ಪಾದನೆ ಉಂಟು ಮಾಡುತ್ತಿರುವುದು ಬಿಜೆಪಿ ಮತ್ತು ಸಂಘಗ್ಯಾಂಗಿನ ಗೂಂಡಾಗಳು ಎಂಬುದು ಈಗ ಮುಚ್ಚಿ ಉಳಿದಿಲ್ಲ.

ಸಂಸ್ಕೃತಿ ಹೀನತೆ

ಅಂತೆಯೇ ಈ ಕೋಮುವಾದಿ ಬಿಜೆಪಿಯು ಎಲ್ಲ ಹಂತದಲ್ಲಿ ಹೊರಗೊಂದು ಒಳಗೊಂದು ಮುಖವಾಡವಿರುವುದನ್ನು ಸಾಬೀತುಗೊಳಿಸಿದೆ. ಮಹಿಳೆಯರ ಬಗ್ಗೆ ಬಹಳ ಗೌರವದಿಂದ ನಡೆದುಕೊಳ್ಳುವುದು ಭಾರತೀಯ ಸಂಸ್ಕೃತಿ ಎಂದು ಹೊರಗೆ ಸಾರಿದ ಬಿಜೆಪಿಯು ಅಧಿಕಾರಕ್ಕೆ ಬಂದಾಗಿಂದಲೂ ಮಹಿಳೆಯರ ವಿಷಯಧಲ್ಲಿ ಅಗೌರವದಿಂದಲೇ ನಡೆದುಕೊಂಡಿದೆ. ಬಿಜೆಪಿಯ ಮಂತ್ರಿ ಮಂಡಲದಲ್ಲಿ ಇರುವ ಬಹಳಷ್ಟು ಮಂತ್ರಿಗಳು ಮಹಿಳೆಯರ ವಿಷಯದಲ್ಲಿ ಅನುಚಿತವಾಗಿ ಮತ್ತು ಕೀಳಾಗಿಯೇ ನಡೆದುಕೊಂಡವರು. ಸರಕಾರ ಬಂದ ಆರಂಭದಲ್ಲಿ ರಘುಪತಿ ಭಟ್ ಎಂಬ ಉಡುಪಿಯ ಶಾಸಕ ತನ್ನ ಹೆಂಡತಿ ಪದ್ಮಪ್ರಿಯಾಳನ್ನು ದೆಹಲಿಯ ಹೊಟೆಲ್ ಒಂದರಲ್ಲಿ ಕೊಲೆ ಮಾಡಿಸಿದ ಆರೋಪ ಹೊತ್ತನು. ಮತ್ತು ವ್ಯವಸ್ಥಿತವಾಗಿ ಪ್ರಕರಣವನ್ನು ಮುಚ್ಚಿ ಹಾಕಲು ಸ್ವತಃ ಗೃಹ ಮಂತ್ರಿಯಾಗಿದ್ದ ವಿ.ಎಸ್.ಆಚಾರ್ಯ ಆಡಳಿತ ಯಂತ್ರವನ್ನು ಬಳಸಿಕೊಂಡು ಇಡೀ ರಾಜ್ಯವೇ ತಲ್ಲಣಿಸುವಂತೆ ಮಾಡಲಾಯಿತು. ಮುಂದಕ್ಕೆ ಅತ್ಯಂತ ನೀಚ ವ್ಯಕ್ತಿತ್ವ ಬಯಲಾದದ್ದು ರೇಣುಕಾಚಾರ್ಯನದ್ದು. ಭವ್ಯ ಭಾರತೀಯ ಸಂಸ್ಕೃತಿಯ ವಕ್ತಾರರಂತೆ ಮಾತಾಡುವ ಬಿಜೆಪಿಯ ರೇಣುಕಾಚಾರ್ಯನು ನರ್ಸ್ ಒಬ್ಬಳ ಜೊತೆ ಬಹಿರಂಗದಲ್ಲಿಯೇ ಸಂಬಂಧವಿಟ್ಟುಕೊಂಡು ಆನಂತರ ಅವಳನ್ನು ಕೊಲೆ ಮಾಡುವುದಾಗಿ ಧಮಕಿ ಹಾಕಿದನು. ತನ್ನ ಅನೈತಿಕ ವರ್ತನೆಗೆ ಕಿಂಚಿತ್ತು ನಾಚಲಿಲ್ಲ, ಮಾತ್ರವಲ್ಲ ಬಿಜೆಪಿಯು ರೇಣುಕಾಚಾರ್ಯನ ಬೆನ್ನು ಕಟ್ಟಿತು. ಇನ್ನು ಅತ್ಯಂತ ದ್ರೋಹದ ನಡವಳಿಕೆ ಬಯಲಿಗೆ ಬಂದಿದ್ದು ಹರತಾಳ ಹಾಲಪ್ಪನೆಂಬ ಮಂತ್ರಿಯದ್ದು. ತನ್ನ ಗೆಳೆಯನ ಹೆಂಡತಿಯ ಮೇಲೆ ಅತ್ಯಾಚಾರವೆಸಗಿ ಜೈಲಿಗೆ ಹೋದನು. ಇದರಿಂದ ಬಿಜೆಪಿಯು ಕೊಂಚವಾದರೂ ತಲೆತಗ್ಗಿಸಿ ತನ್ನ ಮಹಿಳಾವಿರೋಧಿ ನಡೆಯನ್ನು ತಿದ್ದಿಕೊಳ್ಳಲಿಲ್ಲ. ಬದಲಿಗೆ ಮಾಡಿದ್ದೇನೆಂದರೆ ಅಧಿಕಾರ ಉಳಿಸಿಕೊಳ್ಳಲು ಗಣಿಗಳ್ಳರೊಂದಿಗೆ ಪಾಲು ಹಂಚಿಕೊಂಡು ತಮ್ಮ ಕ್ಯಾಬಿನೆಟಿನಲ್ಲಿರುವ ಏಕೈಕ ಮಹಿಳಾ ಮಂತ್ರಿ ಶೋಭಾ ಕರಂದ್ಲಾಜೆಯನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಿದರು. ಎಬಿವಿಪಿ ಮೂಲಕ ರಾಜಕೀಯ ಪ್ರವೇಶಿಸಿದ್ದ ಶೋಭಾ ಪಕ್ಷದೊಳಗಿನ ಮಹಿಳಾವಿರೋಧಿ ಧೋರಣೆಯನ್ನು ಬಯಲಿಗೆಳೆಯದೆ ತನ್ನನ್ನು ತೆಗೆದು ಹಾಕಿದ್ದು ಯಾಕೆ ಎಂದು ಕಾರಣ ಕೇಳಿ ಹಲುಬಿದಳು ಮಾತ್ರ. ಶೋಭಾಗೂ ಗೊತ್ತು, ರಾಮಾಯಣದ ಪುರುಷೋತ್ತಮ ಶ್ರೀರಾಮಚಂದ್ರ ತುಂಬಿದ ಬಸುರಿ ಹೆಂಡತಿಯನ್ನು ಕಂಡವರ ಮಾತು ಕೇಳಿ ಕಾಡಿಗೆ ಅಟ್ಟುವಾಗ ಸೀತೆಗೆ ಕಾರಣವೇ ಹೇಳಿರಲಿಲ್ಲ. ಮಾಡಿದ ತಪ್ಪಾದರೂ ಏನು ಎಂದು ಸೀತೆ ಗೋಗರೆದಳು. ಆದರೂ ಶ್ರೀರಾಮಚಂದ್ರ ಪೂಜನೀಯ ಎಂದು ವಾದಿಸುವರು. ಯಾಕೆಂದರೆ ಕಾರಣವಿಲ್ಲದೆ ಸೀತೆಯನ್ನು ಕಾಡಿಗಟ್ಟಿರುವುದಕ್ಕೆ! ಎಲ್ಲವೂ ಅಧಿಕಾರಕ್ಕಾಗಿ.....! ಶೋಭಾ ತುಟಿಪಿಟ್ಟೆನ್ನದೆ ಯಡಿಯೂರಪ್ಪನವರ ನೆರಳಾಗಿ ಮತ್ತೆ ಅಧಿಕಾರ ಅನುಭವಿಸುತ್ತಿರುವರು. ಇದು ಮಹಿಳೆಯರನ್ನು ಗೌರವದಿಂದ ಕಾಣುವ ಪಕ್ಷವೇ? ಯಾರಿಗೆ ಗೊತ್ತಿಲ್ಲ, ಬಿಜೆಪಿಯದ್ದು ಮನುವಾದಿ ಪಕ್ಷವೆಂಬುದು.....? ಮನುಸ್ಮೃತಿಯಲ್ಲಿ ಬರುವ ಶ್ಲೋಕಗಳು ಕೇಳಿದರೆ ನಖಶಿಖಾಂತ ಸಿಟ್ಟು ಬರುವುದು ಯಾಕೆಂದರೆ, ಅದರಲ್ಲಿ ಮಹಿಳೆಯನ್ನು ಚಂಚಲೆ, ಜನ್ಮಜಾತೆ ವ್ಯಭಿಚಾರಿ, ಕುಟಿಲೆ ಎಂದೆಲ್ಲ ಜರೆಯಲಾಗಿದೆ. ಅವಳೊಂದು ನಡೆದಾಡುವ ನರಕ, ಸ್ಮಶಾನ ಎಂದು ಒತ್ತಿ ಹೇಳಲಾಗಿದೆ. ಇಂಥ ಸನಾತನ ಮನುಸ್ಮೃತಿಯನ್ನು ಒಪ್ಪಿ ಅಪ್ಪಿ ಜಾರಿ ಮಾಡುವ ಬಿಜೆಪಿಯು ಮಹಿಳೆಯರ ಪರವಾಗಿರಲು ಹೇಗೆ ಸಾಧ್ಯ?

ಗೌರವವೆಲ್ಲಿ?

ಬಿಜೆಪಿ ಸರಕಾರದುದ್ದಕ್ಕೂ ಮಹಿಳೆಯರ ಕುರಿತು ಅದರ ನಡೆಯನ್ನು ಗಮನಿಸಬಹುದು.



ಮಂಗಳೂರು ಪಬ್ ಆವರಣದಲ್ಲಿ ದಾಳಿ

ಮಂಗಳೂರಿನ ಪಬ್ ಆವರಣದಲ್ಲಿ ಒಂದರಲ್ಲಿ ಮಹಿಳೆಯರ ಮೇಲೆ ಹಲ್ಲೆ ಮಾಡಲಾಯಿತು. ಆ ಮಹಿಳೆಯರು ಭಾರತೀಯ ಸಂಸ್ಕೃತಿಯ ಘನತೆಗೆ ಧಕ್ಕೆ ಬರುವುದಂತೆ! ಮಹಿಳೆಯರ ಮೇಲೆ ನಡುರಸ್ತೆಯಲ್ಲಿ ಹಲ್ಲೆ ಮಾಡಿದರೆ ಅದು ಘನತೆಯ ನಡತೆ!! ಹೇಗಿದೆ ಮಹಿಳೆಯರ ಗೌರವದ ಬಗ್ಗೆ ಅವರ ವಾದ?

ದಾಳಿಗಳೋ ದಾಳಿಗಳು...

ಹಾಗೆ ನೋಡಿದರೆ ರಾಜ್ಯದುದ್ದಕ್ಕೂ ತಮ್ಮ ಹಿಂದೂತ್ವ ಅಜೆಂಡಾ ಜಾರಿ ಮಾಡುವ ಗೂಂಡಾ ಗ್ಯಾಂಗನ್ನು ಛೂ ಬಿಟ್ಟು ಚರ್ಚಗಳ ಮೇಲೆ ಧಾಳಿ ಮಾಡಿಸಿದರು. ಯಾವುದೇ ಪ್ರದೇಶದಲ್ಲಿ ಕೋಮುಧಾಳಿಗಳು ನಡೆದರೆ ಅದರ ನೇರ ದುಷ್ಪರಿಣಾಮ ಮಹಿಳೆ ಮತ್ತು ಮಕ್ಕಳ ಮೇಲಾಗುವುದು. ನಿರ್ಭಯದಿಂದ ಬದುಕು ಸಾಗಿಸಲು ಸಾಧ್ಯವಾಗುವುದಿಲ್ಲ. ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕ್ರಿಶ್ಚನ್ ಧರ್ಮಕ್ಕೆ ಮತಾಂತರವಾದ ಮಹಿಳೆಯನ್ನು ಬಸ್ ಸ್ಟ್ಯಾಂಡಿನಲ್ಲಿ ಮಾರಣಾಂತಿಕ ಹಲ್ಲೆ ಮಾಡಿದ್ದು ಭಜರಂಗಿಗಳು. ಇಡೀ ಕರಾವಳಿ ಉದ್ದಕ್ಕೂ ಮಹಿಳೆಯರು ಭಯದಲ್ಲಿ ಬದುಕುವಂತ ತಲ್ಲಣದ ವಾತಾವರಣ ಸೃಷ್ಟಿಯಾಗಿದೆ. ಕಾಲೇಜಿನ ವಿಧ್ಯಾರ್ಥಿನಿಯರು ಇತರ ಕೋಮು ವಿಧ್ಯಾರ್ಥಿಗಳೊಂದಿಗೆ ಮಾತಾಡುವಂತಿಲ್ಲ. ಮುಸ್ಲಿಂ ವಿಧ್ಯಾರ್ಥಿನಿಯರು ಬೂರ್ಖಾ ಧರಿಸುವಂತಿಲ್ಲ. ಕಾಲೇಜೊಂದರಲ್ಲಿ ಮುಸ್ಲಿಂ ವಿಧ್ಯಾರ್ಥಿನಿಗೆ ಕಿರುಕುಳ ಕೊಟ್ಟಿರುವುದು ರಾಜ್ಯದಲ್ಲಿ ಭಯ ಉಂಟಾಗುವಂತಾಯಿತು. ಗೋಹತ್ಯೆ ನಿಷೇಧ ಕಾನೂನು ಮಾಡಲು ಹೊರಟ ಬಿಜೆಪಿಗೆ ಇರುವ ಮುಖ್ಯ ಉದ್ದೇಶವೆಂದರೆ ಅಲ್ಪಸಂಖ್ಯಾತರು ದಲಿತರ ಮೇಲೆ ಎಲ್ಲ ರೀತಿಯಿಂದ ಧಾಳಿ ಮಾಡುವುದೇ ಆಗಿತ್ತು. ಆಹಾರದ ಹಕ್ಕು ಮಾತ್ರವಲ್ಲ, ತನ್ಮೂಲಕ ಸಾಂಸ್ಕೃತಿಕವಾಗಿಯೂ ಹಿಂದೂತ್ವದ ಅಜೆಂಡಾ ಹೇರುವುದಾಗಿತ್ತು. ಅದರ ನೇರ ದುಷ್ಪರಿಣಾಮಕ್ಕೆ ಭವಿಷ್ಯದಲ್ಲಿ ಮಹಿಳೆಯರೇ ಬಲಿಯಾಗುವರು. ರಾಜ್ಯಪಾಲರು ಅಂಕಿತ ಹಾಕಲಿಲ್ಲ ಎಂಬುದರಿಂದ ಅಂಥದೊಂದು ಅಪಾಯಕಾರಿ ಕಾಯ್ದೆ ಬರಲಿಲ್ಲ.

ಈ ನಡುವೆ ದಲಿತ ಮಹಿಳೆಯರ ಮೇಲೆ ದೌರ್ಜನ್ಯಗಳ ಪ್ರಮಾಣ ಹೆಚ್ಚಿದೆ. ಚಿತ್ರದುರ್ಗದಲ್ಲಿ ದಲಿತ ಮಹಿಳೆಯೊಬ್ಬಳನ್ನು ಬೆತ್ತಲೇ ಮೆರವಣಿಗೆ ಮಾಡಲಾಯಿತು. ಮಲ ಹೊರುವ ಅಮಾನವೀಯ ಪದ್ಧತಿ ತಡೆಗಟ್ಟಲು ಸರಕಾರ ಕ್ರಮ ಕೈಗೊಳ್ಳಲಿಲ್ಲ. ಈ ಕುಟುಂಬಗಳು ಮನುಷ್ಯರಂತೆ ಬದುಕು ನಡೆಸುವ ಹಕ್ಕೊತ್ತಾಯವಿಟ್ಟು ಮಲ ಸುರಿದುಕೊಂಡು ಹೋರಾಟ ನಡೆಸುವಂತಾಯಿತು. ಈ ಕುಟುಂಬದ ಮಹಿಳೆಯರ ಸ್ಥಿತಿಗತಿ ಅತ್ಯಂತ ದಯನೀಯ ಸ್ಥಿತಿಯಲ್ಲಿರುವುದು ಸರಕಾರ ಗಮನಿಸಲೇ ಇಲ್ಲ.

ದಲಿತ ಮಹಿಳೆಯರು ಬಹುದೊಡ್ಡ ಸಂಖ್ಯೆಯಲ್ಲಿರುವುದು ಗ್ರಾಮೀಣ ಭಾಗದ ಕೃಷಿ ಕೂಲಿಕಾರರಾಗಿ. ತುಂಡು ಭೂಮಿಯಿಲ್ಲದ ಇವರು ಅವರಿವರ ಹೊಲ ಗದ್ದೆಗೆ ಹೋಗಿ ಕೂಲಿ ಮಾಡಿ ತಂದ ಕನಿಷ್ಠ ಹಣದಲ್ಲಿ ಜೀವನ ಸಾಗಿಸುತ್ತಿರುವರು. ಅದೂ ಗಂಡಸರಿಗಿಂತ ಕಡಿಮೆ ಕೂಲಿ. ಗ್ರಾಮದ ಅಭಿವೃದ್ಧಿ ಮತ್ತು ಗ್ರಾಮದ ದುಡಿಯುವವರ ಕೈಗೆ ಕೆಲಸ ಕೊಡುವ ಕಾಯ್ದೆಯಾದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲ ಕಡೆ ಸಮರ್ಪಕವಾಗಿ ಜಾರಿ ಮಾಡಿದಲ್ಲಿ ಈ ಮಹಿಳೆಯರಿಗೆ ಕೆಲಸ ಸಿಗುತಿತ್ತು. ಆದರೆ ಬೂರ್ಜ್ವಾ ಪಕ್ಷಗಳು ರೇಗಾದ ಹಣವನ್ನು ಕೊಳ್ಳೆ ಹೊಡೆದು ವ್ಯಾಪಕ ಭ್ರಷ್ಟಾಚಾರ ನಡೆಸಿದವು. ಮತ್ತು ಈ ಬಡ ರೈತ ಹಾಗೂ ಕೃಷಿಕೂಲಿಕಾರ್ಮಿಕ ಮಹಿಳಯರನ್ನು ಬಡತನದ ಕೂಪದಲ್ಲಿಯೇ ತಳ್ಳಿದವು. ಚಳುವಳಿ ನಡೆಸಿ ಕೆಲವು ಕಡೆ ಕೆಲಸ ಪಡೆದ ಉದಾಹರಣೆಗಳೂ ಇವೆ. ಆದರೆ ಆ ಜನರು ಕೆಲಸ ಮಾಡುವ ಸ್ಥಳದಲ್ಲಿ ಕೊಡಬೇಕಾದ ಸೌಲಭ್ಯಗಳನ್ನು ಮತ್ತು ಸಕಾಲದಲ್ಲಿ ಕೂಲಿಯನ್ನು ಎಲ್ಲಿಯೂ ಕೊಡಲಿಲ್ಲ. ಇದರಿಂದ ಮಹಿಳಾ ಕಾರ್ಮಿಕರು ಕಷ್ಟ ಅನುಭವಿಸಿರುವರು.

ಸರಕಾರದ ಧೋರಣೆಯು ಮಹಿಳಾ ವಿರೋಧಿಯಾಗಿಯೇ ಇರುವುದಕ್ಕೆ ಸರಿಯಾದ ನಿದರ್ಶನವೆಂದರೆ ಕಳೆದ ಎರಡು ವರ್ಷಗಳ ಹಿಂದೆ ನೆರೆ ಹಾವಳಿಯ ಸಂದರ್ಭ. ಉತ್ತರ ಕರ್ನಾಟಕದ 14 ಜಿಲ್ಲೆಗಳು ನೆರೆಗೆ ತತ್ತರಿಸಿದವು. ಗ್ರಾಮಗಳೇ ಕೊಚ್ಚಿಕೊಂಡು ಹೋದವು. ಆಗ ಮಹಿಳೆಯರು ಮಕ್ಕಳು ಮತ್ತು ವೃದ್ಧರು ಅತ್ಯಂತ ಯಾತನೆಯನ್ನು ಅನುಭವಿಸಿದರು. ಸ್ಥಳಾಂತರ ಮಾಡಿದ ಪ್ರದೇಶದಲ್ಲಿ ನೀರು, ಶೌಚಾಲಯ,

ಪುಟ 12 ಕ್ಕೆ

ರೈತರು, ಕೂಲಿಕಾರರು, ಕಾರ್ಮಿಕರು, ದುಡಿಯುವ ಜನರ ಬಗೆಗೆ ಕಿಂಚಿತ್ತು ಕಾಳಜಿ ಇಲ್ಲದ ರಾಜ್ಯ ಬಿಜೆಪಿ ಸರ್ಕಾರದಲ್ಲಿ ನಿಜಕ್ಕೂ ರಾಜ್ಯದಲ್ಲಿ ಒಂದು ಸರ್ಕಾರ ಎಂಬುದು, ಜನರ ಕಷ್ಟ ಸುಖಗಳನ್ನು ಕೇಳುವ ಆಡಳಿತ ಎಂಬುದೊಂದು ಇದೆಯೇ ಎಂಬ ಪ್ರಶ್ನೆ ಎದುರಾಗಿದೆ. ಆದರೆ ಭ್ರಷ್ಟಾಚಾರ, ಹಗರಣಗಳನ್ನು ನಡೆಸುವುದರಲ್ಲಿ ಬಿಜೆಪಿಗರಿಗೆ ಸರಿ ಸಾಟಿಯೇ ಇಲ್ಲ ಎನ್ನುವುದೂ ಅಷ್ಟೇ ನಿಜ.

ಜನರ ಪಾಲಿಗೆ ಇಲ್ಲದ ಸರ್ಕಾರ ಮಿತಿ ಮೀರಿದೆ ಹಗರಣ ಭ್ರಷ್ಟಾಚಾರ

ಜಿ.ವಿ. ಶ್ರೀರಾಮರೆಡ್ಡಿ

ಜೆಡಿ(ಎಸ್) ಪಕ್ಷದ 'ವಚನ ಭ್ರಷ್ಟತೆ''ಯಿಂದ ಉಂಟಾದ ಅನುಕಂಪ ಮತ್ತು ಲಿಂಗಾಯಿತ ಜನಾಂಗದವರಿಗೆ ಉದ್ದೇಶ ಪೂರ್ವಕ ಮುಖ್ಯಮಂತ್ರಿ ಸ್ಥಾನವನ್ನು ನಿರಾಕರಿಸಿ ವಂಚಿಸಿದರು ಎಂಬ ಕಾರಣಕ್ಕೆ 2008ರ ಮೇ ತಿಂಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಶಾಸನ ಸಭೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರ ಹೊಮ್ಮಿದ ಬಿ.ಜೆ.ಪಿ. ಪಕ್ಷಕ್ಕೆ ಸ್ಪಷ್ಟ ಬಹುಮತವಿರಲಿಲ್ಲ. ಆರು ಜನ ಪಕ್ಷೇತರ ಶಾಸಕರ ಬೆಂಬಲದಿಂದ 2008 ಮೇ ತಿಂಗಳು 28ನೇ ತಾರೀಖು ಅಧಿಕಾರಕ್ಕೆ ಬಂದ ಯಡಿಯೂರಪ್ಪ ನೇತೃತ್ವದ ಬಿ.ಜೆ.ಪಿ. ಸರ್ಕಾರ ಮೂರುವರೆ ವರ್ಷಗಳಲ್ಲಿ ದೇಶದ ಯಾವುದೇ ರಾಜ್ಯದಲ್ಲಿ ಎಂದೂ ಕಂಡರಿತದಂತಹ ರೀತಿಯಲ್ಲಿ ಇಡೀ ದೇಶವೆ ಅಘಾತಗೊಂಡು ನೋಡುವಷ್ಟು ಬ್ರಹ್ಮಾಂಡ ಭ್ರಷ್ಟಾಚಾರವನ್ನು ನಡೆಸಿ ಕಡೆಗೆ ಯಡಿಯೂರಪ್ಪ ರಾಜಿನಾಮೇ ಕೊಟ್ಟಿದ್ದಷ್ಟೇ ಅಲ್ಲದೆ ಭೂ ಹಗರಣದ ಆರೋಪದಲ್ಲಿ ಜೈಲು ಪಾಲಾದ ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ ಎಂಬ 'ಖ್ಯಾತಿ'ಗೆ ಒಳಗಾದರು. ಯಡಿಯೂರಪ್ಪನವರ ನಂತರ 2011 ಆಗಸ್ಟ್ 3 ರಂದು ಡಿ.ವಿ. ಸದಾನಂದಗೌಡ ಅಧಿಕಾರಕ್ಕೆ ಬಂದರು. ಮುಂದಿನ ಮೇ 28ಕ್ಕೆ ಬಿ.ಜೆ.ಪಿ. ನೇತೃತ್ವದ ರಾಜ್ಯ ಸರ್ಕಾರಕ್ಕೆ 4 ವರ್ಷಗಳು ಪೂರೈಸುತ್ತದೆ. ಈ ನಾಲ್ಕು ವರ್ಷಗಳ ಬಿ.ಜೆ.ಪಿ.ಅಧಿಕಾರಾವಧಿಯಲ್ಲಿ ಒಂದೇ ಒಂದು ದಿವಸ ಪರಿಣಾಮಕಾರಿ ಆಡಳಿತ ನಡೆಸಲಿಲ್ಲ. ಪ್ರಜಾಪ್ರಭುತ್ವದ ಮತ್ತು ಸಂಸದೀಯ ವ್ಯವಸ್ಥೆಯ ಮೇಲೆ ಫ್ಯಾಸಿಸ್ಟ್ ರೀತಿ ಆಕ್ರಮಣವನ್ನು ನಡೆಸಿ ಹುಟ್ಟಿದ ಅಕ್ರಮ ಸಂತಾನವೇ ಈ .ಬಿ.ಜೆ.ಪಿ. ಸರ್ಕಾರ.

ರೈತರ ಕೊಲೆಯಿಂದ ಆರಂಭ

2008ರ ಮೇ ತಿಂಗಳು 28 ರಂದು ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರ ಸ್ವೀಕರಿಸಿದ ಯಡಿಯೂರಪ್ಪನ ಸರ್ಕಾರ ಒಂದು ತಿಂಗಳ ಒಳಗಾಗಿಯೇ ಹಾವೇರಿಯಲ್ಲಿ ರೈತರ ಮೇಲೆ ಗುಂಡು ಹಾರಿಸಿ ಇಬ್ಬರು ರೈತರನ್ನು ಕೊಲೆ ಮಾಡಿದ ದಿನದಿಂದ ಪ್ರಾರಂಭವಾಗಿ ಯಡಿಯೂರಪ್ಪ ಅಧಿಕಾರ ಬಿಡುವ ದಿನದವರೆವಿಗೂ ರೈತರನ್ನು ವಂಚಿಸಿ ಕೊಳ್ಳೆ ಹೊಡೆದು ಅವರು ಸಾವಿರಾರು ಎಕರೆ ಭೂಮಿಯನ್ನು ದೋಚಿ ಇಡೀ ಕೃಷಿರಂಗವನ್ನೇ ದಿವಾಳಿ ಎಬ್ಬಿಸಿಬಿಟ್ಟಿತು. ಇದರ ಪರಿಣಾಮವಾಗಿ ಬಿ.ಜೆ.ಪಿ. ಅಧಿಕಾರದ ಅವಧಿಯಲ್ಲಿ 360 ಜನ ರೈತರು ಆತ್ಮಹತ್ಯೆ ಮಾಡಿ ಕೊಂಡರು.

ಬಿ.ಜೆ.ಪಿ. ಅಧಿಕಾರಾವಧಿಯ ಉದ್ದಕ್ಕೂ ಪಕ್ಷ ಮತ್ತು ಸರ್ಕಾರದಲ್ಲಿ ಪ್ರತಿ ದಿನ ಒಂದು ರೀತಿ ಬಿನ್ನಮತ. ಸ್ವತಃ ಯಡಿಯೂರಪ್ಪನ ಸರ್ಕಾರವೇ ಎರಡು ಸಂದರ್ಭಗಳಲ್ಲಿ ಇನ್ನೇನು ಸರ್ಕಾರ ಬಿದ್ದೇ ಹೋಯಿತು ಎಂಬ ಪರಿಸ್ಥಿತಿ ನಿರ್ಮಾಣವಾಗಿತ್ತು. ಸತತ ಗುಂಪುಗಾರಿಕೆಯಿಂದ ಪ್ರತಿದಿವಸ ಸರ್ಕಾರ ಅತಂತ್ರದ ಸ್ಥಿತಿಯಲ್ಲೆ ಬದುಕ ಬೇಕಾಯ್ತು. ಇದರಿಂದಾಗಿ ಆಡಳಿತ ಯಂತ್ರದಲ್ಲಿ ನಿಷ್ಕ್ರಿಯತೆ ಮತ್ತು ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿ ಹೋಯಿತು.

ಲೋಕಾಯುಕ್ತ ಸಂತೋಷ ಹೆಗ್ಗಡೆಯವರು ಗಣಿ ಅದಿರಿನ ಅಕ್ರಮಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ಮಂತ್ರಿಗಳು ಒಟ್ಟು 787 ಜನ ಉನ್ನತ ಮಟ್ಟದ ಅಧಿಕಾರಿಗಳೇ ಭಾಗಿಯಾಗಿದ್ದಾರೆಂದು ಹೇಳಿದ್ದಾರೆಂದರೆ ಆಡಳಿತ ಯಂತ್ರದ ಭ್ರಷ್ಟಾಚಾರದ ವಿರಾಟ್ ಸ್ವರೂಪ ಗೊತ್ತಾಗುತ್ತದೆ. ಇನ್ನು ಈಗಾಗಲೆ ಇಬ್ಬರು ಮಂತ್ರಿಗಳು, ಇಬ್ಬರು ಶಾಸಕರು ಜೈಲಿಗೆ ಹೋಗಿ ಜಾಮೀನಿನ ಮೇಲೆ ವಾಪಸ್ಸು ಬಂದಿದ್ದಾರೆ. ಒಬ್ಬ ಮಂತ್ರಿ ಈಗಲೂ ಜೈಲಿನಲ್ಲಿ ಇದ್ದಾರೆ. ಇನ್ನು ಮೂರು ಜನ ಮಂತ್ರಿಗಳ ಮೇಲೆ ಎಫ್.ಐ.ಆರ್. ದಾಖಲಾಗಿದೆ. ಇನ್ನು ಇಬ್ಬರು ಶಾಸಕರ ಮೇಲೆ ಎಫ್.ಐ.ಆರ್.ಸಲ್ಲಿಸಿದ್ದಾರೆ. ಇನ್ನೂ ನಾಲ್ಕೈದು ಜನ ಜೈಲಿಗೆ ಹೋಗುವುದಕ್ಕೆ ಕ್ಯೂನಲ್ಲಿ ನಿಂತಿದ್ದಾರೆ. ಇಷ್ಟು ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿರುವ ಸರ್ಕಾರದಿಂದ ರಾಜ್ಯ ಮತ್ತು ರಾಜ್ಯದ ಜನತೆ ಏನನ್ನು ನೀರಿಕ್ಷಿಸಲು ಸಾಧ್ಯ ? ದಿನ ಬೆಳಗಾದರೆ ರಾಜ್ಯದ ಒಂದಲ್ಲಾ ಒಂದು ಕಡೆ ಬಿ.ಜೆ.ಪಿ ಮತ್ತು ಸಂಘ ಪರಿವಾರ ಅಲ್ಪಸಂಖ್ಯಾತರ ಮೇಲೆ ದಾಳಿ, ಗೂಂಡಾಗಿರಿ, ಕೊಲೆಯಂತಹ ಹೇಯಕೃತ್ಯಗಳನ್ನು ನಡೆಸಿ ಅಲ್ಪಸಂಖ್ಯಾತರಲ್ಲಿ ಅಭದ್ರತೆ ಮತ್ತು ಆತಂಕಗಳನ್ನು ಉಂಟುಮಾಡಿ ಪ್ರತ್ಯೇಕವಾಗಿ ಕರಾವಳಿ ಜಿಲ್ಲೆಗಳಲ್ಲಿ ಕೋಮುಶಕ್ತಿಗಳ ಅಟ್ಟಹಾಸ ಮತ್ತು ದಬ್ಬಾಳಿಕೆಗಳಿಗೆ ತಡೆಯೆ ಇಲ್ಲದಂತೆ ನಡೆಸುತ್ತಿದ್ದಾರೆ. ಬಿ.ಜೆ.ಪಿ ಮತ್ತು ಸಂಘಪರಿವಾರದ ಕಾರ್ಯಕರ್ತರು ಚರ್ಚುಗಳ ಮೇಲೆ ಪ್ರಾರಂಭ ಮಾಡಿದ ದಾಳಿಗಳೂ ಇಂದಿಗೂ ಅವ್ಯಾಹತವಾಗಿ ನಡೆಯುತ್ತಲೇ ಇವೆ. ಈ ದಾಳಿಗಳ ಬಗ್ಗೆ ತನಿಖೆ ಮಾಡಲು ನೇಮಿಸಿದ್ದ ನ್ಯಾಯ ಮೂರ್ತಿ ಸೋಮಶೇಖರ್ ಅಯೋಗ ಬಿ.ಜೆ.ಪಿ ಮತ್ತು ಸಂಘಪರಿವಾರಕ್ಕೆ ಕ್ಲೀನ್‌ಚಿಟ್ ಕೊಟ್ಟೇಬಿಟ್ಟಿತು ಎಂದರೆ ಸರ್ಕಾರವನ್ನು, ಆಡಳಿತ ಯಂತ್ರವನ್ನು ಅಲ್ಲದೇ ನ್ಯಾಯಾಂಗವನ್ನು ಭ್ರಷ್ಟಗೊಳಿಸಿ ಬಿಟ್ಟಿತು.

ದಿವಾಳಿಯೆದ್ದು?

ಇನ್ನು ಆರ್ಥಿಕವಾಗಿ ರಾಜ್ಯವನ್ನು ದಿವಾಳಿ ಎಬ್ಬಿಸಲಾಗಿದೆ. ರಾಜ್ಯದಲ್ಲಿ ಕೈಗಾರಿಕಾ ಮತ್ತು ಕೃಷಿವಲಯಗಳಲ್ಲಿ ಉತ್ಪಾದನೆ ಪ್ರತಿವರ್ಷ ಕುಸಿಯುತ್ತಾ ಬಂದು ಈ 2010-11 ನೇ ವರ್ಷಕ್ಕೆ ಕ್ರಮವಾಗಿ 2.6 ಮತ್ತು 1.4ಕ್ಕೆ ಕುಸಿದಿದೆ ಇದರಿಂದಾಗಿ ಕೈಗಾರಿಕಾ ಉತ್ಪನ್ನದ ಪ್ರಮಾಣ ಕುಸಿದು ಒಂದು ಕಡೆ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಮತ್ತು ನಿರುದ್ಯೋಗ ಸಮಸ್ಯೆ ಪ್ರಮಾಣ ಹೆಚ್ಚುತ್ತಿದೆ. ಆದೇ ರೀತಿಯಲ್ಲಿ ಕೃಷಿರಂಗದ ಉತ್ಪಾದನೆ ಕುಸಿತದಿಂದಾಗಿ ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನಿಗದಿ ಇಲ್ಲದ



ಕಾರಣ ಉತ್ಪಾದನೆ ವೆಚ್ಚ ವಿಪರೀತವಾಗಿ ಏರಿ ರೈತರು ದಿವಾಳಿ ಆಗುತ್ತಿರುವುದರ ಪರಿಣಾಮ ಒಂದು ಕಡೆ ಕೃಷಿಯ ಉತ್ಪಾದನೆ ಕಡಿಮೆ ಆಗಿ ಸಾವಿರಗಟ್ಟಲೇ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ವ್ಯವಸಾಯವನ್ನು ಬಿಟ್ಟು ನಗರಗಳ ಕಡೆ ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದಾರೆ. ಒಂದು ಕಡೆ ರೇಷ್ಮೆ ಬೆಳೆಯುವ ರೈತರು ಕಬ್ಬು ಬೆಳೆಗಾರರು, ತೊಗರಿ ಬೆಳೆಗಾರರು ಅವರ ಉತ್ಪನ್ನಗಳ ಬೆಲೆ ಕುಸಿದು ಕಂಗಾಲಾಗಿದ್ದಾರೆ. ಇದು ಸಾಲದಂತೆ ಕೃಷಿ ಭೂಮಿಯನ್ನು ವಶಪಡಿಸಿಕೊಂಡು ದೇಶಿಯ ಮತ್ತು ವಿದೇಶಿಯ ಬಂಡವಾಳಗಾರರಿಗೆ ಉಡುಗೊರೆ ಕೊಡಲು ಕೃಷಿಯಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಿ ಲಕ್ಷಾಂತರ ಎಕರೆ ಭೂಮಿಯನ್ನು ರಿಯಲ್ ಎಸ್ಟೇಟ್ ದಂಧೆ ಮಾಡಲು ದಳ್ಳಾಳಿಗಳಿಗೆ ಹಸ್ತಾಂತರ ಮಾಡಲು ಹೊರಟಿದೆ. ಕೃಷಿಯಲ್ಲಿ ಬಂಡವಾಳ ಹೂಡಿಕೆಯ ಸಮಾವೇಶದಲ್ಲಿ ಲಕ್ಷಗಟ್ಟಲೆ ಹಣ ರಾಜ್ಯಕ್ಕೆ ಹರಿದು ಬರುತ್ತದೆ. ಎಂಬ ಭ್ರಮೆಯನ್ನು ಹುಟ್ಟಿಸಿದೆ. ಇದೇ ರೀತಿಯಲ್ಲಿ ಯಡಿಯೂರಪ್ಪನ ಸರ್ಕಾರ ಕೈಗಾರಿಕೆಯಲ್ಲಿ ಬಂಡವಾಳ ಹೂಡುವ ಜಾಗತಿಕ ಬಂಡವಾಳ ಹೂಡಿಕೆಯ ಸಮಾವೇಶವನ್ನು ನಡೆಸಿ 5 ಲಕ್ಷ ಕೋಟಿಗಳ ಬಂಡವಾಳ ಹರಿದು ಬರುತ್ತದೆ ಮತ್ತು ಲಕ್ಷಗಟ್ಟಲೆ ಉದ್ಯೋಗವಕಾಶಗಳು ಸೃಷ್ಟಿ ಆಗುತ್ತದೆ ಎಂಬ ಭ್ರಮೆಯನ್ನು ಹುಟ್ಟಿಸಿತು. ಆದರೆ ಕೈಗಾರಿಕಾ ರಂಗಕ್ಕಾಗಲೀ ಕೃಷಿ ರಂಗಕ್ಕಾಗಲೀ ಯಾವ ಬಂಡವಾಳವು ಹರಿದು ಬರಲಿಲ್ಲ. ಲಕ್ಷಗಳು ಬಿಡಿ ಸಾವಿರ ಉದ್ಯೋಗಳಾದರೂ ಸೃಷ್ಟಿಯಾಗಲಿಲ್ಲ.

ಇಲ್ಲವಾದ ಉದ್ಯೋಗ ಖಾತ್ರಿ

ಇನ್ನು ರೈತರ ಹೆಸರಿನಲ್ಲಿ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದ ಸರ್ಕಾರಕ್ಕೆ ರೈತರ ಸಮಸ್ಯೆಗಳು ಬಿಡಿ, ಬಡವರ ಪ್ರಶ್ನೆಗಳು, ಕೃಷಿ ಕಾರ್ಮಿಕರ ಪ್ರಶ್ನೆಗಲಾಗಿ ಈ ಸರಕಾರದ ಕಣ್ಣಿಗೆ ಬೀಳಲೇ ಇಲ್ಲ. ಚುನಾವಣಾ ಸಂದರ್ಭದಲ್ಲಿ ಕೆ.ಜಿ. ಅಕ್ಕಿ 2 ರೂಪಾಯಿ ದರದಲ್ಲಿ ಬಡವರಿಗೆ ಕೊಡುತ್ತೇವೆಂದು ಹೇಳಿದ ಸರ್ಕಾರ ಅದನ್ನೀಗ ಮರತೇ ಹೋಗಿದೆ. ಎಲ್ಲ ಬಡವರಿಗೂ ಬಿಪಿಎಲ್ ಕಾರ್ಡು ವಿತರಣೆ ಮಾಡುತ್ತೇವೆಂದು ಅಂದರೂ ಇನ್ನೂ ಇದು ಜಾರಿ ಇಲ್ಲ. ಇನ್ನು ಗ್ರಾಮೀಣ ಬಡವರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದ ಉದ್ಯೋಗ ಖಾತ್ರಿಯ ಯೋಜನೆಗಾಗಿ ಬಿಡುಗಡೆ ಮಾಡಿದ ಹಣವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲಿಲ್ಲ. ಬದಲಿಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದು ಕೋಟಿಗಟ್ಟಲೆ ಹಣ ದುರುಪಯೋಗ ಆಗಿ ಗುತ್ತಿಗೆದಾರರ ಪಾಲಾಯಿತು.

ಕೋಮು ಭಾವನೆ


ಇನ್ನೂ ಈ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ತನ್ನ ಕೋಮುವಾದಿ ಅಜೆಂಡಾವನ್ನು ಕಾರ್ಯಗತ ಮಾಡಲು ಪ್ರಯತ್ನ ನಡೆಸಿದೆ. ಇನ್ನೊಂದು ಕಡೆ ಭಗವದ್ಗೀತೆಯ ಅಭಿಯಾನವನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ಮನಸುಗಳಲ್ಲಿ ಕೋಮುಭಾವನೆ ಹುಟ್ಟು ಹಾಕುವ ಪ್ರಯತ್ನ ಇನ್ನೊಂದು ಕಡೆ ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ಒಪ್ಪಿಸುವ ಪ್ರಯತ್ನದ ಭಾಗವಾಗಿ ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿ ಕಡಿಮೆ ಆಗಿದೆ ಎಂಬ ಕಾರಣ ಹೇಳಿ ಅವುಗಳನ್ನು ಮುಚ್ಚುವ ತೀರ್ಮಾನ ಮಾಡಿದೆ. ವಿಶ್ವ ವಿದ್ಯಾಲಯಗಳಲ್ಲಿ ವ್ಯಾಪಕ ಭ್ರಷ್ಟಾಚಾರವನ್ನು ನಡೆಸಿ ವಿಶ್ವ ವಿದ್ಯಾಲಯಗಳನ್ನು ಭ್ರಷ್ಟಗೊಳಿಸಿದ್ದಲ್ಲದೆ ಅವುಗಳಿಗೆ ಉಪ ಕುಲಪತಿಗಳನ್ನು ನೇಮಕ ಮಾಡುವಾಗ ಜಾತಿ ಹಣದ ಪ್ರಭಾವಕ್ಕೆ ಒಳಗಾಗಿ ಅನರ್ಹರನ್ನೆಲ್ಲ ಕುಲಪತಿಗಳನ್ನಾಗಿ ಮಾಡಲಾಗಿದೆ. ಹಾಗಾಗಿ ವಿಶ್ವ

ಪುಟ 11 ಕ್ಕೆ

'ಮಡೆಸ್ನಾನ ಮಾನವ ಘನತೆಗೆ ಅಪಚಾರ'– ವಿಚಾರಸಂಕಿರಣದಲ್ಲಿ

ಪ್ರೊ.ಜಿ.ಕೆ.ಗೋವಿಂದರಾವ್

ಮಡೆಸ್ನಾನ ಆಚರಣೆ ಮೌಢ್ಯವಾಗಿದ್ದು, ಇದು ಜಾತಿ ತಾರತಮ್ಯವನ್ನು ಜೀವಂತವಾಗಿಡುವ ಹಾಗೂ ಮೇಲು ಕೀಳೆಂಬ ಭಾವನೆಯನ್ನು ಕಾಯ್ದಿಡುವ ಹುನ್ನಾರವಾಗಿದೆ. ಇದನ್ನು ಸರಕಾರ ಶೀಘ್ರ ನಿಷೇಧಿಸಬೇಕು. ಕುಕ್ಕೆ ಸುಬ್ರಹ್ಮಣ್ಯ ಹಾಗೂ ಇತರ ದೇವಾಲಯಗಳಲ್ಲೂ ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೆ ಭೋಜನದಲ್ಲಿ ಪಂಕ್ತಿಭೇದವಿದೆ. ಈ ಪಂಕ್ತಿಭೇದ ಇರುವುದರಿಂದ ಮಡೆಸ್ನಾನದಂಥ ಅನಿಷ್ಟ ಆಚರಣೆ ಉಳಿದು ಬಂದಿದೆ. ಆದುದರಿಂದ ಎಲ್ಲಾ ದೇವಾಲಯಗಳಲ್ಲೂ ಪಂಕ್ತಿಭೇದವನ್ನು ನಿಲ್ಲಿಸಬೇಕು. ಮಡೆಸ್ನಾನವನ್ನು ಸರಕಾರ ನಿಷೇಧಿಸದಿದ್ದರೆ ದ.ಕ., ಉಡುಪಿ ಜಿಲ್ಲೆಯ ವಿವಿಧ ಜನಪರ, ಜೀವಪರ, ದಲಿತ, ಆದಿವಾಸಿ ಸಂಘಟನೆಗಳನ್ನು ಒಗ್ಗೂಡಿಸಿ ತೀವ್ರ ರೀತಿಯ



ಚಳವಳಿ ನಡೆಸಲಾಗುವುದು. ರಾಜ್ಯದ ಪ್ರಗತಿಪರ ಮಠಾಧೀಶರು ಮಡೆಸ್ನಾನವನ್ನು ವಿರೋಧಿಸಿ ನಡೆಸಲಿರುವ ಪ್ರತಿಭಟನೆಗಳಿಗೆ ಕೈಜೋಡಿಸಲಾಗುವುದು. ಮುಂದಿನ ವಿಧಾನಸಭಾ ಅಧಿವೇಶನದಲ್ಲಿ ಮಡೆಸ್ನಾನವನ್ನು ನಿಷೇಧಿಸುವ ಶೀರ್ಮಾನವನ್ನು ಸರ್ಕಾರ ಕೈಗೊಳ್ಳದಿದ್ದರೆ ಮಂಗಳೂರಿನಿಂದ ಸುಬ್ರಹ್ಮಣ್ಯದವರೆಗೆ ಪಾದಯಾತ್ರೆ ನಡೆಸಲಾಗುವುದು. ಮುಂದಿನ ವರ್ಷ ಚಂಪಾ ಷಷ್ಠಿಗೆ ಮಡೆಸ್ನಾನ ಆಚರಣೆಗೆ ಅವಕಾಶ ನೀಡಿದರೆ ಸುಬ್ರಹ್ಮಣ್ಯದಲ್ಲಿ ಆಚರಣೆ ನಡೆಯುವ ಎಲ್ಲಾ ಸ್ಥಳಗಳಲ್ಲಿ ಪ್ರತಿಭಟನೆ ನಡೆಸಲಾಗುವುದು – ಎಂಬ ನಿರ್ಣಯವನ್ನು ಜನವರಿ 1 ರಂದು ಮಂಗಳೂರಿನಲ್ಲಿ ಡಿವೈಎಫ್ಐ, ಡಿಎಸ್ಎಸ್(ಅಂಬೇಡ್ಕರ್‌ವಾದ) ಮತ್ತು ಸಹಮತ ವೇದಿಕೆ ಏರ್ಪಡಿಸಿದ್ದ ವಿಚಾರ ಸಂಕಿರಣದ ಕೊನೆಯಲ್ಲಿ ಕೈಗೊಳ್ಳಲಾಯಿತು.

ವಿಚಾರ ಸಂಕಿರಣದಲ್ಲಿ ಖ್ಯಾತ ಚಿಂತಕ ಪ್ರೊ.ಜಿ.ಕೆ.ಗೋವಿಂದ ರಾವ್, ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು, ಮಂಗಳೂರು ವಿ.ವಿ.ಕನಕದಾಸ ಪೀಠದ ಮುಖ್ಯಸ್ಥ ಡಾ.ಬಿ.ಶಿವರಾಮ ಶೆಟ್ಟಿ, ಸಹಮತ ವೇದಿಕೆಯ ಸಂಚಾಲಕ ಡಾ.ವಾಸುದೇವ ಬೆಳ್ಳೆ ವಿಚಾರ ಮಂಡನೆ ಮಾಡಿದರು.

ಮಡೆಸ್ನಾನ ಮಾನವ ಘನತೆಗೆ ಅಪಚಾರ:
– ಪ್ರೊ.ಜಿ.ಕೆ.ಗೋವಿಂದರಾವ್

ಮಡೆಮಡೆಸ್ನಾನ ಅಸಂಖ್ಯ ಮೂಢನಂಬಿಕೆಗಳಲ್ಲಿ ಒಂದು. ನಂಬಿಕೆಯ ಹೆಸರಿನಲ್ಲಿ ಎಂಜಲೆಲೆಯ ಮೇಲೆ ಉರುಳಾಡುವ ಈ ಆಚರಣೆ ಮಾನವ ಘನತೆಯನ್ನು ಚರಂಡಿಗೆ ಎಸೆಯುವಂತೆ ಮಾಡುವ ಆಚರಣೆ. ನಾವು ನಂಬುವ ದೇವರೆದುರು ನಮ್ಮ ಘನತೆ ಆತನಿಗೆ ಸವಾಲಾಗಬೇಕೇ ಹೊರತು ಆ ಘನತೆಯನ್ನು ತಿರಸ್ಕರಿಸುವಂತಾಗಬಾರದು. ದೇಶದ 99% ಮಠಗಳು ಯಾವತ್ತೂ ಪ್ರಗತಿಪರವಾದ ವಿಚಾರಗಳನ್ನು ತಮ್ಮ ಸಂಸ್ಥೆಯಿಂದ ಹೊಮ್ಮಿಸಿಲ್ಲ.

ಮಡೆಸ್ನಾನ ನೂರಾರು ವರ್ಷಗಳಿಂದ ಆಚರಣೆಯಲ್ಲಿರುವುದಕ್ಕೆ ಇತಿಹಾಸವಿದೆಯೆಂದು ಪೇಜಾವರ ಶ್ರೀಗಳು ಹೇಳುತ್ತಾರೆ. ಇಂತಹ ಇತಿಹಾಸವನ್ನು ಇಂದು ಪರೀಕ್ಷಿಸುವ ಅಗತ್ಯವಿದೆ. ಅಸ್ಪೃಶ್ಯತೆಯ ಆಚರಣೆಯೂ ಸಾವಿರ ವರ್ಷಗಳಿಂದ ಇರುವುದಕ್ಕೆ ಇತಿಹಾಸ ಇದೆ; ಹಾಗೆಂದು ಅದನ್ನು ಯಾರಾದರೂ ಸಮರ್ಥಿಸುತ್ತಾರೆಯೇ?

ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಪರಿಕಲ್ಪನೆಗಳಿಗೆ ಬಹಳಷ್ಟು ಜನರು ಅತೃಪ್ತರಿದ್ದರು; ಯಾಕೆಂದರೆ ಅದು ದಲಿತರ ಮತ್ತು ಮಹಿಳೆಯರ ಪರವಾಗಿ ಮಾತನಾಡುತ್ತಿದೆ. ಅವರಿಗೆ ದಲಿತ ಮತ್ತು ಮಹಿಳೆಯರಿಗೆ ನೀಡುವ ಸಮಾನತೆ ಎಂಬುದು ಒಂದು ಬೆದರಿಕೆ ಎನಿಸಿತು; ಮತಧರ್ಮಗಳು ಈ ಭಾವನೆಗಳನ್ನು ಪೋಷಿಸಿದ್ದವು. ಧರ್ಮವು ಏನಾದರೂ ನಾವು ನಮ್ಮ ಘನತೆಯನ್ನು ಬಿಟ್ಟುಕೊಡಬೇಕೆಂದು ಒತ್ತಾಯಿಸಿದ್ದೇ ಆದಲ್ಲಿ, ಅಂಥ ಧರ್ಮವನ್ನು ತಿರಸ್ಕರಿಸುವ ಆತ್ಮಶಕ್ತಿಯೂ ನಮಗಿರಬೇಕು.

ಧರ್ಮ ಮತ್ತು ವಿಜ್ಞಾನಗಳನ್ನು ಮತಧರ್ಮಗಳಿಗಿಂತ ಬೇರೆಯಾಗಿಯೇ ನೋಡಬೇಕು. ಧರ್ಮ, ವಿಜ್ಞಾನಗಳಲ್ಲಿ ಸಾಧನೆಯನ್ನು ಮಾಡಿದವರು ತಾವು ಕಂಡುಕೊಂಡದ್ದೇ ಪರಮಸತ್ಯ ಎಂದು ಅಹಂಕಾರ ಪಡುವುದಿಲ್ಲ. ಬುದ್ಧ, ಯೇಸುಕ್ರಿಸ್ತ, ಪ್ರವಾದಿ ಮಹಮ್ಮದ, ಅಲ್ಲಮಪ್ರಭು, ಬಸವೇಶ್ವರ, ಕಬೀರ, ಪುರಂದರ ದಾಸರು ಅತ್ಯಂತ ವಿನಯಶಾಲಿಗಳಾಗಿದ್ದರು. ನ್ಯೂಟನ್, ಡಾರ್ವಿನ್, ಐನ್‌ಸ್ಟೈನ್‌ಗಳೂ ಕೂಡಾ ವೈಜ್ಞಾನಿಕ ತಿಳುವಳಿಕೆಯಲ್ಲಿ ತಮ್ಮದೇ ಅತ್ಯಂತ ಕಟ್ಟಕೊನೆಯ ಮಾತು ಎಂದೂ ಹೇಳಿರುವುದಿಲ್ಲ. ಮತಧರ್ಮಗಳು ಮಾತ್ರ ಯಥಾಸ್ಥಿತಿಯನ್ನು ಕಾಪಾಡುವ ಮತ್ತು ಜನತೆಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆಯಾಗಿ ಬೆಳೆದು ಬಂದಿದೆ.

ಮತಧರ್ಮ ಮತ್ತು ವಿಧಾನಸೌಧದ ರಾಜಕೀಯವನ್ನು ಸಂಮಿಶ್ರಗೊಳಿಸಬಾರದು. ಮಹಾತ್ಮಗಾಂಧಿಯವರ ಧರ್ಮ ಮತ್ತು ಅವರ ರಾಜಕೀಯ ನಮ್ಮ ಪರಿಶೀಲನೆಯ ದಾರಿಯಾಗಬೇಕು. ಅಂತೆಯೇ ಅಂಬೇಡ್ಕರ್ ಅವರಿಗೂ ಜೀವನವೆಂಬುದು ಧರ್ಮದ ಹುಡುಕಾಟವಾಗಿತ್ತು. ಮತಧರ್ಮವನ್ನು ವಿರೋಧಿಸುವುದೇ ಇವತ್ತು ಸಮಾಜದ ಆದ್ಯತೆಯಾಗಿದೆ.



ಪ.ರಂ.ದಿ:

ಪೇಜಾವರ ಶ್ರೀಗಳು ದಲಿತ ಕೇರಿಗಳಿಗೆ ಭೇಟಿ ನೀಡಿದ್ದಾರೆ, ದಲಿತರ ಮನೆಯಲ್ಲಿ ಊಟ ಮಾಡಿದ್ದಾರೆ. ಈ ವರ್ತನೆಗಳಿಗೆ ಪ್ರಚಾರ, ಪ್ರಶಂಸೆ ಪಡೆದಿರುವ ಶ್ರೀಗಳು ತಾವು ಅಲ್ಲಿಂದ ಬಂದ ಮೇಲೆ ಶುದ್ಧಿಗಾಗಿ ಸ್ನಾನ ಮಾಡುವುದಿಲ್ಲ ಪಂಚಗವ್ಯ ಸ್ವೀಕರಿಸುವುದಿಲ್ಲ ಎಂದು ಎಲ್ಲರೆದುರು ಬಂದು ಹೇಳಿದರೆ ನಾವು ಅವರ ಕಾಲಿಗೆ ಬೀಳುತ್ತೇವೆ.

ಸಾಮಾನ್ಯ ಜನ ಅದರಲ್ಲೂ ಮುಖ್ಯವಾಗಿ ಯುವಜನತೆ ಇಂದಿನ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಮೂಢನಂಬಿಕೆಗಳಿಗೆ ಆಕರ್ಷಿತರಾಗುತ್ತಿದ್ದು, ಇದರಿಂದಾಗಿ ಕಳೆದ ಸುಮಾರು 30 ವರ್ಷಗಳಿಂದೀಚೆಗೆ ನಾವು ಮಾನಸಿಕವಾಗಿ ಭ್ರಷ್ಟರಾಗುತ್ತಿದ್ದೇವೆ. ಆತಂಕ ಅಭದ್ರತೆ ನಮ್ಮನ್ನು ಕಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲೂ ವಿಧವೆಯರ ವಿವಾಹ ನಡೆದಿದೆ; ವಿಧವೆಯರ ತಲೆ ಬೋಳಿಸುವಿಕೆಯ ಇತಿಹಾಸಗಳನ್ನು ಬದಲಾಯಿಸಿ ಸ್ತ್ರೀಯರು ಮುಂದೆ ಬಂದಿರುವುದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮಹಿಳೆಯರು ಸಾಧಿಸಿರುವ ಪ್ರಗತಿಯಾಗಿದೆ.

ಮಡೆಸ್ನಾನವೆಂಬುದು ಅವರವರ ನಂಬಿಕೆಗೆ ಬಿಟ್ಟ ವಿಷಯ ಎಂದು ಹೇಳುವವರಿದ್ದಾರೆ. ಆದರೆ ಪ್ರಜಾಪ್ರಭುತ್ವದಲ್ಲಿ ಅವರವರ ನಂಬಿಕೆ ಎಂಬುದು ಸಮುದಾಯದ ಬದುಕಿಗೆ ಪೂರಕವಾಗಬೇಕು ಎಂಬುದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಮಡೆಸ್ನಾನ ವಿರೋಧಿಸಲು ತೀವ್ರವಾದ ಆತ್ಮಶಕ್ತಿಯ ಅಗತ್ಯವಿದ್ದು, ಕ್ರಿಯಾಶೀಲವಾಗಿ ಚಟುವಟಿಕೆಯನ್ನು ಮುಂದುವರಿಸಬೇಕು.

ವಿಚಾರ ಸಂಕಿರಣವನ್ನು ಬೆಂಬಲಿಸಿದ ಜಾತ್ಯಾತೀತ ಜನತೆ: ಉಡುಪಿ, ದ.ಕ.ಜಿಲ್ಲೆಗಳಲ್ಲಿ ಮತ್ತೆ ಪ್ರಾರಂಭವಾಗಿರುವ ಮುಸ್ಲಿಮರ ಮೇಲೆ ಹಲ್ಲೆ, ಕ್ರೈಸ್ತರ ಮೇಲೆ ಹಲ್ಲೆ, ಅಜಲು ಆಚರಣೆ ಇತ್ಯಾದಿ ಘಟನೆಗಳ ಹಿನ್ನೆಲೆಯಲ್ಲಿ ಕರಾವಳಿಯ ಪ್ರಜ್ಞಾವಂತ ಜಾತ್ಯಾತೀತ ನಾಗರಿಕರು ವಿಶೇಷವಾಗಿ ಮಡೆಸ್ನಾನ ಕುರಿತಾದ ಈ ವಿಚಾರ ಸಂಕಿರಣದಲ್ಲಿ ಕೇಳುಗರಾಗಿ ಸಂವಾದಕರಾಗಿ ಭಾಗವಹಿಸಿದ್ದು ಈ ಸಂಕಿರಣದ ವಿಶೇಷ. ಇವರಲ್ಲಿ ಬಹಳಷ್ಟು ಮಂದಿ ಸಂಘ ಪರಿವಾರದ ಕೆಂಗಣ್ಣಿಗೆ ಗುರಿಯಾಗಬಹುದೆಂದು ಇತ್ತೀಚೆಗೆ ಯಾವುದೇ ಸಭೆ ಸಂವಾದಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಡಿವೈಎಫ್ಐ, ದಲಿತ ಹಕ್ಕುಗಳ ಸಮಿತಿ ಜನರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುತ್ತಿರುವ ಹಿನ್ನೆಲೆಯಲ್ಲಿ ಇನ್ನೂರೈವತ್ತಕ್ಕೂ ಮಿಕ್ಕಿ ಜನ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಜಾತ್ಯಾತೀತ ಬುದ್ಧಿಜೀವಿಗಳನ್ನು ಇನ್ನಷ್ಟು ಸಂಘಟಿಸಲು ಸಂಕಿರಣ ಪ್ರೇರಣೆ ನೀಡಿದೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಹಲ್ಲೆಗೊಳಗಾಗಿದ್ದ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಈ ಕಾರ್ಯಕ್ರಮದಲ್ಲಿ ಕೈಗೊಂಡ ನಿರ್ಣಯಗಳನ್ನು ಸರಕಾರಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು. ದಸಂಸ (ಅಂಬೇಡ್ಕರ್‌ವಾದ)ದ ದ.ಕ.ಜಿಲ್ಲಾ ಸಂಚಾಲಕ ಎಲ್.ಚಂದು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ದಯಾನಂದ ಶೆಟ್ಟಿ ಸ್ವಾಗತಿಸಿದರು.

ದಲಿತ ಮಹಿಳೆಯ ಪತ್ತೆಗೆ ಒತ್ತಾಯಿಸಿ ಪ್ರತಿಭಟನೆ

ಮಂಗಳೂರು ತಾಲೂಕು ಹರೇಕಳ ಗ್ರಾಮದ ದಲಿತ ವಿಧವಾ ಮಹಿಳೆ ಸುನೀತಾ ಅಕ್ಟೋಬರ್ 24 ರಂದು ಕಾಣೆಯಾಗಿದ್ದು, ಈ ಬಗ್ಗೆ ಅಕ್ಟೋಬರ್ 27 ರಂದು ಕೋಣಾಜೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು. ಈ ಬಗ್ಗೆ ಉಳ್ಳಾಲ ವಲಯ



ಸಿಪಿಎಂ ಪಕ್ಷದ ವತಿಯಿಂದಲೂ, ಉಳ್ಳಾಲ ವಲಯ ದಲಿತ ಹಕ್ಕುಗಳ ಸಮಿತಿಯಿಂದಲೂ ಬೇಗನೆ ಪತ್ತೆ ನಡೆಸುವಂತೆ ಆಗ್ರಹಿಸಲಾಗಿದ್ದರೂ ಪೋಲೀಸ್ ಇಲಾಖೆ ಕಾಣೆಯಾದ ಸುನೀತಾ ಅವರ ಬಗ್ಗೆ ಯಾವುದೇ ಮಾಹಿತಿ ಕಂಡುಕೊಂಡಿಲ್ಲ. ಈ ವೈಫಲ್ಯವನ್ನು ವಿರೋಧಿಸಿ ಸಿಪಿಎಂ ಉಳ್ಳಾಲ ವಲಯ ಸಮಿತಿ ಹಾಗೂ ಉಳ್ಳಾಲ ವಲಯ ದಲಿತ ಹಕ್ಕುಗಳ ಸಮಿತಿಯಿಂದ ಜನವರಿ 2 ರಂದು

ಪುಟ 12ಕ್ಕೆ

ಇಂಟ್ರೊ–ಹೊಸ ವರ್ಷದಲ್ಲಿ ಪ್ರಧಾನ ಮಂತ್ರಿಗಳು ಮುಂದಿಟ್ಟಿರುವ ಅಜೆಂಡಾದ ರೂಪುರೇಷೆ ಅತ್ಯಂತ ಕಳವಳಕಾರಿ. ಅದು ಆಧುನಿಕ ಭಾರತದಲ್ಲಿ ರಾಮಾನುಜಂಗಳನ್ನು, ಬೋಸ್‌ಗಳನ್ನು ಸೃಷ್ಟಿಸುವುದಂತೂ ಸಾಧ್ಯವೇ ಇಲ್ಲ. ಅತ್ತ ನಮ್ಮ ಕೋಟ್ಯಂತರ ಜನಗಳಿಗೆ ಜೀವನ ಭದ್ರತೆಯನ್ನೂ ಕೊಡಲಾರದು. ನಮ್ಮ ಪ್ರಧಾನ ಮಂತ್ರಿಗಳ ಕಾಳಜಿಗಳು ಅತ್ಯಂತ ವೈರುಧ್ಯಮಯವಾಗಿವೆ ಮತ್ತು ಆ ಮೂಲಕ ನಮ್ಮ ಜನಗಳ ಜೀವನಾಧಾರದ ಭದ್ರತೆಯ ಬಗ್ಗೆ ಅವರ ಕಾಳಜಿ ಟೊಳ್ಳಾಗಿ ಬಿಟ್ಟಿದೆ. ಜನಗಳ ಜೀವನಾಧಾರ ಉತ್ತಮಗೊಳ್ಳಬೇಕಾದರೆ, ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಪಥವನ್ನು ಬದಲಿಸಲೇ ಬೇಕಾಗಿದೆ. 2012ರ ವರ್ಷ ಅದಕ್ಕಾಗಿ ಸರಕಾರದ ಮೇಲೆ ಜನಗಳ ಒತ್ತಡದ ವರ್ಷವಾಗಬೇಕಾಗಿದೆ

ಏಕೆ ಇಂತಹಾ ಟೊಳ್ಳು ಕಾಳಜಿ, ಪ್ರಧಾನಿಗಳೇ?

'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಜನವರಿ 5, 2012 ರ ಸಂಚಿಕೆಯ ಸಂಪಾದಕೀಯ

ಹೊಸ ವರ್ಷದ ಮುನ್ನಾದಿನ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿಗಳು ನಂತರ ಭುವನೇಶ್ವರದಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸಿನ 99ನೇ ವಾರ್ಷಿಕ ಅಧಿವೇಶನವನ್ನು ಉದ್ದೇಶಿಸಿ ಜನವರಿ 3ರಂದು ಮಾತನಾಡಿದರು. ಇವೆರಡೂ ಸೇರಿ ಕೊಟ್ಟಿರುವ ಅಜೆಂಡಾದ ರೂಪುರೇಷೆ ಅತ್ಯಂತ ಕಳವಳಕಾರಿ. ಅದೆಂದರೆ ಪ್ರಧಾನಮಂತ್ರಿಗಳು, ಅಂದರೆ ಈ ಯುಪಿಎ–2 ಸರಕಾರ ಭಾರತೀಯ ರಾಷ್ಟ್ರ ಮತ್ತು ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಖಾಸಗಿ ಮುತುವರ್ಜಿಯೇ ಬುನಾದಿ ಎಂದು ಅದರ ಮೇಲಷ್ಟೇ ಅವಲಂಬಿಸುತ್ತಿರುವುದು.

ಈ ವರ್ಷ ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜಂ ಇವರ 125ನೇ ಜನ್ಮ ದಿನಾಚರಣೆಯ ವರ್ಷ ಮತ್ತು ಸತ್ಯೇಂದ್ರನಾಥ ಬೋಸ್ ಹೆಸರು ಹೊತ್ತಿರುವ, ನಮ್ಮ ವಿಶ್ವದ ಕುರಿತ ಮಾನವಕುಲದ ತಿಳಿವನ್ನು ಕ್ರಾಂತಿಕಾರಕಗೊಳಿಸಬಲ್ಲ, ಅಣುವಿಗಿಂತಲೂ ಚಿಕ್ಕದಾದ ಪ್ರಾಥಮಿಕ ಕಣದ ಅಂದರೆ ಬೋಸೋನಿನ ಹುಡುಕಾಟ ಮುಂದುವರೆದಿದೆ. ಪ್ರಧಾನ ಮಂತ್ರಿಗಳು ಈ ಎರಡು ಹೆಸರುಗಳನ್ನು ಉದ್ಧರಿಸುತ್ತಾ "ಇರುವುದೊಂದೇ ವಿಜ್ಞಾನದ ಬೆಳಕು, ಅದನ್ನು ಎಲ್ಲಿ ಬೆಳಗಿಸಿದರೂ ಎಲ್ಲೆಡೆ ಬೆಳಗಿಸಿದಂತೆಯೇ" ಎಂಬ ಐಸಾಕ್ ಅಸಿಮೋವ್ ಅವರ ಪ್ರಖ್ಯಾತ ಉದ್ಧರಣೆಯೊಂದಿಗೆ ತಮ್ಮ ಭಾಷಣವನ್ನು ಮುಗಿಸಿದರು.

ಇದೇ ದಾಟಿಯಲ್ಲಿ, ಭಾರತದಂತಹ ದೇಶಗಳಲ್ಲಿ ವಿಜ್ಞಾನದ ಪಾತ್ರ ಏನಿರಬೇಕು ಎಂಬ ಪ್ರಶ್ನೆಗೆ ಉತ್ತರಿಸುತ್ತ ಪ್ರಧಾನ ಮಂತ್ರಿಗಳು ಇದು 'ತ್ವರಿತವಾದ, ತಾಳಿಕೆಯ ಮತ್ತು ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯ ರಾಷ್ಟ್ರೀಯ ಗುರಿ'ಗೆ ಬೆಂಬಲವಾಗಿರಬೇಕು ಎಂದರು. ಅದೇ ವೇಳೆಗೆ ವೈಜ್ಞಾನಿಕ ಸಂಶೋಧನೆ ಮತ್ತು ಅಭಿವೃದ್ಧಿಗೆ ಭಾರತ ಮಾಡುತ್ತಿರುವ ಖರ್ಚು ಬಹಳ ಕಡಿಮೆ, ಮತ್ತು ಬಹಳ ಕಾಲದಿಂದ ಹೆಚ್ಚದೆ ಹಾಗೆಯೆ ಮುಂದುವರೆಯುತ್ತಿದೆ ಎಂದು ನೇರವಾಗಿಯೇ ಅವರು ಒಪ್ಪಿಕೊಂಡರು. ಸದ್ಯ ನಾವು ಸಂಶೋಧನೆ ಮತ್ತು ಅಭಿವೃದ್ಧಿಗೆ ಮಾಡುತ್ತಿರುವ ಖರ್ಚು ದೇಶದ ಜಿಡಿಪಿಯ 0.9 ಶೇ.ಕ್ಕಿಂತಲೂ ಕಡಿಮೆ. ಈ ವಿಷಯದಲ್ಲಿ ಚೀನಾ ನಮ್ಮನ್ನು ಬಹಳ ಹಿಂದಕ್ಕೆ ನೂಕಿದೆ ಹಿಂದು ಮರುಗಿದ ಅವರು 12ನೇ ಯೋಜನೆಯ ಅಂತ್ಯದ ವೇಳೆಗೆ ನಾವು ಜಿಡಿಪಿಯ ಕನಿಷ್ಟ 2ಶೇ.ದಷ್ಟು ಖರ್ಚು ಮಾಡಬೇಕಾಗಿದೆ ಎಂದರು. ಚೀನಾ ಜನತಾ ಗಣತಂತ್ರ ಈಗ ತನ್ನ ಜಿಡಿಪಿಯ 2ಶೇ.ದಷ್ಟು ಖರ್ಚು ಮಾಡುತ್ತಿದೆ. ಚೀನಾದ ಜಿಡಿಪಿ ಭಾರತದ ಜಿಡಿಪಿಗಿಂತ ಎರಡೂವರೆ ಪಟ್ಟಾದರೂ ದೊಡ್ಡದು. ಅಂದರೆ ಅದು ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ನಮಗಿಂತ ಕನಿಷ್ಟ ಐದು ಪಟ್ಟು ಹೆಚ್ಚು ಖರ್ಚು ಮಾಡುತ್ತಿದೆ.

ಅದೇ ಪಿ–ಪಿ–ಪಿ ಮಂತ್ರ!

ಖಂಡಿತವಾಗಿಯೂ, ಪ್ರಧಾನ ಮಂತ್ರಿಗಳ ಶ್ಲಾಘನಾರ್ಹ ಗುರಿಗಳ ಬಗ್ಗೆ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ಸಮಸ್ಯೆಯಿರುವುದು ಈ ಖರ್ಚುಗಳನ್ನು ಹೆಚ್ಚಿಸಲು ಅವರು ಯಾವ ವಿಧಾನದ ಮೇಲೆ ಒತ್ತು ನೀಡಿದರು ಎಂಬ ಬಗ್ಗೆ. "ಇದು ಸಾಧ್ಯವಾಗುವುದು, ಸದ್ಯಕ್ಕೆ ಸಂಶೋಧನೆ ಮತ್ತು ಅಭಿವೃದ್ಧಿಯ ಒಟ್ಟು ಖರ್ಚಿನಲ್ಲಿ ಮೂರನೇ ಒಂದರಷ್ಟು ಕೊಡುಗೆ ನೀಡುತ್ತಿರುವ ಉದ್ದಿಮೆ ವಲಯ ತನ್ನ ಕೊಡುಗೆಯನ್ನು ಗಣನೀಯವಾಗಿ



ಹೆಚ್ಚಿಸಿದಾಗ ಮಾತ್ರ.." ನಂತರ ಅವರು ತನ್ನ ಸರಕಾರದ ಪ್ರಖ್ಯಾತ ಪಿ–ಪಿ–ಪಿ ಮಂತ್ರದ ಉಚ್ಚಾರಣೆ ಮಾಡಿದರು. ಅಂದರೆ ಈ ಗುರಿಸಾಧನೆಯಲ್ಲೂ ಸಾರ್ವಜನಿಕ– ಖಾಸಗಿ–ಪಾಲುದಾರಿಕೆಯ ಮೇಲೆಯೇ ಅವಲಂಬನೆ ! ಸಂಶೋಧನೆ ಮತ್ತು ಅಭಿವೃದ್ಧಿ, ಅಂದರೆ ಆರ್ ಅಂಡ್ ಡಿ ಯನ್ನು ಬೆಳೆಸುವಲ್ಲಿ ಖಾಸಗಿಯವರ ಆಸಕ್ತಿಗೂ ಅವರ ಲಾಭದ ಉದ್ದೇಶ ಸಾಧನೆಗೂ ನೇರ ಅನುಪಾತವಿದೆ ಎಂಬುದು ಸಾರ್ವತ್ರಿಕವಾಗಿ ಗೊತ್ತಿರುವ ಸಂಗತಿ. ಪ್ರಧಾನ ಮಂತ್ರಿಗಳು ಸಾರಿದ ಗುರಿ–ಎಲ್ಲರನ್ನೂ ಒಳಗೊಳ್ಳುವ ಗುರಿಸಾಧನೆಯಲ್ಲಿ ವಿಜ್ಞಾನದ ಪಾತ್ರವಿರಬೇಕು ಎಂದು. ಆದರೆ ಲಾಭವನ್ನು ಗರಿಷ್ಟಗೊಳಿಸುವ ಧೋರಣೆಗಳನ್ನು ಪ್ರೋತ್ಸಾಹಿಸುವುದೆಂದರೆ, ಎಲ್ಲರನ್ನು ಒಳಗೊಳ್ಳುವ ಆ ಗುರಿಯಿಂದ ಮಾರು ದೂರ ಹೋಗುವುದಕ್ಕೆಂದೇ ಹೇಳಿ ಮಾಡಿಸಿದ ಸಂಗತಿ. ಅನ್ವಯಿಕ ಸಂಶೋಧನೆಗೆ ಹಣ ಆಕರ್ಷಿಸುವುದು ಸುಲಭ ಎಂದು ಹೇಳಿಕೊಳ್ಳುತ್ತ ಅವರ ಸರಕಾರ ಇಂತಹ ಖಾಸಗಿ ಹಣವನ್ನು ಆಕರ್ಷಿಸುವಂತೆ ಯೋಜನೆಗಳನ್ನು ರೂಪಿಸುತ್ತದೆ.

ಈ ದಿಕ್ಕಿನಲ್ಲಿ ಯೋಚಿಸುವುದಕ್ಕೆ ಉತ್ತೇಜನೆ ಕೊಡುತ್ತ ಪ್ರಧಾನ ಮಂತ್ರಿಗಳು "ಈಗ ಆರ್ ಅಂಡ್ ಡಿ ಗೆ ಕೊಡುವ ಸಾರ್ವಜನಿಕ ಹಣ ಅನ್ವಯಿಕ ಸಂಶೋಧನೆಯ ಬದಲಿಗೆ ಮೂಲಭೂತ ಸಂಶೋಧನೆಯತ್ತಲೇ ಹೆಚ್ಚು ವಾಲಿದೆ' ಎಂದು ಗೋಳಾಡಿದರು. ಇದು ಎರಡು ಕಾರಣಗಳಿಂದಾಗಿ ವಿಚಿತ್ರ ಮತ್ತು ಅವೈಜ್ಞಾನಿಕವಾದ ನಿಲುವು. ಭಾರತದಲ್ಲಿ ಮಾನವ ನಾಗರಿಕತೆಯ ಚಾರಿತ್ರಿಕ ಕಾಣಿಕೆಯಿರುವುದು ಮೂಲಭೂತ ವಿಜ್ಞಾನವನ್ನು ಮುಂದೊಯ್ಯುವಲ್ಲಿ, ಸೊನ್ನೆಯ ಕ್ರಾಂತಿಕಾರಕ ಆವಿಷ್ಕಾರ ಅವುಗಳಲ್ಲೊಂದು. ಎರಡನೆಯದಾಗಿ, ಮೂಲಭೂತ ಸಂಶೋಧನೆಗಳ ಆವಿಷ್ಕಾರಗಳು ತಕ್ಷಣವೇ ಉತ್ಪಾದನಾ ಪ್ರಕ್ರಿಯೆಯಲ್ಲಿ ನಾವೀನ್ಯತೆಗಳನ್ನು ತರಲಾರವು. ಆದರೂ ಮಾನವ ನಾಗರಿಕತೆಯನ್ನು ಆಧುನೀಕರಿಸುವಲ್ಲಿ ಅದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದೆ. ಎಡಿಸನ್ನನ ವಿದ್ಯುತ್ ಬಲ್ಬ್ ಸಂಶೋಧನೆ, ಮಾರ್ಕೋನಿ ಕಂಡು ಹಿಡಿದ ರೇಡಿಯೋ ತರಂಗಗಳು ಅಥವ ಗ್ರಹಂ ಬೆಲ್‌ನ ತಂತಿ ಸಂಪರ್ಕ ಈಗಿನ ವಿದ್ಯುಚ್ಛಕ್ತಿ, ರೇಡಿಯೊ ಮತ್ತು ಟೆಲಿಫೋನಿಗೆ ಹಾದಿ ಮಾಡಿಕೊಟ್ಟವು. ಇವುಗಳಿಲ್ಲದಿದ್ದರೆ ಆಧುನಿಕ ಜಗತ್ತು ಈಗಿರುವಂತೆ ಇರುತ್ತಿರಲಿಲ್ಲ. ಹಿಂದಿದ್ದ ಸೋವಿಯೆತ್ ಒಕ್ಕೂಟ ಸ್ಪುಟ್ನಿಕ್ ಉಡಾವಣೆ ಮಾಡದಿರುತ್ತಿದ್ದರೆ ಇಂದಿನ ಉಪಗ್ರಹಗಳು ಇರುತ್ತಿರಲಿಲ್ಲ, ಇವೀಗ ನಮ್ಮ ಆಧುನಿಕ ಜೀವನದ ಅವಿಭಾಜ್ಯ ಅಂಗ. ಏಕೆಂದರೆ ಇವಿಲ್ಲದಿದ್ದರೆ ಟಿವಿ ಇರುತ್ತಿರಲಿಲ್ಲ, ಮೊಬೈಲ್ ಫೋನ್ ಇರುತ್ತಿರಲಿಲ್ಲ, ಇಮೇಲ್ ಗಳು ಇರುತ್ತಿರಲಿಲ್ಲ.

ಮೂಲಭೂತ ಸಂಶೋಧನೆಯಲ್ಲಿ ಆರ್ ಅಂಡ್ ಡಿಯನ್ನು ಬಲಪಡಿಸುವ ಬದಲು ಪ್ರಧಾನ ಮಂತ್ರಿಗಳು ಖಾಸಗಿ ಲಾಭಗಳನ್ನು ಹಿಗಿಸಲು ಪಿಪಿಪಿ ಯ ಮೇಲೆ ಒತ್ತು ಹಾಕಿದ್ದಾರೆ. ಇಂತಹ ಯೋಚನಾ ಲಹರಿ ಆಧುನಿಕ ಭಾರತದಲ್ಲಿ ರಾಮಾನುಜಂಗಳನ್ನು, ಬೋಸ್‌ಗಳನ್ನು ಸೃಷ್ಟಿಸುವುದು ಸಾಧ್ಯವೇ ಇಲ್ಲ.

ಐದು 'ಭದ್ರತೆ'ಗಳ ಅಜೆಂಡಾ

ಹೊಸ ವರ್ಷದ ಮುನ್ನಾದಿನ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಕೂಡ ಕಂಡು ಬಂದದ್ದು ಇಂತಹುದೇ ಯೋಚನಾ ಲಹರಿ. ಅವರು ಐದಂಶಗಳ ಅಂಜೆಂಡಾವನ್ನಿಟ್ಟರು: ರಾಷ್ಟ್ರೀಯ ಭದ್ರತೆ, ಆರ್ಥಿಕ ಭದ್ರತೆ, ಇಂಧನ ಭದ್ರತೆ, ಪರಿಸರ ಭದ್ರತೆ ಮತ್ತು ಜೀವನಾಧಾರದ ಭದ್ರತೆ(ಜನತೆಗೆ ಶಿಕ್ಷಣ. ಆಹಾರ, ಆರೋಗ್ಯ ಮತ್ತು ಉದ್ಯೋಗ).

ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ವಿಷಯದಲ್ಲಿ ವಿವಾದವಾಗಲೀ, ಭಿನ್ನಾಭಿಪ್ರಾಯವಾಗಲೀ ಇಲ್ಲ. ಆದರೆ ಜೀವನಾಧಾರದ ಭದ್ರತೆಯ ಗುರಿ ಮಾತ್ರ ಉಳಿದ ಮೂರು ಅಜೆಂಡಾಗಳ ಸಾಧನೆಯಲ್ಲಿ ಮತ್ತೆ ಖಾಸಗಿ ಲಾಭಗಳನ್ನು ಹಿಗ್ಗಿಸುವ ಪ್ರಧಾನಿಗಳ ಪಥ್ಯವನ್ನು ಅಳವಡಿಸಿದರೆ ದೂರದ ಕನಸಾಗಿಯೇ ಉಳಿಯುತ್ತದೆ.

ಆರ್ಥಿಕ ಭದ್ರತೆ ಎಂದರೆ ಅವರಿಗೆ ದೇಶದ ಹೆಚ್ಚುತ್ತಿರುವ ಹಣಕಾಸು ಕೊರತೆಯನ್ನು ಕಡಿಮೆ ಮಾಡುವುದು. ಇದಕ್ಕೆ ಸಬ್ಸಿಡಿಗಳನ್ನು ಕಡಿತಗೊಳಿಸಬೇಕಾಗುತ್ತದೆ ಎನ್ನುತ್ತಾರೆ ಪ್ರಧಾನ ಮಂತ್ರಿಗಳು. ಸದ್ಯಕ್ಕೆ ಸಬ್ಸಿಡಿಗಳ ಮೊತ್ತ ವಾರ್ಷಿಕವಾಗಿ ಒಂದು ಲಕ್ಷ ಕೋಟಿಯಾಗುತ್ತದೆ ಎಂದು ಇತ್ತೀಚೆಗೆ ಸಂಸತ್ತಿಗೆ ತಿಳಿಸಲಾಯಿತು. ಆದರೆ ಪೆಟ್ರೋಲಿಯಂ ವಲಯದಲ್ಲಿನ ತೆರಿಗೆಗಳಿಂದಲೇ ತಾನು 1,30,000 ಕೋಟಿ ರೂ. ಗಳಿಸಿರುವುದಾಗಿ ಸರಕಾರವೇ ಒಪ್ಪಿಕೊಂಡಿದೆ. ಅಂದರೆ, ಜನರೇ ಪೆಟ್ರೋಲಿಯಂ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ತೆತ್ತು ಸರಕಾರಕ್ಕೇ ಸಬ್ಸಿಡಿ ಕೊಡುತ್ತಿದ್ದಾರೆ ಎಂಬುದಂತೂ ಸ್ಪಷ್ಟ.

ಕಳೆದ ಮೂರು ವರ್ಷಗಳ ಬಜೆಟ್ ದಸ್ತಾವೇಜುಗಳ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಸರಕಾರ ತನಗೆ ಕಾನೂನಿನ ಪ್ರಕಾರ ಬರಬೇಕಾಗಿದ್ದ ರೂ. 14,28,028 ಗಳನ್ನು ಬಿಟ್ಟು ಕೊಟ್ಟಿದೆ. ಇವುಗಳಲ್ಲಿ ರೂ.3,63,875 ಕಾರ್ಪೊರೇಟುಗಳಿಗೆ ಮತ್ತು ಶ್ರೀಮಂತರಿಗೆ ಕೊಟ್ಟಿರುವ ರಿಯಾಯ್ತಿಗಳು. ಇಂತಹ ರಿಯಾಯಿತಿಗಳ ಎದುರು ಈ ವರ್ಷದ ರೂ. 4,65, 000 ಕೋಟಿ ಹಣಕಾಸು ಕೊರತೆ ನಗಣ್ಯವಾಗಿ ಬಿಡುತ್ತದೆ. ಸಿರಿವಂತರಿಗೆ ಕೊಡುವ ಇಂತಹ ಸಬ್ಸಿಡಿಗಳನ್ನು ಬೆಳವಣಿಗೆಗೆ ಕೊಡುವ ಉತ್ತೇಜನೆ ಎನ್ನಲಾಗುತ್ತದೆ, ಅತ್ತ ಹೇಗೋ ಜೀವ ಹಿಡಿದುಕೊಂಡಿರುವ ನಮ್ಮ ಎಂಬತ್ತು ಕೋಟಿ ಜನತೆ ಬದುಕುಳಿಯಲು ಏನೇನೂ ಸಾಲದಾಗಿರುವ ಸಬ್ಸಿಡಿಗಳು ದೇಶದ ಆರ್ಥಿಕ ಭದ್ರತೆಗೆ ಹೊರೆಗಳಂತೆ !

ಪುಟ 11 ಕ್ಕೆ

ಕಾರ್ಮಿಕ ಚಳುವಳಿ– ಕಮ್ಯುನಿಸ್ಟ್ ಚಳುವಳಿ ಸಾಗಿ ಬಂದ ಹಾದಿ

ಸ್ವಾತಂತ್ರ್ಯಾ ನಂತರದ ಕಾಲಘಟ್ಟದಲ್ಲಿ ಕಾರ್ಮಿಕ ಚಳುವಳಿಯ ಬೆಳವಣಿಗೆಯಲ್ಲಿ ದುಡಿಯುವ ವರ್ಗದ ಆಂದೋಲನದಲ್ಲಿ ಕಮ್ಯುನಿಸ್ಟ್ ಪಕ್ಷ ವಹಿಸಿದ ಪಾತ್ರವೇನು? ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರ ಲೇಖನ

ಸ್ವಾತಂತ್ರ್ಯ ಪೂರ್ವದ ಕಾರ್ಮಿಕ ಚಳುವಳಿಯ ಕುರಿತು ಕಮ್ಯುನಿಸ್ಟ್ ಪಕ್ಷದ ನಿಲುವು 'ಏಕ ಅಖಿಲ ಭಾರತ ಕಾರ್ಮಿಕ ಸಂಘಟನೆ' ಎಂಬುದಾಗಿತ್ತು. 1920ರಲ್ಲಿ ಎಐಟಿಯುಸಿ ಸ್ಥಾಪನೆಯಾಯಿತು. ಎಲ್ಲರೂ ಅದರ ಒಳಗೆ ದುಡಿಯುತ್ತಿದ್ದರು. 1917 ರಲ್ಲೇ ಗಾಂಧೀವಾದಿ ಟ್ರೇಡ್ ಯೂನಿಯನ್ ಸ್ಥಾಪನೆಯಾಗಿತ್ತು. ಅದು ಅಹಮದಾಬಾದ್‌ನ ಮಜದೂರ್ ಮಹಾಜನ್, ಜೆಮ್‌ಶೆಡ್‌ಪುರ ಉಕ್ಕಿನ ಕಾರ್ಖಾನೆಗಳಲ್ಲಿ ಇತ್ತು. ಅದು ಮಾತ್ರ ಎಐಟಿಯುಸಿಯಿಂದ ಹೊರಗಿತ್ತು. ಈ ಗಾಂಧೀವಾದಿ ಕಾರ್ಮಿಕ ಸಂಘಟನೆ ಒಳಗೊಂಡು ಎಐಟಿಯುಸಿಯೊಳಗಿನ ಒಂದು ಗುಂಪು ರಾಷ್ಟ್ರೀಯತೆಯ ಹೆಸರಿನಲ್ಲಿ ಎಐಟಿಯುಸಿ ಸಂಘಟನೆಯಿಂದ 1948 ರಲ್ಲಿ ಪ್ರತ್ಯೇಕಗೊಂಡದ್ದೇ ಐಎನ್‌ಟಿಯುಸಿ ಸಂಘಟನೆ. ಇದೇ ಕಾರ್ಮಿಕ ಚಳುವಳಿಗೆ ಎದುರಾದ ಮೊದಲು ಸವಾಲು. ಆಗ ಒಡೆದ ಕಾರ್ಮಿಕ ವರ್ಗದ ಐಕ್ಯತೆಯನ್ನು ಇಂದಿಗೂ ಸಾಧಿಸಲು ಸಾಧ್ಯವಾಗಿಲ್ಲ.

ಅಭಿವೃದ್ಧಿಗೊಂಡ ಕೈಗಾರಿಕಾ ಪ್ರದೇಶಗಳಾದ ಮುಂಬೈ ನಗರ, ನೆರೆಯ ಭಾಗಗಳೂ, ಥಾಣೆ, ಮಹಾರಾಷ್ಟ್ರದ ನಾಗಪುರ, ಕೊಲ್ಕೊತ್ತ ಮಹಾನಗರ, ಪಶ್ಚಿಮ ಬಂಗಾಳದ ಅಭಿವೃದ್ಧಿ ಹೊಂದಿದ ಪ್ರದೇಶಗಳು, ಉತ್ತರ ಪ್ರದೇಶದ ಕಾನ್ಪುರ, ಮುಂತಾದ ಕಡೆಗಳಲ್ಲಿ ಕೇಂದ್ರ ಸಂಘಟನೆಯ ಒಡಕಿನ ಪರಿಣಾಮಗಳು ಕಂಡು ಬಂದವು.

ಐಎನ್‌ಟಿಯುಸಿ, ಎಐಟಿಯುಸಿ ನಡುವೆ ಕಾರ್ಮಿಕ ಸಂಘಟನೆ ಪಕ್ಷಗಳ ಹೆಸರಿನಲ್ಲಿ ಬೇರೆ ಬೇರೆಯಾಗುವುದೆಂದರೆ ಅದರಿಂದ ಕಾರ್ಮಿಕ ವರ್ಗದ ಐಕ್ಯತೆ ವಿಭಜನೆಯಾಗುವಂಥದ್ದೇ. ಕಮ್ಯುನಿಸ್ಟ್ ಪಕ್ಷ ಕಾರ್ಮಿಕ ಚಳುವಳಿಯ ಏಕತೆಗಾಗಿ ಶ್ರಮಿಸಿತು. ಏಕತೆಗಾಗಿ ಮಾತ್ರವಲ್ಲ ಕಾರ್ಮಿಕ ಚಳುವಳಿಯು ಸರ್ಕಾರದ ನಿಯಂತ್ರಣದಲ್ಲಿರಬೇಕು ಮತ್ತು ಸರ್ಕಾರ ಹೇಳುವ ನೀತಿಯನ್ನು ಅನುಸರಿಸಿ ಹೋಗಬೇಕು ಎಂಬ ನೀತಿಯ ವಿರುದ್ಧ ನಿಂತಿತು. ಕಾರ್ಮಿಕ ಸಂಘಟನೆ ಸರ್ಕಾರದ ಧೋರಣೆಗಳಿಗೆ ಅನುಕೂಲ ಮಾಡಿಕೊಡುವ ಸಂಘಟನೆಯಾಗುವುದನ್ನು ವಿರೋಧಿಸಿತು. ಐಎನ್‌ಟಿಯುಸಿಯು ರಾಷ್ಟ್ರದ ಅಭಿವೃದ್ಧಿ ಹೆಸರಿನಲ್ಲಿ, 'ಅಭಿವೃದ್ಧಿಗೆ ಧಕ್ಕೆ ತರದ ನೀತಿ' ಎಂಬ ಹೆಸರಿನಲ್ಲಿ ಕಾರ್ಮಿಕ ವರ್ಗದ ಏಳಿಗೆ ಪ್ರಶ್ನೆಯನ್ನು ಕೈ ಬಿಟ್ಟಿತು. ಎಐಟಿಯುಸಿಯು ಕಾರ್ಮಿಕ ವರ್ಗದ ಏಳಿಗೆಯ ಪ್ರಶ್ನೆ ಇಡೀ ಜನತೆಯ ಹಿತವನ್ನು ಏಳಿಗೆಯನ್ನು ಸಾಧಿಸುವ ಪ್ರಶ್ನೆ, ಅದು ಕಾರ್ಮಿಕ ವರ್ಗದ ಬದ್ಧತೆ ಎಂದು ಪ್ರತಿಪಾದಿಸಿತು. ಸ್ವಾತಂತ್ರ್ಯಾ ನಂತರದ 15 ವರ್ಷಗಳ ನಂತರ ಎಐಟಿಯುಸಿಯಲ್ಲಿ ಮುಖ್ಯ ನಾಯಕತ್ವದಲ್ಲಿ ಈ ಸರ್ಕಾರದ ಜೊತೆಗೂಡುವ ಧೋರಣೆ ಬೆಳೆದು ಬಂದಿತು. ಸೋವಿಯತ್ ಒಕ್ಕೂಟದ ಜೊತೆಗೂಡಿ ಭಾರತದ ಅಭಿವೃದ್ಧಿ ಆಗಬೇಕು ಎಂಬ ವಾದ, ಭಾರತ ವಿಶ್ವ ರಾಜಕೀಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ವಿರೋಧವಾದ ಶಕ್ತಿ ಎಂಬ ಪ್ರಬಲವಾದ ವಾದ ಎಲ್ಲವೂ ಈ ವಿಷಯದಲ್ಲಿ ಬೆರೆತುಕೊಂಡಿದ್ದವು.

7ನೇ ದಶಕ ಅಂದರೆ 60 ರ ದಶಕ ಮುಖ್ಯವಾದ ದಶಕ. 62 ರಲ್ಲಿ ಭಾರತ–ಚೀನಾ ಗಡಿ ಯುದ್ಧ...ಕಮ್ಯುನಿಸ್ಟರು ಚೀನಾದ ಪರ ಎಂದು ಗುರುತಿಸುವುದು, ಜೈಲಿಗೆ ಹಾಕುವಂತದ್ದು.... 67 ರಲ್ಲಿ ನಡೆದ ಮಹಾ ಚುನಾವಣೆ 10 ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡದ್ದು, ಅಲ್ಲೆಲ್ಲಾ ಕಮ್ಯುನಿಸ್ಟ್ ಪಕ್ಷಗಳ ಸಹಾಯದಿಂದ ಆಡಳಿತಕ್ಕೆ ಬಂದ ವಿರೋಧ ಪಕ್ಷಗಳ ಐಕ್ಯರಂಗ ಸರ್ಕಾರಗಳು ಇವುಗಳನ್ನು ಕಾಣುತ್ತೇವೆ.

1964 ರಲ್ಲಿ ಕಮ್ಯುನಿಸ್ಟ್ ಪಕ್ಷ ಎರಡಾದರೂ ಎಐಟಿಯುಸಿ ಒಂದಾಗಿ ಎಲ್ಲಾ ಕಾರ್ಮಿಕ ಸಂಘಟನೆಯನ್ನು ಒಳಗೊಂಡು ಸರ್ಕಾರದ ಧೋರಣೆಯನ್ನು ವಿರೋಧಿಸುವ ಕಾರ್ಮಿಕ ಸಂಘಟನೆಯಾಗಿ ಕೆಲಸ ಮಾಡಬೇಕೆಂಬ ಕಾಮ್ರೇಡ್ ಪಿ. ರಾಮಮೂರ್ತಿ ಮಂಡಿಸಿದ ನಿರ್ಣಯ ಎಐಟಿಯುಸಿಯ ಬಾಂಬೇ ಸೆಷನ್ ನಲ್ಲಿ ಅಂಗೀಕಾರವಾದರೂ ಡಾಂಗೆ ನೇತೃತ್ವದ ಎಐಟಿಯುಸಿ ನಾಯಕತ್ವ ಆ ಧೋರಣೆಯನ್ನು ಜಾರಿ ಮಾಡಲಿಲ್ಲ. ಇದರಿಂದ ಕಾರ್ಮಿಕ ಸಂಘಗಳ ಒಳಗೆ ಗೊಂದಲ ಕಂಡು ಬಂದಿತು. ಮತ್ತು ಸರ್ಕಾರದ ಜೊತೆ ನಿಲ್ಲುವ ಧೋರಣೆ ಹಾಗೂ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ವಿರೋಧಿಸುವ ಧೋರಣೆ ಅಂದರೆ ವರ್ಗ ಹೋರಾಟ ವರ್ಗ ಸಹಕಾರಗಳ ಧೋರಣೆಗಳ ನಡುವೆ ಹೋರಾಟ ಇವುಗಳ ನಡುವೆ ಆಳವಾದ ವೈರುಧ್ಯಗಳಿದ್ದವು. ಇಂತಹ ಸನ್ನಿವೇಶದಲ್ಲಿ ನಾನು ಮತ್ತು ನನ್ನಂತಹವರು ಸರಿಯಾದ ನಿಲುಮೆಯನ್ನು ತೆಗೆದುಕೊಳ್ಳಬೇಕಾಗಿ ಬಂತು.

ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಚಳುವಳಿ ಕಾರ್ಮಿಕ ವರ್ಗದ ಐಕ್ಯ ಹೋರಾಟದ ಧೋರಣೆ ಆಧಾರದಲ್ಲಿ ಹೋರಾಟವನ್ನು ಬೆಳೆಸಿತು.

ಚುನಾಯಿತ ಸಂಯುಕ್ತ ರಂಗದ ಸರ್ಕಾರವನ್ನು ಉರುಳಿಸಿದ್ದು, ಅದನ್ನು ಎದುರಿಸಿ ಕಮ್ಯುನಿಸ್ಟ್ ಪಕ್ಷ, ಚಳುವಳಿ ಬೆಳೆದದ್ದು ಮತ್ತೆ 1972 ರಲ್ಲಿ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಎದುರಿಸುವಂತಹ ಪರಿಸ್ಥಿತಿ, 70 ರ ದಶಕದಲ್ಲಿ ದೇಶದ ಪ್ರಜಾಪ್ರಭುತ್ವಕ್ಕೆ ಎದುರಾದ ಸವಾಲು, ಸ್ವತಂತ್ರ ಭಾರತದ ಸಾಧೀಸಲಾದ ಜನಪರ ಸಾಧನೆಗಳನ್ನು ಉಳಿಸಲಾಗದ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ವಿಫಲತೆಗೆ ವಿರೋಧವಾಗಿ ಮೂಡಿ ಬಂದ ಹೋರಾಟಗಳು..... ಬಿಹಾರ , ಗುಜರಾತ್‌ಗಳಲ್ಲಿ, ಭಾರತದ ಪ್ರಗತಿಗಾಗಿ ಯುವ ಜನಾಂಗದ ಹೋರಾಟ..... ಇಂದುಲಾಲ್ ಯಾಗ್ನಿಕ್ ನೇತೃತ್ವದಲ್ಲಿ ಮಹಾ ಗುಜರಾತ್ ಚಳುವಳಿ, ಬಿಹಾರದಲ್ಲಿ ಜಯಪ್ರಕಾಶ್ ನಾರಾಯಣರ 'ಸಂಪೂರ್ಣ ಕ್ರಾಂತಿ' ಚಳುವಳಿ ಮುಂತಾದವುಗಳನ್ನು ನೋಡುತ್ತೇವೆ.

1967ರ ಚುನಾವಣೆಯ ಫಲಿತಾಂಶದ ನಂತರ ಸಂಯುಕ್ತ ರಂಗ ಸರ್ಕಾರಗಳ ಅವಧಿ ಆರಂಭವಾಯಿತು.

ಕಮ್ಯುನಿಸ್ಟ್ ಚಳುವಳಿ ಕೇರಳ, ಪಶ್ಚಿಮ ಬಂಗಾಳ, ಬಿಹಾರದ ಹಲವು ಭಾಗಗಳಲ್ಲಿ, ಪಂಜಾಬ್‌ನಲ್ಲಿ ಬಲವಾಗಿತ್ತು. ಹಿಂದೆಯೇ ಕಮ್ಯುನಿಸ್ಟ್ ಚಳುವಳಿ ಮಹಾರಾಷ್ಟ್ರದಲ್ಲಿ ರಾಷ್ಟ್ರೀಯತೆಯ ರೂಪ ತಳೆದಿತ್ತು. ಡಾಂಗೆ ಗುಂಪು ನಾಯಕತ್ವದಲ್ಲಿತ್ತು. ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಕಮ್ಯುನಿಸ್ಟ್ ಪಕ್ಷ ನೇತೃತ್ವ ನೀಡಿತು. ಸಂಯುಕ್ತ ಮಹಾರಾಷ್ಟ್ರ ಆಂದೋಲನದಲ್ಲಿ ಅವಕಾಶವಾದಿತನ ತೋರಿತು. ಚುನಾವಣೆಯಲ್ಲಿ ಸಾಕಷ್ಟು ಸಾಧನೆ ಮಾಡಿದರೂ ಕಮ್ಯುನಿಸ್ಟ್ ನೀತಿಗೆ ವಿರುದ್ಧವಾಗಿ ಅವಕಾಶವಾದಕ್ಕೆ ಬಲಿಯಾಯಿತು. ಹೆಸರಿನಲ್ಲಿ ಕಮ್ಯುನಿಸ್ಟ್ ಆಗಿದ್ದು ಈ ರೀತಿಯ ವಿಭಜನವಾದ/ ಪ್ರಾದೇಶಿಕ ಸಂಕುಚಿತವಾದವನ್ನೇ ಪ್ರಧಾನವಾಗಿಟ್ಟುಕೊಂಡು ಹೋಗಿದ್ದು ದಿಟ್ಟವಾದ ಕಾರ್ಮಿಕ ಚಳುವಳಿಗೆ ಪೆಟ್ಟು



ಕಾಂ॥ ಎನ್. ಎಲ್. ಕಾಂ॥ ಎಸ್. ಎಲ್. ಉಪಾಧ್ಯಾಯ ಕಾಂ॥ ಪಿ. ರಾಮಚಂದ್ರ ರಾವ್ ಕಾಂ॥ ಎಸ್. ಸೂರ್ಯನಾರಾಯಣ ರಾವ್

ಪುಟ 10ಕ್ಕೆ

ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಮಾರ್ಕ್ಸ್‌ವಾದದ ಪ್ರಭಾವ – ಒಂದು ಕಿರುಟಿಪ್ಪಣಿ

ಜಿ.ಎನ್.ನಾಗರಾಜ್

"ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು!
ಎಂದು ನವಯುಗವಾಣಿ ಘೋಷಿಸಿದೆ ಕೇಳಿ!"
ಯುಗಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ, ಏಳಿರೈ, ಏಳಿ !
ಶ್ರೀಮಂತರಡಿಗಳಡಿ ಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ !

....

ಸತ್ತಂತೆ ಸಾಯದಿರಿ : ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ ನಮಗೆ ಮೃತ್ಯು
– ಹೊಸಬಾಳಿನ ಗೀತೆ
ಕುವೆಂಪು

ಗದರುತ್ತಿಹುದು ಗರ್ಜಿಸುತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ
ಒಳಗಿನ
ಒಳದನಿಯೊಂದು
– ತುತ್ತಿನಚೀಲ
ದ.ರಾ.ಬೇಂದ್ರೆ

ಇರುವೆಲ್ಲವನು ಎಲ್ಲಜನಕೆ ಸಮನಾಗಿಸುವ
ಸಮಬಗೆಯ ಸಮಸುಖದ ಸಮದುಃಖದ
ಸಮರಸ್ಯದ ಸಾಮಗಾನ ಲಹರಿಯ ಮೇಲೆ
ಅರಳೀತು ನಮ್ಮ ನಾಡು
– ಕಟ್ಟುವೆವು ನಾವು ಹೊಸ ನಾಡೊಂದನು
ಗೋಪಾಲಕೃಷ್ಣ ಅಡಿಗ

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು
ಬರುತಿಹೆವು ನಾವು ಬರುತಿಹೆವು
ಯುಗಯುಗಗಳಿಂದ ನೀವ್‌ತುಳಿದ
ಜನಗಳ ಕೊರಳ ದನಿಗಳೋ
ನಾವು

....

ಅಸಮಾನತೆಯನು ಸುಟ್ಟುಬಿಡಲು
ಭುಗಿಲೆದ್ದ ಬೆಂಕಿಯ ಜ್ವಾಲೆಗಳು
–
ಸಿದ್ಧಲಿಂಗಯ್ಯ



ಕರ್ನಾಟಕದ ಹಲವು ತಲೆಮಾರಿನ ಕವಿಗಳ ಈ ಸಾಲುಗಳು ಕರ್ನಾಟಕದ ಹಲವು ತಲೆಮಾರಿನ ಜನತೆಯಲ್ಲಿ ಸ್ಫೂರ್ತಿ, ಕೆಚ್ಚನ್ನು ತುಂಬಿದ ಈ ಸಾಲುಗಳನ್ನು ನೋಡಿದ ಯಾರಿಗಾದರೂ ಮಾರ್ಕ್ಸ್‌ವಾದಿ ಸಿದ್ಧಾಂತ ಇವುಗಳ ಹಿಂದಿನ ಪ್ರೇರಕ ಶಕ್ತಿ ಎಂಬುದು ಹೊಳೆಯುತ್ತದೆ. ಹೀಗೆ ಮಾರ್ಕ್ಸ್‌ವಾದ ಆಧುನಿಕ ಕನ್ನಡ ಸಾಹಿತ್ಯದ ಆರಂಭಕಾಲದಿಂದ ಇಂದಿನವರೆಗೂ ಉತ್ತಮ ಜನ ಪರ ಸಾಹಿತ್ಯದ ಆಧಾರವಾಗಿದೆ.

ಈ ಕ್ಷಣದಲ್ಲಿ ಕನ್ನಡ ಸಾಹಿತ್ಯ–ಸಾಂಸ್ಕೃತಿಕ ಲೋಕದಲ್ಲಿ ಮಾರ್ಕ್ಸ್‌ವಾದದ ಪ್ರಭಾವದ ಹುಲುಸು ಬೆಳೆ ಕಾಣುತ್ತಿಲ್ಲ ಎಂಬ ಮಾತು ಕೇಳುತ್ತಿರುವಾಗಲೂ ಕನ್ನಡ ದಿನಪತ್ರಿಕೆಗಳಲ್ಲಿ ಎಸ್.ಎಲ್.ಭೈರಪ್ಪ, ಕೆ.ಎಸ್.ನಾರಾಯಣಾಚಾರ್ಯ, ಪ್ರತಾಪಸಿಂಹ ಇವರುಗಳು ಇಂದುಕೂಡ ಮಾರ್ಕ್ಸ್‌ವಾದದ ವಿರುದ್ಧ ಸುಳ್ಳುಗಳು ಅರೆಸತ್ಯಗಳ ಮೂಲಕ ಕೀಳು ಪ್ರಚಾರಕ್ಕೆ ಇಳಿಯುವುದು ಕೂಡ ಇಂದಿಗೂ ಮಾರ್ಕ್ಸ್‌ವಾದ ಸಾಹಿತ್ಯ ಸಾಂಸ್ಕೃತಿಕ ರಂಗದಲ್ಲಿ ಎಷ್ಟು ಪ್ರಭಾವಶಾಲಿಯಾಗಿದೆ ಎಂಬುದನ್ನು ತೋರಿಸುತ್ತದೆ.

ಕನ್ನಡ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ಕರ್ನಾಟಕದಲ್ಲಿ ಕಮ್ಯುನಿಸಂನ ಮೊದಲ ಹೆಜ್ಜೆಗಳು ಮೂಡುವ ಹಲವು ವರ್ಷಗಳ ಮೊದಲೇ ಸಾಹಿತಿಗಳು ಮಾರ್ಕ್ಸ್‌ವಾದಕ್ಕೆ ಮಾರುಹೋಗಿದ್ದರು, ಎಂಬುದು ಇಂದಿಗೂ ಅನ್ವೇಷಿಸಬೇಕಾದ ಒಂದು ಪ್ರಮುಖ ಸಾಂಸ್ಕ್ರತಿಕ ಹಾಗೂ ರಾಜಕೀಯ ಘಟನೆಯಾಗಿದೆ.

ಕುವೆಂಪುರವರು 1926–28ರ ಸುಮಾರಿಗೆ ಮಾರ್ಕ್ಸ್‌ವಾದದ ಕೆಲವು ಚಿಂತನೆಗಳನ್ನೂ ಮೈಗೂಡಿಸಿಕೊಂಡ ಕುರುಹುಗಳು ಅವರ ಕವನಗಳಲ್ಲಿ ದೊರಕುತ್ತಿವೆ. 1929ರ ವೇಳೆಗಾಗಲೇ ಅವರ ಕವನಗಳು "ವಿಪ್ಲವ" "ರಕ್ತಧುನಿ" "ಶ್ರೀಮಂತರ ಕೊಳಕು" "ನೂರು ದೇವರನೆಲ್ಲ ನೂಕಾಚೆ ದೂರ" "ಭಕ್ತರ ರಕ್ತವ ಹೀರಿ ಕೊಬ್ಬಿಹರವೆಲ್ಲ" "ಇಂದೋ ನ ಾ ಳ ' ಂ ು ' ೋ ೀ ದಾಸನೀಶನಾಗಲೇ ಬೇಕು" ಎಂಬ ಪದಪುಂಜಗಳಿಂದ ತುಂಬಿದೆ. ಅವರ "ಪಾಂಚಜನ್ಯ" ವಿಪ್ಲವಕ್ಕಾಗಿ ಊದಿದ ರಣಕಹಳೆಯೆಂಬಂತೆ ಕಾಣುತ್ತಿದೆ. 1935ರಲ್ಲಿ ಅವರು "ಲೆನಿನ್"ರ ಬಗ್ಗೆಯೇ ಬರೆದ ಒಂದು ಕವನದಲ್ಲಿ "ನಿನ್ನ ಸಮತಾಬೋಧೆ ಸಿಡಿಮದ್ದು ಸ್ವಾರ್ಥತೆಯ ನುರಿದೊರೆದಹಿಸೆ" ಎಂದು ಸ್ಪಷ್ಟವಾಗಿ ಸಮತಾವಾದ –(ಕಮ್ಯುನಿಸಂ) ಅನ್ನು ಉಲ್ಲೇಖಿಸುತ್ತಾರೆ. "ಗೆಯ್ಯುವರ್ಗೇನಿಲ್ಲ ಕುಳಿತುಂಬರಿಗೆ ಬೆಲ್ಲ; ಮುಳ್ಳು ನೋವಾಳಿಂಗೆ, ಕಂಪು ಹೂವೊಡೆಯಂಗೆ" ಎಂದು ಮಾರ್ಕ್ಸ್‌ವಾದದ ಮುಲಭೂತ ಸಿದ್ಧಾಂತವನ್ನೂ ಕವನವಾಗಿಸುತ್ತಾರೆ. (1930ರಲ್ಲಿಯೇ ಅವರು ಬರೆದ "ಕಲ್ಕಿ" ಕವನ ಮಾರ್ಕ್ಸ್‌ವಾದೀ ಸಿದ್ಧಾಂತದಿಂದ ಪ್ರೇರಿತವಾದುದು ಎಂಬುದು ಸ್ಪಷ್ಟ

"ಧನಿಕರ ಮನೆಗಳು ಒಂದೆಡೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ
ಜ್ಯೋತಿಯ ಮಣಿದೀಪಗಳಲ್ಲಿ
ಕತ್ತಲು, ಕಗ್ಗತ್ತಲು ಇಲ್ಲಿ
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ"
– ಕಲ್ಕಿ
ಪಾಂಚಜನ್ಯ ಸಂಕಲನದಿಂದ
ಕುವೆಂಪು

ಅದೇ ಸಮಯದಲ್ಲಿ ಧಾರವಾಡದಲ್ಲಿ ಕೂಡ ಮಾರ್ಕ್ಸ್‌ವಾದದ ಪ್ರಭಾವ ಸಾಹಿತ್ಯಕ–ಸಾಂಸ್ಕೃತಿಕ ರಂಗದ ಮೇಲೆ ಬಿದ್ದಿರುವುದನ್ನು ಕಾಣಬಹುದು. 1928ರ ವೇಳೆಗೆ "ಮಿಂಚಿನಬಳ್ಳಿ" ಎಂಬ ಸಾಹಿತ್ಯ ಗ್ರಂಥಮಾಲೆ

"ಸಮತಾವಾದ", "ರಷ್ಯನ್ ಕ್ರಾಂತಿ" ಎಂಬ ಎರಡು ಕಿರುಪುಸ್ತಕಗಳನ್ನು ಹೊರತಂದಿದೆ. ಅದೇ ಸಮಯದಲ್ಲಿ ದ.ರಾ. ಬೇಂದ್ರೆಯವರು ಬರೆದ "ಕುರುಡು ಕಾಂಚಾಣ", "ತುತ್ತಿನ ಚೀಲ", "ಅನ್ನಯಜ್ಞ" "ಭೂಮಿತಾಯಿಯ ಚೊಚ್ಚಲ ಮಗ" ಮೊದಲಾದ ಕವನಗಳಲ್ಲಿ ಮಾರ್ಕ್ಸ್‌ವಾದ ಪ್ರಭಾವ ದಟ್ಟವಾಗಿದೆ.

ಈ ಪ್ರಕ್ರಿಯೆಗೆ ಹೋಲಿಸಿದರೆ ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಆರಂಭಿಕ ಮೊಳಕೆಗಳು ಮೂಡಿದ್ದೇ 1936–37 ರ ನಂತರ ಮತ್ತು ಪಕ್ಷವಾಗಿ ರೂಪುಗೊಂಡಿದ್ದು 1942ರ ಸಮಯದಲ್ಲಿ. ನಂತರ 50–60 ರ ದಶಕದಲ್ಲಿ ಪ್ರಗತಿಶೀಲ ಎಂಬ ಸಾಹಿತ್ಯ ಚಳುವಳಿಯೇ ಇಡೀಯಾಗಿ ಮಾರ್ಕ್ಸವಾದದ ಪ್ರಭಾವದಿಂದ ರೂಪುಗೊಂಡದ್ದು. ನಿರಂಜನರ "ಚಿರಸ್ಮರಣೆ", "ವಿಮೋಚನೆ", ಮೊದಲಾದ ಕಾದಂಬರಿಗಳು ಗೋರ್ಕಿಯುವರ "ತಾಯಿ" ಕಾದಂಬರಿ ಅನುವಾದ ಅನೇಕ ಕಥೆಗಳು ಅವರಸುತ್ತಾ ಬೆಂಗಳೂರು, ಮೈಸೂರು, ಧಾರವಾಡ–ಹುಬ್ಬಳ್ಳಿಗಳ ಸಾಹಿತ್ಯ ಗುಂಪುಗಳು ಅವರಲ್ಲಿ "ಚದುರಂಗ", ಬಸವರಾಜ ಕಟ್ಟೀಮನಿ,ತರಾಸು, ಮಾತ್ರವಲ್ಲದೆ ಗೋಪಾಲಕೃಷ್ಣ ಅಡಿಗ, ಚೆನ್ನವೀರಕಣವಿಯಂತಹ ಹಿರಿಯರೂ ಕೆಲವೊಮ್ಮೆ ಭಾಗವಹಿಸುತ್ತಿದ್ದರು. ಈ ಚರ್ಚೆಗಳ ಹಾಗೂ ಆ ಮೂಲಕ ಮಾರ್ಕ್ಸ್‌ವಾದದ ಪ್ರಭಾವ ಅವರ ಅನೇಕ ಕಾದಂಬರಿ ಕವನದಲ್ಲಿ ಕಾಣಬಹುದು.



ಇನ್ನು ಕಾರ್ಮಿಕ ಹಾಗೂ ರೈತ ಚಳುವಳಿಯ ಭಾಗವಾಗಿದ್ದ ದಿನಕರ ದೇಸಾಯಿಯವರದ್ದು ಬೇರೆಯದೇ ಆದ ಹೊಳೆ. "ಕೆಂಪು ಬಾವುಟವು ರೈತನದೋ ಕೆಂಪು ಬಾವುಟವು ಕೂಲಿಯದೋ" ಎಂದು ನೇರವಾಗಿಯೇ ಕಮ್ಯೂನಿಸಂ ಸಿದ್ಧಾಂತವನ್ನು ತಮ್ಮ ಕವನ ಹಾಗೂ ಚುಟುಕುಗಳಲ್ಲಿ ತಂದರು.

ನವೋದಯ ಹಾಗೂ ಪ್ರಗತಿಶೀಲ ಸಾಹಿತ್ಯದ ಪ್ರಗತಿ ಪರ, ಜನಪರ ಧೋರಣೆಗಳಿಗೆ ವಿರುದ್ಧ ಪ್ರತಿಕ್ರಿಯೆ ಎಂಬಂತೆ ಮೂಡಿದ ನವ್ಯ ಸಾಹಿತ್ಯದ ಸಂದರ್ಭದಲ್ಲಿ ಮಾರ್ಕ್ಸ್‌ವಾದ ಹಾಗೂ ಕಮ್ಯೂನಿಸಂ ವಿರೋಧಿಯಾದ ವಿಚಾರಗಳು ಸಾಹಿತ್ಯದ ಮೂಲಕ ಮೂಡಿದ್ದು ಕೂಡ ಅಂದು ಸಾಹಿತ್ಯದ ಮೇಲೆ ಮಾರ್ಕ್ಸ್‌ವಾದದ ಪ್ರಭಾವದ ಪ್ರಮಾಣದ ಸೂಚನೆ ಆಗಿದೆ.

ನವ್ಯದ ವ್ಯಕ್ತಿ ವಿಶಿಷ್ಟ, ರೂಪನಿಷ್ಠ ಸಾಹಿತ್ಯದ ನಂತರ ಅದರಲ್ಲಿ ಕಡೆಗಣಿಸಲ್ಪಟ್ಟ ತುಳಿತಕೊಳ್ಳಗಾದ ಜನ ಸಮುದಾಯಗಳ ಧ್ವನಿಗಳು ಸಿಡಿದು ಮೂಡಿದ "ಇಕ್ರಲಾ ಒದೀರ್ಲಾ" ಗುಡಿಸಲುಗಳು ಗುಡುಗುತ್ತಿವೆ ಬಂಗಲೆಗಳು ನಡುಗುತಿವೆ" ಎಂಬಂತಹ ಕಾವ್ಯ, "ಒಡಲಾಳ", "ಕುಸುಮಬಾಲೆ" ಯಂತಹ ಕಥೆ, ಕಾದಂಬರಿಗಳು ಮತ್ತೆ ಜನಪರ ಸಿದ್ಧಾಂತ್‌ಗಳನ್ನು ಮೊಳಗಿಸಿದವು. ಅಂಬೇಡ್ಕರ್, ಲೋಹಿಯಾ ಸಿದ್ಧಾಂತಗಳ ಜೊತೆಗೆ ಮಾರ್ಕ್ಸ್‌ವಾದವು "ಬಂಡಾಯ ಸಾಹಿತ್ಯ" ವನ್ನು ವ್ಯಾಪಕವಾಗಿ ಪ್ರಭಾವಿಸಿದೆ.

ಸಾಹಿತ್ಯ ರಂಗದ ಜೊತೆಜೊತೆಗೆ ಸಾಗಿದ ರಂಗಭೂಮಿಯ ಮೇಲೆ ಕೂಡ ಆರಂಭದಿಂದಲೂ ಮಾರ್ಕ್ಸ್‌ವಾದದ ಪ್ರಭಾವವನ್ನೂ ಕಾಣಬಹುದಾದರೂ ಸಾಹಿತ್ಯದ ಮೇಲಿನ ಪ್ರಭಾವಕ್ಕೆ ಹೋಲಿಸಿದರೆ ಬಹಳ ತೆಳುವು ಆದರೆ 60 ರ ದಶಕದ ಕೊನೆಯ ಭಾಗದಿಂದ ಆರಂಭವಾಗಿ 'ಸಮುದಾಯ' ಸಾಂಸ್ಕೃತಿಕ ಜಾಥಾಗಳು ದಲಿತ ಕಲಾವಿದರ ಮೇಲೆ ಮಾರ್ಕ್ಸ್‌ವಾದದ ದಟ್ಟ ಪ್ರಭಾವವನ್ನೂ ಕಾಣಬಹುದು.

ಹೀಗೆ ಕರ್ನಾಟಕದಲ್ಲಿ ಕಮ್ಯುನಿಸಂ ಒಂದು ಜನ ಚಳುವಳಿಯಾಗಿ ರೂಪುಗೊಳ್ಳುವ ಮೊದಲೇ ಕನ್ನಡ ಸಾಹಿತ್ಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದ ಮಾರ್ಕ್ಸ್‌ವಾದ ಆಧುನಿಕ ಕನ್ನಡ ಸಾಂಸ್ಕೃತಿಕ ಚರಿತ್ರೆಯುದ್ದಕ್ಕೂ ತನ್ನ ಪ್ರಭಾವವನ್ನು ಬೀರಿದೆ.

ಕಮ್ಯುನಿಸ್ಟ್ ಚಳುವಳಿ ಸಾಗಿ ಬಂದ ಹಾದಿ

ಪುಟ 9ರಿಂದ

ನೀಡಿತು. ಇದರಿಂದಾಗಿ ಚಳುವಳಿ ಬಲಹೀನವಾಯಿತು. 1952 ಚುನಾವಣೆಯಲ್ಲೇ ಬಾಂಬೆ ಪ್ರಾಂತದಲ್ಲಿ ಹಲವು ಎಂಪಿಗಳನ್ನು ಗೆಲ್ಲಿಸಲು ಸಾಧ್ಯವಾದರೂ ಅವಕಾಶವಾದಿ ನಿಲುವಿನಿಂದ ಚಳುವಳಿಗೆ ಹಾನಿಯಾಯಿತು. ಈಗಿನ ಕರ್ನಾಟಕದ ಬೆಳಗಾಂ- ಕಾರವಾರ ಭಾಗದಲ್ಲಿ ಬಿಪಿ ಕದಂ ಎಂಪಿಯಾಗಿ ಆಯ್ಕೆಯಾಗಿ ಆ ನಂತರ ಎಂಇಎಸ್ ಜೊತೆ ಹೋಗಿದ್ದು ನಮ್ಮ ಚಳುವಳಿಗೆ ಘಾತಕವಾಯಿತು.

ಬಂಗಾಳದಲ್ಲಿ ಆ ತಪ್ಪು ಆಗಲಿಲ್ಲ. ಮುಜಾಫರ್ ಅಹಮದ್, ನಸ್ರುಲ್ ಇಸ್ಲಾಂ ಅಂತಹವರಿಗೆ ಬಂಗಾಳಿ ರಾಷ್ಟ್ರೀಯತೆಯ ಬಗೆಗೆ ಬಾರಿ ಅಭಿಮಾನವಿತ್ತು. ಆದರೆ ಚಳುವಳಿ ಬರೀ ಬಂಗಾಳಿ ರಾಷ್ಟ್ರೀಯತೆಯ ಹಿಂದೆ ಬೀಳಲಿಲ್ಲ. ಬಂಗಾಳದಲ್ಲಿ 1967 ನಂತರ ಸಂಯುಕ್ತ ರಂಗ ಸರ್ಕಾರ ರಚನೆಯಾಯಿತು.

1965 ಕಾರ್ಮಿಕರ ಬೋನಸ್ ಕಾನೂನು ತಂದು ಬೋನಸ್ ಅನ್ನು 8.33 ರಿಂದ ಶೇ. 4 ಕ್ಕೆ ಇಳಿಸುವುದು, ಕಾರ್ಮಿಕರ ವೇತನ ಹೆಚ್ಚಳದಿಂದ ಹಣದುಬ್ಬರ ಹೆಚ್ಚುತ್ತದೆ ಎಂಬ ಕಾರಣ ಕೊಟ್ಟು ವೇತನ ಸ್ಥಂಭನ ನೀತಿ ಹೇರುವುದು ಕೇಂದ್ರ ಸರ್ಕಾರದ ಧೋರಣೆಯಾಗಿತ್ತು. ಇಂತಹ ಧೋರಣೆಗೆ, ವಿಮಾ ನೌಕರರ ವೇತನ ಪರಿಷ್ಕರಣೆ ತಡೆ ಹಾಕುವ ಕಾನೂನು ತರುವ ಪ್ರಯತ್ನಕ್ಕೆ ತಡೆ ತಂದದ್ದು ಕಮ್ಯುನಿಸ್ಟ್ ಚಳುವಳಿಯ ಸಾಧನೆ. 1971 ರ ಅವಧಿಯಲ್ಲಿ ರೈಲ್ವೆ ಕಾರ್ಮಿಕರ ಚಳುವಳಿಯನ್ನು ಮುರಿಯಲು ಯತ್ನಿಸಲಾಯಿತು.

1970 ರಲ್ಲಿ ಎಐಟಿಯುಸಿ ಒಡೆದು ಸಿಐಟಿಯು ರಚನೆಯಾಯಿತು. ಒಂದೊಂದು ಕಾರ್ಖಾನೆಯಲ್ಲೂ ಹೊಡೆದಾಟ, ಬೆಂಗಳೂರಿನ ಘನ ಕೈಗಾರಿಕೆಗಳಲ್ಲೂ ...ಬಿಇಎಲ್‌ನಲ್ಲಿಯೂ ಹೋರಾಟ. ಸರಿಯಾದ ಲೈನ್-ಧೋರಣೆ ತಿಳಿದು ಕೊಳ್ಳುವುದಕ್ಕಾಗಿ ಆಳವಾಗಿ ಅಭ್ಯಾಸ ಮಾಡಬೇಕಾಗಿ ಬಂದಿತು.

1970 ರ ನಂತರ ಜೆ.ಪಿ. ಆಂದೋಲನ ಆರಂಭವಾಯಿತು. ಪಶ್ಚಿಮ ಬಂಗಾಳದಲ್ಲಿ ಸಿದ್ಧಾರ್ಥ ಶಂಕರ ರಾಯ್ ನೇತೃತ್ವದಲ್ಲಿ ಅರೆ ಫ್ಯಾಸಿಸ್ಟ್ ದಬ್ಬಾಳಿಕೆ ನಡೆಯಿತು. ಯೂತ್ ಕಾಂಗ್ರೆಸ್ ಅಂದರೆ ಗೂಂಡಾ ಯುವಕರ ಪಡೆ. ಇಂದಿರಾ ಗಾಂಧಿಯ ಮಗ ಸಂಜಯ ಗಾಂಧಿಯದ್ದು ಇದಕ್ಕೆಲ್ಲಾ ನಾಯಕತ್ವ. ಕಾರ್ಮಿಕ ಮುಖಂಡರನ್ನು ಹೊಡೆಯುವುದು, ಬಡಿಯುವುದು. ಇದರ ಮೂರ್ತ ರೂಪವಾಗಿ ಮುಂದೆ ತುರ್ತು ಪರಿಸ್ಥಿತಿ- ಎಮರ್ಜೆನ್ಸಿ ಜಾರಿಗೆ ಬಂತು.

ತುರ್ತು ಪರಿಸ್ಥಿತಿ ಒಂದು ದಿನದಲ್ಲಿ ಬಂತು ಎಂದು ತಿಳಿಯಬಾರದು. ಸರ್ವಾಧಿಕಾರಿ ಶಕ್ತಿಗಳು ಮೊದಲು ಕಾರ್ಮಿಕ ವರ್ಗದ ಹಕ್ಕುಗಳನ್ನು ದಮನ ಮಾಡುವ ರೂಪದಲ್ಲೆ ಕಾಣಿಸಿಕೊಂಡದ್ದು. ಸಮಾಜದಲ್ಲಿ ಬೆಳೆದು ಬಂದ ವೈರುಧ್ಯಗಳು ಮೂರ್ತ ರೂಪ ಪಡೆದುಕೊಂಡವು. 1975 ರ ಜೂನ್ 25 ರಂದು ತುರ್ತು ಪರಿಸ್ಥಿತಿ ಘೋಷಿಸಲಾಯಿತು. ಜನರ ಮೂಲಭೂತ ಹಕ್ಕುಗಳು, ಪ್ರತಿಭಟನೆಯ ಹಕ್ಕು, ಪತ್ರಿಕಾ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಯಿತು. ಅದನ್ನು ವಿರೋಧಿಸುವವರನ್ನು ಜೈಲಿಗೆ ಅಟ್ಟಲಾಯಿತು. ನಾಗರೀಕ ಹಕ್ಕುಗಳಿಗಾಗಿ ಚಳುವಳಿ ನಡೆಸುವ ಕುರಿತು ಕಮ್ಯುನಿಸ್ಟ್ ಪಕ್ಷ ಆಂತರಿಕವಾಗಿ ಚರ್ಚಿಸಿತು. ಹಿಂದೆ ಪ್ರತಿಗಾಮಿ, ಬಲಪಂಥೀಯ ಎಂದು ಪ್ರತಿಪಾದಿಸಲಾದ ಅಮೆರಿಕದ ಪರವಾದ, ಯೋಜನಾ ಬದ್ಧ ಆರ್ಥಿಕ ಬೆಳವಣಿಗೆಯ ವಿರೋಧಿಗಳಾದ, ಕೋಮುವಾದಿಗಳೆನಿಸಿಕೊಂಡವರೆಲ್ಲರೂ ಇದ್ದ ನಾಲ್ಕು ಪಕ್ಷಗಳು ಸಂಸ್ಥಾ ಕಾಂಗೇಸ್, ಸೋಷಲಿಸ್ಟ್ ಪಕ್ಷ, ಲೋಕದಳ, ಜನಸಂಘ, ಇವೇ ಆ ಪಕ್ಷಗಳು. ಈ ಪಕ್ಷಗಳೆಲ್ಲಾ ಸೇರಿ ರೂಪಗೊಂಡ ಜನತಾ ಪಕ್ಷವನ್ನು ಇತರರ ಒಟ್ಟುಗೂಡುವಿಕೆಯನ್ನು 1976 ರಲ್ಲಿ ಸಿಪಿಐ(ಎಂ) ವಿರೋಧಿಸಿತು. 1977ರ ಮಾರ್ಚ್ ಹೊತ್ತಿಗೆ ಸ್ವಾಗತ ಕೋರಿ ಬೆಂಬಲ ನೀಡಿತು. ಉತ್ತರ ಭಾರತದಲ್ಲೂ ಮತ್ತು ತಮಿಳು ನಾಡಿನಲ್ಲಿ ಕಾಂಗ್ರೆಸ್ ನೆಲ ಕಚ್ಚಿತು. ಕೇರಳ, ಕರ್ನಾಟಕ, ಆಂಧ್ರಗಳಲ್ಲಿ ಸರ್ವಾಧಿಕಾರಿ ನೀತಿಗಳ ವಿರುದ್ಧ ಹೋರಾಟ ಮುಂದುವರಿಯಿತು.

ಸಿಪಿಐ ಪಕ್ಷ ಬಟಿಂಡಾ ಅಧಿವೇಶನದ ನಂತರ ಡಾಂಗೆ ಗುಂಪನ್ನು ದೂರ ಇಟ್ಟು ಜನತೆಯ ಚಳುವಳಿಯ ಜೊತೆಯಲ್ಲಿ ಬರುವುದಾಗಿ ತೀರ್ಮಾನಿಸಿತು.

ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲಿ ಕಾರ್ಮಿಕ ಹಕ್ಕುಗಳ ನಿರಾಕರಣೆ ಏನು ಆಗಿದ್ದಿತೋ ಅದರ ಸಾಧನೆಗಾಗಿ ಸಿಐಟಿಯು, ಮತ್ತು ಸಿಪಿಐ(ಎಂ) ಗಳು ಮುಂದೆ ನಿಂತವು. ಈ ಹೋರಾಟದಲ್ಲೇ ಬಲಿಷ್ಟವಾಗಿ ಬೆಳೆದು ಬಂದವು. ಇದರೊಂದಿಗೆ ಎಐಟಿಯುಸಿ, ಸಿಐಟಿಯು ಗಳ ನಡುವಿನ ಸಂಘರ್ಷಗಳೂ ಇದ್ದವು.

ಬೆಂಗಳೂರು ನಗರದಲ್ಲಿ 80ರ ದಶಕದಲ್ಲಿ ದೈಹಿಕ ದಾಳಿಗಳು ನಡೆದವು. ಬಂಡವಾಳಿಗರನ್ನು ಸೋಲಿಸಲೂ ತೀವ್ರವಾಗಿ ಸೆಣಸ ಬೇಕಾಯಿತು.

ಈ ನಡುವೆ ಪಕ್ಷದ ಜಲಂಧರ್ ಮಹಾಧಿವೇಶನ ಪಕ್ಷದೊಳಗಿನ ತಪ್ಪುಗಳನ್ನು ಗುರುತಿಸಿ ಸರಿಯಾದ ಧೋರಣೆ ರೂಪಿಸಿತು. ಅದರ ಜೊತೆಗೆ ಸಾಲ್ಕಿಯಾ ಪ್ಲೀನಂ ನಡೆದು ಸಂಘಟನಾತ್ಮಕ ಪ್ರಶ್ನೆಗಳಲ್ಲಿಯೂ ಮಾರ್ಗದರ್ಶನ ದೊರೆಯಿತು. ಈ ಎಲ್ಲವುಗಳ ಆಧಾರದಲ್ಲಿ ಕರ್ನಾಟಕದಲ್ಲಿ ಸಿಪಿಐ(ಎಂ), ಸಿಐಟಿಯುಗಳನ್ನು ಬಲಗೊಳಿಸಲು ಸಾಧ್ಯವಾಯಿತು.

1989ರ ದೆಹಲಿಯ 'ಅಲ್ಲಾ ಬೋಲ್'- ಅಸಂಘಟಿತ ಕಾರ್ಮಿಕರ ಹೋರಾಟದ ಮಾದರಿಯಲ್ಲಿ ಕರ್ನಾಟಕದಲ್ಲಿ ಅಸಂಘಟಿತ ಕಾರ್ಮಿಕರ ಸೆಪ್ಟೆಂಬರ್ ಚಳುವಳಿಯನ್ನು ನಡೆಸಲಾಯಿತು.

90ರ ದಶಕ ಬರುವಾಗ ಕಾರ್ಮಿಕ ವರ್ಗದ ಚಳುವಳಿಯ ಸ್ವರೂಪವೇ ಬದಲಾಗಿ ಹೋಯಿತು. ಜವಳಿ ಕಾರ್ಖಾನೆಗಳೆಲ್ಲಾ ಮುಚ್ಚಿ ಹೋದವು. ಸಾರ್ವಜನಿಕ ಕಾರ್ಖಾನೆಗಳ ಮೇಲೆ ಸರ್ಕಾರ ಬಂಡವಾಳ ಹೂಡಿಕೆಯನ್ನು ನಿಲ್ಲಿಸಿತು ಮತ್ತು ನೇಮಕಾತಿಯನ್ನು ಕೂಡ ಮಾಡಿಕೊಳ್ಳದೇ ಅಂಗನವಾಡಿ ಮಾದರಿಯಲ್ಲಿ ವೇತನ ಕೊಡದೆ ಗೌರವಧನದ ಹೆಸರಿನಲ್ಲಿ ದುಡಿಸಿಕೊಳ್ಳುವ ಕ್ರಮ ಬೆಳೆದು ಬಂದಿತು. ಆ ಕಾರ್ಮಿಕ ವರ್ಗವನ್ನೇ ಸಂಘಟಿಸಿ ಚಳುವಳಿ ಬೆಳೆಸುವ ಕೆಲಸ ನಡೆದಿದೆ. ಕೆಲವೇ ನಗರಗಳಿಗೆ ಸೀಮಿತವಾಗಿದ್ದ ಚಳುವಳಿ ಗ್ರಾಮಾಂತರ ಪ್ರದೇಶಗಳಲ್ಲೂ ಬೆಳೆದು ಬರುತ್ತಿದೆ.

1990-2010 ರ ನಡುವೆ ಕಾರ್ಮಿಕ ವರ್ಗದ ಸಂರಚನೆ ನಗರೀಕರಣದ ಬೆಳವಣಿಗೆಯೊಂದಿಗೆ ಬದಲಾಗಿದೆ. ಶೋಷಕ ವರ್ಗಗಳ ಕೈಯಲ್ಲಿ ಸಂಪತ್ತಿನ ಕ್ರೋಢೀಕರಣವಾಗಿದೆ. ಬಂಡವಾಳಶಾಹಿ ಪಕ್ಷಗಳಲ್ಲಿ ಮಾಫಿಯಾ ಗ್ಯಾಂಗುಗಳದ್ದೇ ಪೂರ್ತಿ ಪ್ರಭಾವವಾಗಿದೆ. ಉದಾರೀಕರಣ ವಿರೋಧಿ ಚಳುವಳಿಯಲ್ಲಿ ವರ್ಗ ಹೋರಾಟವನ್ನು ಹರಿತಗೊಳಿಸದ ಕಡೆ,

ಕೈಗಾರಿಕೆಯ ಸಂರಚನೆ ಬದಲಾದಾಗ ಗುರುತಿಸಿ ಸರಿಯಾದ ನಿಲುಮೆ ತೆಗೆದುಕೊಳ್ಳಲಾಗದೇ ಹೋದಂತಹ ಕಡೆ ಉದಾಹರಣೆಗೆ ದಕ್ಷಿಣ ಕನ್ನಡದಲ್ಲಿ ಕೈಗಾರಿಕೆಗಳು ಗುಡಿ ಕೈಗಾರಿಕೆ ಸ್ವರೂಪ ಪಡೆದಾಗ ವರ್ಗ ಆಧಾರದಲ್ಲಿ ಚಳುವಳಿಯನ್ನು ತೆಗೆದು ಹೋಗಲು ಆಗದೇ ಹೋದಾಗ ಕೋಮುವಾದಿಗಳಿಗೆ ಅವಕಾಶವಾಗಿದೆ. ಕೆಜಿಎಫ್ ಚಿನ್ನದ ಗಣಿಯ ಸಂಬಂಧವಾಗಿ ಚಿನ್ನ ಸಿಗದೇ ಇರುವುದರ ಬಗೆಗೆ ಹಾಗೂ ಆರ್ಥಿಕತೆಯ ವಿಷಯವಾಗಿ ಸರಿಯಾಗಿ ಗ್ರಹಿಸದೇ ಇರುವುದು, ಮಧ್ಯಪ್ರವೇಶ ಮಾಡುವುದರಲ್ಲಿಯೂ ಕೊರತೆಯಿತ್ತು.

ಕಾರ್ಮಿಕ ಚಳುವಳಿ, ಕಮ್ಯುನಿಸ್ಟ್ ಚಳುವಳಿ ಬಲಗೊಳ್ಳದಂತೆ ತಡೆಯುವ ಸಾಮ್ರಾಜ್ಯ ಶಕ್ತಿಗಳ ಪಿತೂರಿಯೂ ಇತ್ತು. ಬೆಂಗಳೂರಿನಲ್ಲಿ ಕಾರ್ಮಿಕ ಚಳುವಳಿಯ ವಿರುದ್ಧ ಕನ್ನಡ ಚಳುವಳಿಯನ್ನು ಎತ್ತಿ ಕಟ್ಟಲಾಯಿತು. ಎಚ್.ಇ..ಟಿ. ಯಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಈ ಮೂಲಕ ಧಕ್ಕೆ ತರಲಾಯಿತು. ಬಿ.ಎ.ಎಲ್.ನಲ್ಲಿಯೂ ಅಂತಹ ಪ್ರಯತ್ನ ನಡೆಯಿತು. ಆದರೆ ಸಿಐಟಿಯು ಕನ್ನಡ ವಿರೋಧಿಯಾಗದೇ ಕನ್ನಡಿಗರು ಮತ್ತು ಕನ್ನಡೇತರರ ನಡುವೆ ಸೌಹಾರ್ದತೆ ಬೆಳೆಸಲು ಗಮನ ನೀಡಲಾಯಿತು. ಕನ್ನಡ ಭಾಷೆ, ಸಂಸ್ಕೃತಿಯ ಉಳಿಸುವಲ್ಲಿ ಕಾರ್ಮಿಕ ವರ್ಗದ ಪಾತ್ರ ವಹಿಸುವಂತೆ ಶ್ರಮಿಸಲಾಯಿತು.

ಕೆ.ಜಿಎಫ್‌ನಲ್ಲಿ ಕಾರ್ಮಿಕರು ಮುಖ್ಯವಾಗಿ ದಲಿತ ವಿಭಾಗಕ್ಕೆ ಸೇರಿದ್ದವರಾಗಿದ್ದರು. ಅಲ್ಲಿ ದಲಿತ ಪ್ರತ್ಯೇಕತಾವಾದ ತರುವುದು ಮುಖ್ಯ ದಾಳಿ. ಇದನ್ನು ನಾವು ಎದುರಿಸುವಲ್ಲಿ ಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಕೋಲಾರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷ ದುರ್ಬಲವಾಗಿತ್ತು. ಆಗ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿ ಕಮ್ಯುನಿಸ್ಟ್ ಪಕ್ಷ ಮಾತ್ರವೇ ಇದ್ದದ್ದು. ಆ ನಂತರದಲ್ಲಿ ಜನತಾ ಪಕ್ಷ ಹುಟ್ಟಿಕೊಂಡಾಗ ಶ್ರೀಮಂತ ರೈತರು ಅದನ್ನು ಸೇರಿದರು.

ದಾವಣಗೆರೆಯಲ್ಲಿ ಕಾಂ. ಸೂರಿಯವರನ್ನು ಕೊಲೆ ಕೇಸಿನಲ್ಲಿ ಸಿಕ್ಕಿಸಲಾಯಿತು. ಅಲ್ಲಿ ಸಿಪಿಐ ಮಾತ್ರವೇ ಇರಬೇಕು ಎಂಬ ಧೋರಣೆ ಇತ್ತು. ಹರಿಹರ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ತುರ್ತು ಪರಿಸ್ಥಿತಿ ವಿರುದ್ದದ ಚಳುವಳಿ ಏನು ಬೆಳೆದು ಬಂದಿದೆ ಆ ಮೂಲಕ ಮತ್ತು ಕಾರ್ಮಿಕ ವರ್ಗದ ಬೇಡಿಕೆ ಇಟ್ಟು ಸಿಪಿಐ ನ ಬಲಹೀನತೆ ಆಧಾರದಲ್ಲಿ ಸೋಲಿಸಲು ಸಾಧ್ಯವಾಯಿತು. ದಾಂಡೇಲಿ, ಬೆಳಗಾಂನಲ್ಲಿ ಸಂಘಟನೆ ಉಳಿಸಿಕೊಳ್ಳುವುದು ಸಾಧ್ಯವಾಯಿತು. ಎಲ್ಲಿ ಪಕ್ಷದ ನಿಲುವಿನಲ್ಲಿ ನಿಲ್ಲದೇ ಹೋಗುವವೋ ಅಲ್ಲಿ ಸಂಘಟನೆ ಬಲಹೀನವಾಗುವುದು. ಗುಲ್ಬರ್ಗಾದಲ್ಲಿ ಸಂಘಟನೆ ಉಳಿಸಿಕೊಳ್ಳುವುದು ಸಾಧ್ಯವಾಯಿತು. ಶಾಬಾದ್‌ನಲ್ಲಿ ಸಿಪಿಐ ಬಲವಾಗಿತ್ತು. ಆದರೆ ಅಲ್ಲಿನ ಎಬಿಎಲ್ ಕಾರ್ಖಾನೆಯಲ್ಲಿ ಹಾಗೂ ರಾಯಚೂರಿನ ಹಟ್ಟಿಯಲ್ಲಿ ಮೇಲುಗೈ ಸಾಧಿಸಲು ಸಾಧ್ಯವಾಯಿತು.

ಪಕ್ಷ ವಿಭಜನೆಯಾದಾಗ ಬೆಂಗಳೂರಿನಲ್ಲಿ ಹೆಚ್ಚಿನ ಸದಸ್ಯರು ಸಿಪಿಐನ ಜೊತೆಗೆ ಉಳಿದರು. ಕೆಜಿಎಫ್‌ನಲ್ಲಿ ಹೆಚ್ಚಿನವರು ಸಿಪಿಐ(ಎಂ) ಜೊತೆಗೆ ಬಂದರು. ದಕ್ಷಿಣ ಕನ್ನಡದಲ್ಲಿ ಬಲಿಷ್ಠ ಭಾಗ ಸಿಪಿಐ(ಎಂ) ಜೊತೆಗೆ ಬಂದಿತು. ಬಂಟ್ವಾಳ, ವಿಟ್ಲಗಳಲ್ಲಿ ಸಿಪಿಐನ ಹೆಚ್ಚಿನ ಬಲ ಉಳಿಯಿತು. ದಾವಣಗೆರೆ, ಹುಬ್ಬಳ್ಳಿ, ಬೀದರ್, ಶಾಬಾದ್ ಕ್ಷೇತ್ರಗಳಲ್ಲಿ ಸಿಪಿಐ ಹಿಡಿತ ಉಳಿಸಿಕೊಂಡಿತು. ಮುಂದಿನ ದಿನಗಳಲ್ಲಿ ಸಾರ್ವಜನಿಕ ಕೈಗಾರಿಕಾ ಕಾರ್ಮಿಕರ ಇತ್ಯಾದಿ ಆಂದೋಲನ ಮೂಲಕ ಸಿಐಟಿಯು, ಸಿಪಿಐ(ಎಂ) ಪಕ್ಷ ಬೆಳೆಯಿತು.

ಬರದ ಬೇಗೆಯಲ್ಲಿ ರಾಯಚೂರು ಅಪೌಷ್ಠಿಕತೆಯಲ್ಲಿ ಮಕ್ಕಳು.. ಮರಿಗಳು....

ಮಲ್ಲಯ್ಯ ಜಾಲಹಳ್ಳಿ

ಬರ ಎಂಬುದು ರಾಯಚೂರು ಜಿಲ್ಲೆಗೆ ಬೆಂಬಿಡದ ಭೂತವಿದ್ದಂತೆ. ವರ್ಷ ಬಿಟ್ಟರೆ ಮತ್ತೊಂದು ವರ್ಷಕ್ಕೆ ಕಡ್ಡಾಯವೆಂಬಂತೆ ಬರುತ್ತಲೇ ಇರುತ್ತದೆ. 2009ರಲ್ಲಿ ಮುಂಗಾರು ಬರಕ್ಕೆ ಬಲಿಯಾಗಿ ಜನತೆ ಕಂಗಾಲಾಗಿರುವಾಗಲೆ ಶತಮಾನದಲ್ಲೆ ಕಂಡೂ ಕೇಳಿ ಅರಿಯದಂತ ಪ್ರವಾಹ ಸಪ್ಟಂಬರ್ ಕೊನೆ ತಿಂಗಳಲ್ಲಿ ಭೀಕರವಾಗಿ ಎರಗಿತು. 2010ರಲ್ಲಿ ನೆಮ್ಮದಿಯ ಉಸಿರುಬಿಡುತ್ತಿರುವಾಗಲೇ 2011ರಲ್ಲಿ ಮತ್ತೆ ಭೀಕರ ಬರ ಎದುರಾಗಿದೆ. ವಾಡಿಕೆಗಿಂತ 153ಮೀ.ಮೀ ಮಳೆ ಕಡಿಮೆಯಾಗಿ ಬಿತ್ತನೆ ಸಹ ಸರಿಯಾಗಿ ಆಗಲಿಲ್ಲ. ಮಳೆ ಕಡಿಮೆ ಬಿದ್ದಿದ್ದರಿಂದ ಅಂತರ್ಜಲ ಕುಸಿದು, ಕುಡಿಯುವ ನೀರಿಗೆ ತೊಂದರೆಯಾಯ್ತು; ಕೊಳವೆ ಬಾವಿಗಳಿಗೆ ನೀರು ಸಿಕ್ಕುತ್ತಿಲ್ಲ. ಬಿತ್ತಿದ ಬೆಳೆಗಳು ನೀರಿಲ್ಲದೆ ಹಾಳಾಗುತ್ತಿವೆ. ಒಂದು ವೇಳೆ ನೀರು ಸಿಕ್ಕರೂ ಗ್ರಾಮೀಣ ಭಾಗಕ್ಕೆ 3 ಫೇಸ್ ವಿದ್ಯುತ್ ಸಿಗುವುದು 3–4 ಗಂಟೆ ಮಾತ್ರ. ಹೀಗಾಗಿ 1 ಅಥವಾ 2 ಎಕರೆಗೆ ನೀರು ಕೊಟ್ಟರೆ ಅದೇ ಹೆಚ್ಚು. ನೀರಿನ ಕೊರತೆಯಿಂದಾಗಿ ಬೆಳೆಗಳು ಸರಿಯಾಗಿ ಇಳುವರಿ ಕೊಡುವುದಿಲ್ಲ. ಬೆಳೆದಂತ ಬೆಳೆ ಮಾರುಕಟ್ಟೆಗೆ ಒಯ್ದರೆ ವೈಜ್ಞಾನಿಕ ಬೆಲೆ ಇಲ್ಲ. ಕಳೆದ ವರ್ಷ 6500 ರೂಪಾಯಿಗಳಿಗೆ ಕ್ವಿಂಟಾಲ್ ಹತ್ತಿ ಮಾರಾಟವಾಗಿದ್ದರೆ ಈ ವರ್ಷ ಅದು 3000: ತೊಗರಿ ಕ್ವಿಂಟಾಲ್ ಗೆ 4500ರಂತೆ ವ್ಯಾಪಾರಾಟವಾಗಿದ್ದರೆ ಈಗ 2500ರಿಂದ 3000ರೊಳಗೆ ಹೊಯ್ದಾಡುತ್ತಿದೆ. ಹೀಗಾಗಿ ತಿಂಗಳಿಗೆ ಒಬ್ಬರು–ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕುಕ್ಕಲ ಕ್ಯಾಂಪಿನಲ್ಲಿ ಹತ್ತಿ ಮತ್ತುಭತ್ತ ಬೆಳೆದ ರೈತ ಕೆ.ಸತ್ಯನಾರಾಯಣ ಈ ವಾರದಲ್ಲೇ ಆತ್ಮಹತ್ಯೆ ಮಾಡಿಕೊಂಡ.

ಇಷ್ಟೆಲ್ಲಾ ಅನಾಹುತಗಳು ನಡೆದರೂ ಜಿಲ್ಲಾಡಳಿತ ಕೇವಲ ಸಭೆಗಳನ್ನು ನಡೆಸಿ ಮೋಜು ನೋಡುತ್ತಿದೆ ವಿನಃ ಪರಿಹಾರ ಕ್ರಮಕ್ಕೆ ಮುಂದಾಗಿಲ್ಲ. ಕವಾಯಿಸುವುದರಲ್ಲೇ ಮಗ್ನರಾದ ಜನ ,ಪ್ರತಿನಿಧಿಗಳು ರೈತರು–ಕೂಲಿಕಾರರು–ಬಡವರು ದಿನನಿತ್ಯ ಹೇಗೆ ಬದುಕುತ್ತಿದ್ದಾರೆಂಬುದನ್ನು ನೋಡುವ ಗೋಜಿಗೆ ಹೋಗಿಲ್ಲ. ಅವರು ಸಭೆಗಳಲ್ಲಿ ಕುಳಿತು ಆ ಕೊಳವೆ ಬಾವಿಯಲ್ಲಿ ನೀರಿಲ್ಲ; ಈ ಕೊಳವೆ ಬಾವಿಯನ್ನು ಫ್ಲೆಶರ್ ಮಾಡಿಸಿ ಎಂದಾಡುತ್ತಾರೆ ವಿನಃ ಸಮಗ್ರ ಪರಿಸ್ಥಿತಿಯ ಚಿಂತನೆಗೆ ಹೋಗುತ್ತಿಲ್ಲ.

ರೈತರು ಎಕರೆವಾರು ಪರಿಹಾರ ಕೊಡಿ, ಸಾಲಮನ್ನಾ ಮಾಡಿ, ಬೆಳೆವಿಮೆ ಕೊಡಿಸಿ ಎನ್ನುತ್ತಿದ್ದಾರೆ. ಇವಾವುದೂ ಆಡಳಿತದ ಅಥವಾ ಜನಪ್ರತಿನಿಧಿಗಳ ಕಿವಿಗೆ ಹೋಗುತ್ತಿಲ್ಲ. ಜಿಲ್ಲೆಯಲ್ಲಿ ಆಡಳಿತವೆಂಬದೇ ಇಲ್ಲ.

4 ಲಕ್ಷ ಕೂಲಿಕಾರರು ಪ್ರತಿದಿನ ಸರಕಾರ



ಕೆಲಸಕೊಟ್ಟೀತು ಅಂತ ಕಾಯುತ್ತಿದ್ದರೆ ಸರಕಾರ ಅವರನ್ನು ಮರೆತಿದೆ. ಹೀಗಾಗಿ ಜನ ಬದುಕಲು ಬೆಂಗಳೂರಿನಂತ ದೊಡ್ಡ ನಗರಗಳಿಗೆ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ಹೋಗುತ್ತಿದ್ದಾರೆ. ಬರಗಾಲ ಕಾಮಗಾರಿ ಕೆಲಸಗಳನ್ನು ಆರಂಭಿಸಿ ಎಂದು ಕೇಳಿದರೆ ಉದ್ಯೋಗಖಾತ್ರಿಯಲ್ಲಿ ಕೆಲಸ ಮಾಡಿರಿ ಎನ್ನುತ್ತಿದೆ ಜಿಲ್ಲಾಡಳಿತ. ಆದರೆ ಜಿಲ್ಲೆಯಲ್ಲಿ ಉದ್ಯೋಗಖಾತ್ರಿ ಯೋಜನೆ ನೆಲಕಚ್ಚಿದೆ. 2011–2012ರ ಸಾಲಿಗೆ 85 ಕೋಟಿಗೆ ಅನುಮೋದನೆ ನೀಡಲಾಗಿತ್ತು. 35 ಕೋಟಿ ಹಣ ಆಯಾ ತಾಲೂಕುಗಳಿಗೆ ಬಿಡುಗಡೆಯಾಯಿತು. 8299 ಕಾಮಗಾರಿಗಳನ್ನು ಒಳಗೊಂಡ ಕ್ರಿಯಾಯೋಜನೆ ಸಿದ್ಧವಾಗಿ 92ಲಕ್ಷ ಮಾನವರಿಗೆ ದಿನಗಳ ಕೆಲಸ ಕೊಡುವ ಗುರಿ ಹೊಂದಲಾಗಿತ್ತು.

ಆದರೆ ಇತ್ತೀಚಿನ ವರದಿ ನೋಡಿದಾಗ 8299 ಕಾಮಗಾರಿಗಳಲ್ಲಿ ಆರಂಭವಾದದ್ದು ಕೇವಲ 2775 ಕಾಮಗಾರಿಗಳು ಮಾತ್ರ, ಇದರಲ್ಲಿ ಪೂರ್ಣಗೊಂಡ ಕಾಮಗಾರಿಗಳು ಕೇವಲ 342 ಮಾತ್ರ, 92ಲಕ್ಷ ಮಾನವ ದಿನಗಳ ಕೆಲಸದಲ್ಲಿ ಆಗಿದ್ದು ಕೇವಲ 8ಲಕ್ಷ ಮಾನವ ದಿನಗಳ ಕೆಲಸ ಮಾತ್ರ, ಅಂದರೆ 9 ತಿಂಗಳಲ್ಲಿ 10% ಭಾಗದ ಸಾಧನೆ ಕೂಡ ಆಗಿಲ್ಲ. 85 ಕೋಟಿ ಅನುದಾನದಲ್ಲಿ ಕೇವಲ 16 ಕೋಟಿ ಮಾತ್ರ ಖರ್ಚಾಗಿದ್ದು ಇನ್ನೂ 69 ಕೋಟಿ ಉಳಿದಿದೆ. 3 ತಿಂಗಳಲ್ಲಿ 69ಕೋಟಿ ಖರ್ಚು ಮಾಡಲು ಸಾಧ್ಯವೇ? 84ಲಕ್ಷ ಮಾನವ ದಿನಗಳ ಕೆಲಸ ಕೊಡಲು ಸಾಧ್ಯವೆ? ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳು ಮೌನಕ್ಕೆ ಶರಣಾಗಿ ಬರಕ್ಕೆ ಬಲಿಯಾದ ಜನತೆಗೆ ಮೋಸ ಮಾಡುತ್ತಿದ್ದಾರೆ.

ಒಂದು ಕಡೆ ರೈತರಿಗೆ ಎಕರೆವಾರು ಪರಿಹಾರವಿಲ್ಲ, ಸಾಲಮನ್ನಾ ಇಲ್ಲ, ವಿಮೆ ಸೌಕರ್ಯವಿಲ್ಲ, ಅಲ್ಪಸ್ವಲ್ಪ ಬೆಳೆದದ್ದಕ್ಕೆ ಬೆಂಬಲ ಬೆಲೆ ಇಲ್ಲ, ಕುಡಿಯುವ ನೀರಿಲ್ಲ, ವಿದ್ಯುತ್ ಕೊರತೆ, ಮೇವಿನ ಕೊರತೆ, ಆಹಾರದ ಕೊರತೆ ಕಾಡುತ್ತಿದ್ದರೆ ಕೂಲಿಕಾರರಿಗೆ ಬದುಕೆ ಇಲ್ಲದಂತಹ ಸ್ಥಿತಿಯಲ್ಲಿ ಬರಗಾಲ ಅಧ್ಯಯನ ತಂಡ ಬಂತು. ಬಂದು ಬರೆದುಕೊಂಡು ಹಾಗೆಯೇ ಹೋಯಿತು. ಜನರು ಮುಂದೇನು ? ಎಂದು ಕಾಯುತ್ತಲೇ ಇದ್ದಾರೆ.

ಇವುಗಳ ಜೊತೆಗೆ ಜಿಲ್ಲೆಯಲ್ಲಿ ಮಕ್ಕಳ ಅಪೌಷ್ಟಿಕತೆ ಮತ್ತು ಮಹಿಳೆಯರ ರಕ್ತಹೀನತೆ ಪ್ರಶ್ನೆಗಳು ಗಂಭೀರವಾಗಿವೆ. ದೇವದುರ್ಗ ತಾಲೂಕಿನಲ್ಲಿ ಅಪೌಷ್ಟಿಕತೆಯಿಂದಾದ ಮಕ್ಕಳ ಸಾವಿನ ಪ್ರಶ್ನೆ ಗಂಭೀರವಾದರೂ ಸರಕಾರ ಎಚ್ಚೆತ್ತುಕೊಳ್ಳದೇ ಇದ್ದಾಗ ಹೈಕೋರ್ಟು ಛೀಮಾರಿ ಹಾಕಿದ ಮೇಲೆ ಎಚ್ಚೆತ್ತುಕೊಂಡು ಜಿಲ್ಲೆಗೆ ತಜ್ಞರನ್ನು ಕಳಿಸಿತು. ಆ ತಜ್ಞರು ಜಿಲ್ಲೆಯಲ್ಲಿರುವ 2.4ಲಕ್ಷ ಚಿಕ್ಕ ಮಕ್ಕಳನ್ನು (0-6ವರ್ಷದೊಳಗಿನನವರು) ಪರೀಕ್ಷಿಸಿ 97.18 ಮಕ್ಕಳು ಕಡಿಮೆ ತೂಕ ಹೊಂದಿದ್ದಾರೆಂದೂ 725 ಮಕ್ಕಳು ಈಗಾಗಲೇ ಚಿಂತಾಜನಕ ಸ್ಥಿತಿಯಲ್ಲಿವೆಯೆಂದೂ ಗುರುತಿಸಿದರು. ಮುಂದೇನು ಎಂಬುದಕ್ಕೆ ಸ್ಪಷ್ಟ ಸೂಚನೆಗಳಿಲ್ಲ. ಇನ್ನೊಂದೆಡೆ ಮಹಿಳೆಯರು ಕೂಡ ದೊಡ್ಡ ಸಂಖ್ಯೆಯಲ್ಲಿ ರಕ್ತಹೀನತೆಗೆ ಒಳಗಾಗಿದ್ದು, ಇಡೀ ಜಿಲ್ಲೆ ಅನಾರೋಗ್ಯದ ಗೂಡಾಗಿದೆ. ಹೀಗಾಗಿ ಜಿಲ್ಲೆಗೆ ವಿಶೇಷವಾದ ಆಹಾರ ವಿತರಣೆ ಪ್ಯಾಕೇಜ್ ಘೋಷಿಸಬೇಕಾಗಿದೆ.

ಮೊದಲೇ ಭೂ ಮಾಲೀಕರ ಹಿಡಿತದಲ್ಲಿ ನಲುಗುತ್ತಿರುವ ಜಿಲ್ಲೆಯಲ್ಲಿ, ಸಿಂಗಾಪುರ, ತಿಡಿಗೋಳ, ಸಾಲಗುಂದ, ಗುಂಜಳ್ಳಿ, ಚಿಕ್ಕಹೆಸರೂರು, ನಾಗರಾಳ, ರಾಮದುರ್ಗ, ಈಚನಾಳ ಮುಂತಾದ ಘಟನೆಗಳು ದಲಿತರ ಮೇಲೆ ಎಂಥಾ ಮಟ್ಟದ ದೌರ್ಜನ್ಯಗಳಾಗುತ್ತಿವೆ ಎಂಬುದಕ್ಕೆ ಸಾಕ್ಷಿಯಾಗಿವೆ.

ಮೇಲಿನ ಎಲ್ಲಾ ಪ್ರಶ್ನೆಗಳಲ್ಲದೇ ಪಡಿತರಕ್ಕೆ ಸಂಬಂಧಿಸಿ ಆನ್ ಲೈನ್ ನೊಂದಣಿ ರದ್ದಾಗಬೇಕು. ಭತ್ತಕ್ಕೆ ಕ್ವಿಂಟಾಲ್ ಗೆ 2000ರೂ ಬೆಂಬಲ ಬೆಲೆ ನೀಡಬೇಕು. ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ 371ಕಲಂ ತಿದ್ದುಪಡಿಯಾಗಬೇಕು – ಇತ್ಯಾದಿ ಪ್ರಶ್ನೆಗಳ ಬಗ್ಗೆ ಜಿಲ್ಲೆಯ 10ನೇ ಸಮ್ಮೇಳನ ಕೈಗೊಂಡ ನಿರ್ಣಯಗಳು ಜಾರಿಯಾಗಬೇಕೆಂದು ಒತ್ತಾಯಿಸಿ ಜಿಲ್ಲಾಸಮಿತಿ ಜಿಲ್ಲಾಧಿಕಾರಿ ಕಛೇರಿ ಮುಂದೆ 22–12–2011ರಂದು ಧರಣಿ ಸತ್ಯಾಗ್ರಹ ಹಮ್ಮಿಕೊಂಡಿತ್ತು.

ಅಂದು ನಡೆದ ಧರಣಿ ಸತ್ಯಾಗ್ರಹದಲ್ಲಿ ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿ ಮತ್ತು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಸುರೇಶ,ಎಚ್. ಪದ್ಮ, ಡಿ.ಎಸ್.ಶರಣಬಸವ, ಹನುಮಗೌಡ ಮದರಕಲ್, ಕೆ. ಶಿವಾನಂದ, ನರಸಿಂಹಪ್ಪ, ಜಿಲ್ಲಾ ಸಮಿತಿ ಸದಸ್ಯರಾದ ಕೆ.ಜಿ.ವಿರೇಶ್, ಜಿ.ಎಸ್.ವೀರಭದ್ರ, ಚೆನ್ನಬಸಯ್ಯ, ತಿಪ್ಪಯ್ಯ ನಾಯಕ, ನರಸಣ್ಣನಾಯಕ, ಶಂಶುದ್ದೀನ, ಕೆ.ರಂಗನಾಥ ಮತ್ತು ಕೆ. ಸರಸ್ವತಿ ನೇತೃತ್ವದಲ್ಲಿ ಪಕ್ಷದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜನರ ಪಾಲಿಗೆ ಇಲ್ಲದ ಸರ್ಕಾರ

ಪುಟ 5ರಿಂದ

ವಿದ್ಯಾಲಯಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಜಾತೀಯತೆ ತಾಂಡವಾಡುತ್ತಿದೆ.

ಬಿ.ಜೆ.ಪಿ. ಸರ್ಕಾರ ತನ್ನ ಆಡಳಿತ ಅವಧಿಯಲ್ಲಿ ಇಡೀ ರಾಜ್ಯವನ್ನು ಎಲ್ಲಾ ರಂಗಗಳಲ್ಲಿ ದಿವಾಳಿ ಎಬ್ಬಿಸಿ ಹಿಂದೆಂದೂ ಕಾಣದಂತಹ ವ್ಯಾಪಕ ಭ್ರಷ್ಟಚಾರವನ್ನು ಎಲ್ಲಾ ರಂಗಗಳಲ್ಲಿ ತುಂಬಿ ಬಿಟ್ಟಿತು. ಇನ್ನೊಂದು ಕಡೆ ಪ್ರಜಾಪ್ರಭುತ್ವದ ಜೀವಾಳದ ರಾಜಕೀಯ ರಂಗವನ್ನು ವ್ಯಾಪಾರೀಕರಣಗೊಳಿಸಿ ಇಡೀ ರಾಜ್ಯದ ರಾಜಕಾರಣವನ್ನು ಗಣಿ ಮಾಫಿಯಾ ಭೂ ಮಾಫಿಯಾ ಕಳ್ಳರಿಗೆ ಒಪ್ಪಿಸಿಬಿಟ್ಟಿತು. ಹೇಗಾದರೂ ಮಾಡಿ ಅಧಿಕಾರ ದಕ್ಕಿಸಿಕೊಳ್ಳಬೇಕು ಸಿಕ್ಕಿದ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂಬ ಒಂದೇ ಉದ್ದೇಶದಿಂದ ಕೋಟಿಗಟ್ಟಲೆ ಹಣ ಸುರಿದ ಶಾಸಕರನ್ನು ಪಕ್ಷಾಂತರಗೊಳಿಸುವುದು ಮತ್ತು ಚುನಾವಣೆಗಳಲ್ಲಿ ಗೆಲ್ಲುವುದು ಇದು ಬಿ.ಜೆ.ಪಿ.ಯ ಏಕೈಕ ಅಜೆಂಡಾವಾಯಿತು. ಇದರಿಂದಾಗಿ ರಾಜ್ಯದಲ್ಲಿ ತೀವ್ರರೀತಿಯ ರಾಜಕೀಯ ಬಿಕ್ಕಟ್ಟು ಉಂಟಾಗಿ ಸರ್ಕಾರ ಯಾವಾಗ ಬೀಳುತ್ತೋ ಎಂಬ ಅತಂಕದಲ್ಲೇ ಸರ್ಕಾರ ಕಾಲ ಕಳಿಯುವಂತಾಗಿ ಇಡಿ ಆಡಳಿತಾಂಗವೇ ಕುಸಿದು ಬಿದ್ದು ನಿಷ್ಕ್ರಿಯವಾಗಿದೆ.

ಇನ್ನೊಂದು ಕಡೆ ಬಿ.ಜೆ.ಪಿ. ಅಧಿಕಾರಕ್ಕೆ ಬಂದಾಗಲಿಂದ ದಲಿತರ ಮೇಲೆ ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿಹೆಚ್ಚಾಗಿ ದಲಿತರಿಗೆ ಬಹಿಷ್ಕಾರದ ಕೆಲಸಗಳು ಅವ್ಯಾಹತವಾಗಿ ನಡೆಯುತ್ತಿದೆ. ಇನ್ನೊಂದು ಕಡೆ ಮಹಿಳೆಯರ ಮೇಲೆ ಅತ್ಯಾಚಾರಗಳ ವರದಕ್ಷಿಣೆಯ ಹೆಸರಿನಲ್ಲಿ ಮಹಿಳೆಯರಿಗೆ ಕಿರುಕುಳ ಮತ್ತು ಕೊಲೆಗಳು ನಡೆಯುತ್ತಿವೆ. ನಗರ ಪ್ರದೇಶಗಳಲ್ಲಿ ಮಹಿಳೆಯರ ಮೇಲಿನ ದಬ್ಬಾಳಿಕೆಗಳು ಹೆಚ್ಚಾಗುತ್ತಿದೆ. ಇತ್ತೀಚಿಗೆ ಮಹಿಳೆಯರಿಗೆ ಸಂಬಂಧಪಟ್ಟ ಒಂದು ಅಘಾತಕಾರಿ ಅಂಶ ಬೆಳಕಿಗೆ ಬಂದಿದೆ. ನಗರ ಪ್ರದೇಶಗಳಲ್ಲಿ ಮುಖ್ಯವಾಗಿ ಮೈಸೂರು ಮುಂತಾದ ದೊಡ್ಡನಗರಗಳಲ್ಲಿ ಯುವತಿಯರ ನಾಪತ್ತೆ ಪ್ರಕರಣಗಳು ಹೆಚ್ಚಾಗುತ್ತಿವೆ. ಸರ್ಕಾರದ ಈ ಸರ್ವಾಂಗೀಣ ವಿಫಲತೆಯಿಂದಾಗಿ ರಾಜ್ಯದಲ್ಲಿ ಆರ್ಥಿಕ ಹಿಂಜರಿಕೆ ರಾಜಕೀಯ ಅಧಃ ಪತನ ಮತ್ತು ಅನಿಶ್ಚಿತತೆಯಿಂದ ಕೂಡಿದ ಬಿಕ್ಕಟ್ಟು ಉಂಟಾಗಿದೆ. [illegible] ಸಮಾಜಿಕ ರಂಗದಲ್ಲಿ [illegible] ಇಡೀ ದೇಶದಲ್ಲೇ [illegible] [illegible]

ಜನಶಕ್ತಿ

ದಲಿತ ಮಹಿಳೆಯ ಪತ್ತೆಗೆ ಒತ್ತಾಯಿಸಿ ಪ್ರತಿಭಟನೆ

ಪುಟ 6ರಿಂದ

ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

. ದಲಿತ ಹಕ್ಕುಗಳ ಸಮಿತಿಯ ದ.ಕ.ಜಿಲ್ಲಾ ಸಂಚಾಲಕ ಕೃಷ್ಣಪ್ಪ ಕೊಂಚಾಡಿ ಮಾತನಾಡಿ, ಒಬ್ಬ ಬುದ್ಧಿಮಾಂದ್ಯ ಮಗಳನ್ನೂ ಒಳಗೊಂಡು ಮೂರು ಹೆಣ್ಣು ಮಕ್ಕಳಿಗೆ ಸುನೀತಾ ಏಕಮಾತ್ರ ಆಧಾರವಾಗಿದ್ದರು. ಆಕೆಯ ನಾಪತ್ತೆಯಿಂದ ಕುಟುಂಬ ಕಂಗಾಲಾಗಿದೆ. ಆಕೆ ಕಾಣೆಯಾಗಿ 2 ತಿಂಗಳ ಬಳಿಕವೂ ಏನಾಗಿರಬಹುದು ಎಂದು ಗುರುತಿಸಲಾಗದ ಪೋಲೀಸ್ ಇಲಾಖೆಯನ್ನು ತರಾಟೆಗೆ ತೆಗೆದುಕೊಂಡರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಪಿಎಂ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ಸಿಪಿಎಂ ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಸಿಪಿಎಂ ಜಿಲ್ಲಾ ಸಮಿತಿ ಸದಸ್ಯೆ ಪದ್ಮಾವತಿ ಶೆಟ್ಟಿ, ದಲಿತ ಹಕ್ಕುಗಳ ಮಂಗಳೂರು ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಮಾತನಾಡಿದರು. ಇನ್ನೂರರಷ್ಟು ಜನರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ದಲಿತ ಹಕ್ಕುಗಳ ಉಳ್ಳಾಲ ವಲಯ ಕಾರ್ಯದರ್ಶಿ ರೋಹಿದಾಸ್ ಸ್ವಾಗತಿಸಿ ಅಧ್ಯಕ್ಷ ನಾರಾಯಣ ತಲಪಾಡಿ ಧನ್ಯವಾದವಿತ್ತರು.

ಏಕೆ ಇಂತಹಾ ಟೊಳ್ಳು ಕಾಳಜಿ, ಪ್ರಧಾನಿಗಳೇ?

ಪುಟ 7 ರಿಂದ

ಪ್ರಧಾನ ಮಂತ್ರಿಗಳು ಹೇಳುವ ಜನರ ಜೀವನಾಧಾರದ ಭದ್ರತೆ ಈ ರೀತಿಯಲ್ಲಿ ಸಾಧ್ಯವೇ? ಹೀಗೆ ಬಿಟ್ಟು ಕೊಟ್ಟ ತೆರಿಗೆಗಳನ್ನು ವಸೂಲಿ ಮಾಡಿ ನಮಗೆ ಅತ್ಯಂತ ಅಗತ್ಯವಾಗಿರುವ ಮೂಲರಚನೆಗಳನ್ನು ಕಟ್ಟಿದರೆ ಇದು ಸಾಧ್ಯ. ಇದು ದೊಡ್ಡ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸಿ ಬದುಕುಳಿಯಲು ಅವಕಾಶ ಮಾಡಿ ಕೊಡುತ್ತದೆ. ಇದದೀಗ ಕೆಳಗಿಳಿಯುತ್ತಿರುವ ನಮ್ಮ ಒಟ್ಟು ಆಂತರಿಕ ಬೇಡಿಕೆಯನ್ನು ಹೆಚ್ಚಿಸಿ ನಮ್ಮ ತಯಾರಿಕಾ ವಲಯಕ್ಕೆ ಬಹುವಾಗಿ ಬೇಕಾಗಿರುವ, ಆಮೂಲಕ ಒಟ್ಟಾರೆ ಬೆಳವಣಿಗೆಗೆ ಬೇಕಾಗಿರುವ ಆವೇಗವನ್ನು ಒದಗಿಸಬಲ್ಲದು.

ವೈರುಧ್ಯಮಯ

ಇಂಧನ ಭದ್ರತೆಯನ್ನು ಸಾಧಿಸುವುದಕ್ಕೆ ಸಂಬಂಧಪಟ್ಟಂತೆ ಪ್ರಧಾನ ಮಂತ್ರಿಗಳು ಭಾರತದ ಇಂಧನ ಬೆಲೆಗಳನ್ನು ಜಾಗತಿಕ ದರಗಳೊಂದಿಗೆ ಹೊಂದಿಸುವ ದಾಟಿಯಲ್ಲಿ ಮಾತಾಡಿದರು. ಭಾರತದಲ್ಲಿನ ನಿಜವಾದ ಉತ್ಪಾದನಾ ಖರ್ಚು ಏನೇ ಇರಲಿ, ಈ ರೀತಿಯ ಹೊಂದಾಣಿಕೆ ಯೆಂದರೆ, ಭಾರತದ ಜನಸಾಮಾನ್ಯ ತೈಲ ಕಂಪನಿಗಳ ಬೃಹತ್ ಪ್ರಮಾಣದ 'ಕಡಿಮೆ ವಸೂಲಿ'ಯನ್ನು (ನಿಜವಾದ ನಷ್ಟವಲ್ಲ, 'ಆಮದು ಬೆಲೆಸಾಮ್ಯತೆ'ಯ ಆಧಾರದಲ್ಲಿ ಲೆಕ್ಕಹಾಕಿದ ತೋರಿಕೆಯ 'ನಷ್ಟ) ಭರ್ತಿ ಮಾಡಲು ಸತತವಾಗಿ ಬೆಲೆಯೇರಿಕೆಗಳನ್ನು ಎದುರಿಸುತ್ತಲೇ ಇರಬೇಕು. ಇಂಡಿಯನ್ ಆಯಿಲ್ ಕಾರ್ಪೊರೇಶನ್ನಿನ ಇತ್ತೀಚಿನ ಆಡಿಟ್ ಆದ ಲೆಕ್ಕಪತ್ರದ ಪ್ರಕಾರ ಅದಕ್ಕೆ ನಷ್ಟವೇನೂ ಆಗಿಲ್ಲ, ಬದಲಿಗೆ ರೂ.10,998 ಕೋಟಿ ಲಾಭವಾಗಿದೆ. ಆದರೆ ಮೀಸಲು ಮಿಗುತೆ ರೂ. 49,470 ಕೋಟಿ. ಇನ್ನು ವಿದ್ಯುತ್ತನ್ನೂ ಜಾಗತಿಕ ಬೆಲೆಗಳೊಂದಿಗೆ ಹೊಂದಾಣಿಕೆ ಮಾಡಿದರೆ, ಜನಗಳ ಮೇಲೆ ಇನ್ನಷ್ಟು ಹೊರೆ, ಕಾರ್ಪೊರೇಟುಗಳಿಗೆ ಮತ್ತಷ್ಟು ಲಾಭ.

ಅದೇ ರೀತಿ, ಪರಿಸರ ಭದ್ರತೆಯ ಕಾಳಜಿಗಳು ನಮ್ಮ ಜನಗಳ ಇಂಧನ ಭದ್ರತೆಯ ಅಗತ್ಯಗಳಿಗೆ ವಿರುದ್ಧವಾಗಿರಲು ಸಾಧ್ಯವಿಲ್ಲ. ಇತ್ತೀಚಿನ ದರ್ಬಾನ್ ವಾತಾವರಣ ಬದಲಾವಣೆ ಶೃಂಗ ಸಭೆಯಲ್ಲಿ, ಮುಂದುವರೆದ ದೇಶಗಳಿಂದ ಅವುಗಳ ಇಂಗಾಲ ಉತ್ಸರ್ಜನೆಯನ್ನು ಕಡಿಮೆ ಮಾಡುವ ವಚನವನ್ನು ಪಡೆಯದೆಯೇ, ಭಾರತ ಏಕಪಕ್ಷೀಯವಾಗಿ ನಮ್ಮ ಉತ್ಸರ್ಜನೆಗಳನ್ನು ಕಡಿತ ಮಾಡುವ ಮಾತು ಕೊಟ್ಟಿದೆ. ಅಮೆರಿಕಾದಲ್ಲಿನ ತಲಾ ಉತ್ಸರ್ಜನೆ ಭಾರತದ 20 ಪಟ್ಟು. ಇಂಧನ ಉತ್ಪಾದನೆಯನ್ನು ಗಮನಾರ್ಹವಾಗಿ ಹೆಚ್ಚಿಸದೆ ಬಡತನ ಮಟ್ಟಗಳನ್ನು ಇಳಿಸುವುದು ಸಾಧ್ಯವಾಗದು ಎಂದು ಪ್ರಧಾನಮಂತ್ರಿಗಳೇ ಹೇಳಿದ್ದಾರೆ. ಇಂದು ನಮ್ಮ ಕುಟುಂಬಗಳಲ್ಲಿ ಮೂರನೇ ಒಂದು ಭಾಗಕ್ಕೂ ಹೆಚ್ಚು ನೇರ ವಿದ್ಯುತ್ ಸಂಪರ್ಕವನ್ನು ಪಡೆದಿಲ್ಲ, ಸುಮಾರು ಮೂರನೇ ಎರಡರಷ್ಟು ಕುಟುಂಬಗಳಿಗೆ ಮೂಲಭೂತ ನೈರ್ಮಲ್ಯ ವ್ಯವಸ್ಥೆಯಿಲ್ಲ. ನಮ್ಮ ಮಕ್ಕಳಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಕುಪೋಷಣೆಯಿಂದ ನರಳುತಿದ್ದರೆ, ಪ್ರತಿ ಮೂರು ಗರ್ಭಿಣಿಯರಲ್ಲಿ ಇಬ್ಬರು ರಕ್ತಹೀನತೆಯಿಂದ ನರಳುತ್ತಿದ್ದಾರೆ.

ಹೀಗೆ, ನಮ್ಮ ಪ್ರಧಾನ ಮಂತ್ರಿಗಳ ಕಾಳಜಿಗಳು ಅತ್ಯಂತ ವೈರುಧ್ಯಮಯವಾಗಿವೆ ಮತ್ತು ಆ ಮೂಲಕ ನಮ್ಮ ಜನಗಳ ಜೀವನಾಧಾರದ ಭದ್ರತೆಯ ಬಗ್ಗೆ ಅವರ ಕಾಳಜಿ ಟೊಳ್ಳಾಗಿ ಬಿಟ್ಟಿದೆ. ಜನಗಳ ಜೀವನಾಧಾರ ಉತ್ತಮಗೊಳ್ಳಬೇಕಾದರೆ, ನಮ್ಮ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಪಥವನ್ನು ಬದಲಿಸಲೇ ಬೇಕು. ಏಕೆಂದರೆ ಇವುಗಳ ಉದ್ದೇಶ ಖಾಸಗಿ ಲಾಭಗಳನ್ನು ಉಬ್ಬಿಸುವುದಷ್ಟೇ. 2012ರ ವರ್ಷ ಜನಗಳ ಒತ್ತಡದ ವರ್ಷವಾಗಬೇಕಾಗಿದೆ, ಜನಗಳನ್ನು ಬೃಹತ್ ಪ್ರಮಾಣದಲ್ಲಿ ಅಣಿನೆರೆಸಿ, ಜನಗಳಿಗೆ ನಿಜವಾದ ಜೀವನಾಧಾರ ಭದ್ರತೆಯನ್ನು ಒದಗಿಸಬಲ್ಲ ಒಂದು ಉತ್ತಮ ಭಾರತವನ್ನು ಕಟ್ಟುವ ದಿಕ್ಕಿನಲ್ಲಿ ಸರಕಾರ ತನ್ನ ಧೋರಣೆಗಳ ದಿಕ್ಕನ್ನು ಬದಲಿಸುವಂತೆ ಅದರ ಮೇಲೆ ಒತ್ತಡ ಹೇರಬೇಕಾಗಿದೆ.

ಮಹಿಳೆಯರಿಗೆ ಸ್ಥಾನವೆಲ್ಲಿ?

ಪುಟ 4 ರಿಂದ

ಆಸ್ಪತ್ರೆ ಯಾವುದೂ ಇರಲಿಲ್ಲ. ಬಸುರಿಯರು ಬಾಣಂತಿರಯರು ನರಕದಂಥ ಜೀವನ ನಡೆಸಿದರು. ಕಡ ಪಕ್ಷ ಕೊಟ್ಟ ಶೆಡ್ ಗಳಲ್ಲಿ ಚಿಕ್ಕ ಬಚ್ಚಲು ಸಹ ಕಟ್ಟಲಿಲ್ಲ. ವಿಕೋಪ ನಿರ್ವಹಣಾ ಕಾಯ್ದೆ ಜಾರಿ ಮಾಡಬೇಕಾದ ಸರಕಾರವು ತನ್ನಿಂದ ಏನೂ ಮಾಡಲಾಗುವುದಿಲ್ಲ ಎಂದು ಸ್ಪಷ್ಟ ಕೈ ಚೆಲ್ಲಿತು. ಪ್ರವಾಹ ಬಂದು ಊರೆಲ್ಲ ಕೊಚ್ಚಿ ಹೋದ ಮೇಲಿಂದ ಇಲ್ಲಿವರೆಗೆ ಸರಕಾರ ಮಾಡಿರುವ ಘನಂದಾರಿ ಕೆಲಸವೆಂದರೆ ಮನೆಗಳು ಕೊಡುವ ನೆಪದಲ್ಲಿ ಪರಿಹಾರಧನವನ್ನು ಕೊಳ್ಳೆ ಹೊಡೆದದ್ದು. ಮತ್ತು ಅತ್ಯಂತ ಕಳಪೆ ಮನೆಗಳನ್ನು ಕಟ್ಟಿದ್ದು. ಅದೂ ಕೇವಲ 10% ಸಹ ಇಲ್ಲ.

ರಾಜ್ಯದಲ್ಲಿ ಮಹಿಳೆಯರ ಮೇಲಿನ ಬಲತ್ಕಾರ, ದೌರ್ಜನ್ಯ, ವರದಕ್ಷಿಣೆ ಕೊಲೆ ಪ್ರಕರಣಗಳು ವ್ಯಾಪಕವಾಗಿವೆ. ಮಹಿಳೆಯರು ಕಾಣೆಯಾಗುತ್ತಿರುವರು. ಹೊಟ್ಟೆಯಲ್ಲಿರುವಾಗಲೇ ಕಾಣೆಯಾಗುವುದು ಒಂದು ಕಡೆಯಾದರೆ ಹರೆಯದ ಯುವತಿಯರು ನಾಪತ್ತೆಯಾಗುತ್ತಿರುವರು. ಬೆಳಗಾಂನಂಥ ಪ್ರದೇಶದಲ್ಲಿ ಗುಜ್ಜರ್ ಕಿ ಶ್ಯಾದಿಯ ಹೆಸರಿನಲ್ಲಿ ಮಹಿಳೆಯರ ಸಾಗಾಟಿಕೆ ನಡೆದಿರುವುದಕ್ಕೆ ಸರಕಾರ ಕಣ್ಣು ಮುಚ್ಚಿ ಕುಳಿತಿದೆ. ಬಿಜೆಪಿಯ ಸಂಸದರೊಬ್ಬರು ಮಹಿಳಾ ಸಾಗಾಣಿಕೆಯಲ್ಲಿ ಭಾಗಿಯಾದ ಪ್ರಕರಣವೊಂದು ಬಯಲಿಗೆ ಬಂದಿರುವಾಗ ಬಿಜೆಪಿಯ ಸರಕಾರದಿಂದ ಏನು ನಿರೀಕ್ಷಿಸಬಹುದು? ತನ್ನ ಕುರ್ಚಿ ಉಳಿಸಿಕೊಳ್ಳಲು ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿದ್ದ ಬಿಜೆಪಿಯ ಡಜನ್ ಗಟ್ಟಲೆ ಮಂತ್ರಿಗಳು, ಶಾಸಕರು ಜೇಲು ಪಾಲಾಗಿರುವುದು ಕರ್ನಾಟಕದ ಕರಾಳ ಇತಿಹಾಸವೆಂದೇ ಹೇಳಬೇಕಿದೆ. ಸ್ವತ: ಮುಖ್ಯಮಂತ್ರಿಗಳಾಗಿದ್ದವರು ಜೇಲು ಸೇರಬೇಕಾಯಿತು.! ಕರ್ನಾಟಕವನ್ನು ಕೊಳ್ಳೆ ಹೊಡೆಯಲು ಮಾತ್ರ ಅಧಿಕಾರ ಹಿಡಿದ ಬಿಜೆಪಿಯು ತನ್ನ ಹೊಲಸುತನವನ್ನು ಮುಚ್ಚಿಕೊಳ್ಳಲು ಕೋಮುದಂಗೆ ನಡೆಸಿ ಎಲ್ಲವೂ ಮರೆ ಮಾಚಲು ಪ್ರಯತ್ನಿಸುತ್ತಿದೆ. ಇದೊಂದು ದೇಶದ್ರೋಹವಲ್ಲದೆ ಮತ್ತೇನು?

ಎಲ್ಲಿ ಆಯೋಗ?

ಇನ್ನು ಸರಕಾರದ ವ್ಯಾಪ್ತಿಯಲ್ಲಿರುವ ಇಲಾಖೆ ಮತ್ತು ಆಯೋಗಗಳು ಮಾಡಿರುವುದೇನು ಎಂಬುದನ್ನು ಒಮ್ಮೆ ಗಮನಿಸಬೇಕು. ಮಹಿಳಾ ಆಯೋಗಕ್ಕೆ ಅಧ್ಯಕ್ಷರನ್ನೇ ನೇಮಿಸಲಿಲ್ಲ. ಈಗ ಇರುವ ಅಧ್ಯಕ್ಷರು ಮಹಿಳಾ ಸಮಸ್ಯೆಗಳ ಬಗ್ಗೆ ಚಕಾರವೆತ್ತುವುದಿಲ್ಲ. ಹೆಣ್ಣು ಭ್ರೂಣ ಹತ್ಯೆಗಳು ಹೆಚ್ಚುತ್ತಿದ್ದರೂ ಭ್ರೂಣಹತ್ಯೆ ತಡೆಗಾಗಿ ಇರುವ ಕಮಿಟಿಯನ್ನು ಸಕ್ರಿಯಗೊಳಿಸುವ ಕ್ರಮಗಳನ್ನು ಕೈಗೊಳಲಿಲ್ಲ. ಬದಲಿಗೆ ಭ್ರೂಣ ಹತ್ಯೆ ಮಾಡುವವರೇ ಆ ಕಮಿಟಿಯಲ್ಲಿದ್ದು ತಮ್ಮ ದಾರಿ ಸುಗಮ ಮಾಡಿಕೊಂಡಿರುವರು. ಮಹಿಳೆಯರು ಕೆಲಸ ಮಾಡುವ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆ ಸಮಿತಿಗಳನ್ನು ರಚಿಸಬೇಕೆಂಬ ಒತ್ತಡವಿದ್ದರೂ ಸರಕಾರ ಕಿವುಡು ಮತ್ತು ಕುರುಡುತನ ಪ್ರಕಟಿಸುತ್ತಿದೆ.

ಆಮಿಷಗಳು!

ತಾನು ಮಹಿಳೆಯರ ಸೋದರ. ಅದಕ್ಕಾಗಿ ಭಾಗ್ಯಲಕ್ಷ್ಮಿ ಯೋಜನೆ ತರುತ್ತಿರುವೆನು ಮತ್ತು ಸೋದರಿಯರಿಗೆ ಸೀರೆ ಕೊಡುತ್ತಿರುವೆನು ಎಂದು ಬೊಗಳೆ ಬಿಟ್ಟಿದ್ದು ಯಡಿಯೂರಪ್ಪ. ಇವರ ಸೋದರಗಿರಿ ಎಷ್ಟು ಬೋಗಸ್ ಎಂಬುದು ಭಾಗ್ಯಲಕ್ಷ್ಮಿ ಬಾಂಡ್ ಸಿಗದೆ ಒದ್ದಾಡುತ್ತಿರುವವರನ್ನು ಸಂದರ್ಶಿಸಬೇಕು. ಬಿಪಿಎಲ್ ಕಾರ್ಡು ಇದ್ದವರಿಗೆ ಮಾತ್ರ ಭಾಗ್ಯಲಕ್ಷ್ಮಿ ಬಾಂಡ್ ಎಂಬ ಕಾನೂನು ಮಾಡಿದ್ದರು. ಬಿಪಿಎಲ್ ಕಾರ್ಡು ಇರುವುದು ಯಾರ ಹತ್ತಿರ?? ನಿಜವಾದ ಬಡವರಲ್ಲಿ ಬಿಪಿಎಲ್ ಕಾರ್ಡಿಲ್ಲ. ಮತ್ತೆ ಶ್ರೀಮಂತರಿಗೆ ಭಾಗ್ಯ ಒದಗಿತು. ಅಗ್ಗದ ಸೀರೆಗಳನ್ನು ಕೊಟ್ಟು ಪ್ರಚಾರ ಗಿಟ್ಟಿಸುವ ತಂತ್ರ ಮಹಿಳಾವಿರೋಧಿ ನಿಲುವಲ್ಲದೆ ಮತ್ತೇನು?? ಮಹಿಳೆಯರ ಕೈಗೆ ಕೆಲಸ ಕೊಟ್ಟು ಸ್ವಾಭಿಮಾನಿಗಳನ್ನಾಗಿ ಮಾಡದೆ ಅಗ್ಗದ ಸೀರೆ ಕೊಟ್ಟು ಬೇಡುವವರನ್ನಾಗಿಸುವುದು ಒಪ್ಪಲು ಸಾಧ್ಯವೇ?

ಇದೇ ಹೊತ್ತಿನಲ್ಲಿ ರಾಜ್ಯದಲ್ಲಿ ಮಕ್ಕಳ ಮರಣದ ಪ್ರಮಾಣದಲ್ಲಿ ಏರಿಕೆಯಾಗಿರುವುದು ಬಯಲಿಗೆ ಬಂದಿದೆ. ಅದರಲ್ಲಿಯೂ ಅಪೌಷ್ಟಿಕತೆಯಿಂದ ಸಂಭವಿಸುತ್ತಿರುವ ಸಾವುಗಳು ಅತ್ಯಂತ ದಾರುಣವಾದದ್ದು. ಸರಿಯಾದ ಪೌಷ್ಟಿಕ ಆಹಾರ ಸಿಗದೆ ಸತ್ತಿರುವುದನ್ನು ಮರೆಮಾಚಲಾಗುತ್ತಿದೆ. ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಪಡಿಸಲಾರದ್ದಕ್ಕೆ ಈ ಸಾವುಗಳು ಘಟಿಸುತ್ತಿವೆ ಎಂಬುದನ್ನು ಒಪ್ಪಲು ಕೇಂದ್ರ ಸರಕಾರವಾಗಲಿ ರಾಜ್ಯ ಸರಕಾರವಾಗಲಿ ಒಪ್ಪಲು ಸಿದ್ದವಿಲ್ಲ. ರಾಯಚೂರು ಜಿಲ್ಲೆಯಲ್ಲಿ ಸಂಭವಿಸಿದ ಸಾವುಗಳಿಗಾಗಿ ಶಿಕ್ಷೆ ಸಿಗಬೇಕಾಗಿರುವುದು ಸರಕಾರಕ್ಕೆ. ಆದರೆ ಅಂಗನವಾಡಿ ಅಕ್ಕಂದಿರರನ್ನು ಸಸ್ಪೆಂಡ್ ಮಾಡಿ ತನ್ನ ಮಹಿಳಾವಿರೋಧಿ ನಿಲುವನ್ನು ಮತ್ತೆ ಜಾಹಿರುಗೊಳಿಸಿತು.

ಹೀಗೆ ಕರ್ನಾಟಕವನ್ನು ಆಳುತ್ತಿರುವ ಬಿಜೆಪಿಯು ಮಹಿಳಾ ವಿರೋಧಿಯಾಗಿ ನಡೆದುಕೊಳ್ಳುತ್ತಿರುವಾಗ ರಾಜ್ಯದಲ್ಲಿ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಏನು ಮಾಡುತ್ತಿತ್ತು?? ಅದೂ ಸಹ ತನ್ನ ಭ್ರಷ್ಟಾಚಾರದ ಪುಟಗಳನ್ನು ಅವಲೋಕಿಸುತ್ತ ಕಾಲ ಹರಣ ಮಾಡಿತು. ತಾನೂ ಸಹ ಜೈಲಿಗೆ ಹೋಗುವ ಭಯದಲ್ಲಿ ಕಾಲ ತಳ್ಳತೊಡಗಿದೆ. ವಿರೋಧ ಪಕ್ಷವಾಗಿ ನಾಡಿನ ಹಿತ ಕಾಪಾಡುವ ಯಾವ ಕ್ರಮಗಳನ್ನು ಕೈಗೊಳ್ಳದಿರುವುದು ನಾಚಿಗ್ಗೇಡಿನ ಸಂಗತಿಯಲ್ಲದೆ ಮತ್ತೇನು? ಜೆಡಿ(ಎಸ್) ಹಿಂದೆ ಬಿಜೆಪಿಯೊಂದಿಗೆ ಕೈಜೋಡಿಸಿ ಅಧಿಕಾರ ಬಾಚಿಕೊಂಡು 'ಜಾತ್ಯಾತೀತ ಅಂದರೇನು?' ಎಂದು ಕೇಳಿದ್ದಕ್ಕೆ ರಾಜ್ಯದ ಜನ ಸರಿಯಾಗಿಯೇ ಉತ್ತರ ಕೊಟ್ಟಿರುವರು. ಆದರೆ ಅದರ ಅಜೆಂಡಾದಲ್ಲಿಯೂ ಸಹ ಮಹಿಳೆಯರ ಬದುಕು ಹಸನು ಮಾಡುವ ಯಾವ ಕಾರ್ಯಕ್ರಮವಿಲ್ಲದಿರುವುದು ಜನ ನೋಡಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಲೋಕಪಾಲ : ಸರಕಾರೀ ಸಂಸ್ಥೆಯಾಗಿಸುವ ಯುಪಿಎ ಕಸರತ್ತು

ಹಿಂದಿನ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ, ಲೋಕಸಭೆ ಲೋಕಪಾಲ ಮಸೂದೆಯನ್ನು ಅಂಗೀಕರಿಸಿದರೂ, ರಾಜ್ಯಸಭೆ ಈ ಬಗ್ಗೆ ನಿರ್ಧರಿಸದೆ ಮುಂದೂಡಲ್ಪಟ್ಟ ಸುದ್ದಿ ಬಂದಿತ್ತು. ಈ ರೀತಿ ಮುಂದೂಡಿಕೆಗೆ ಯುಪಿಎ–2 ಸರಕಾರ ರಚಿಸಿದ ನಾಟಕವೇ ಕಾರಣ ಎಂಬುದೀಗ ಸ್ಪಷ್ಟವಾಗಿದೆ. ಲೋಕಪಾಲ ಮಸೂದೆಯನ್ನು ಬಲಪಡಿಸಲು ಸಿಪಿಐ(ಎಂ) ಸೇರಿದಂತೆ ಪ್ರತಿಪಕ್ಷಗಳು ಮುಂದಿಟ್ಟ ತಿದ್ದುಪಡಿಗಳನ್ನು ತಡೆಯುವಷ್ಟು ಬಲ ತನಗಿಲ್ಲ ಎಂದು ಕಂಡುಕೊಂಡ ಸರಕಾರ ತನ್ನ ಮಿತ್ರಪಕ್ಷಗಳನ್ನು ನಾನಾರೀತಿಯಲ್ಲಿ ಬಳಸಿಕೊಂಡು ರಾಜ್ಯಸಭೆಯನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡುವಂತೆ ಮಾಡಿದೆ ಎಂಬ ಆಪಾದನೆಯನ್ನು ಅದೀಗ ಎದುರಿಸುತ್ತಿದೆ. ಇದು ಸಂಸತ್ತಿನ ಬಗ್ಗೆ ಯುಪಿಎ–2 ಸರಕಾರ ಹೊಂದಿರುವ ತಿರಸ್ಕಾರ ಭಾವನೆಯನ್ನು ಪ್ರದರ್ಶಿಸಿದೆ, ಸಂಸದೀಯ ಪ್ರಜಾಪ್ರಭುತ್ವದ ಬಹಿರಂಗ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಇದನ್ನು ಖಂಡಿಸಿದೆ.


ಇದರ ಹಿಂದಿನ ದಿನವಷ್ಟೇ ಯುಪಿಎ–2 ಘಟಾನುಘಟಿಗಳು ಲೋಕಪಾಲ ವ್ಯವಸ್ಥೆಗೆ ಸಂವಿಧಾನಿಕ ಸ್ಥಾನಮಾನ ನೀಡುವ ಮಸೂದೆ ಬಿದ್ದು ಹೋದಾಗ ಇದು ಪ್ರಜಾಪ್ರಭುತ್ವಕ್ಕೆ ನಾಚಿಕೆಗೇಡಿನ ದಿನ ಎಂದಿದ್ದರು! ವಾಸ್ತವವಾಗಿ ಇದನ್ನೊಂದು ಸರಕಾರೀ ಸಂಸ್ಥೆಯಾಗಿಸುವ ಆಶಯವೆ ಈ ಸರಕಾರಕ್ಕೆ ಇದ್ದದ್ದು ಎಂಬುದನ್ನು ಮಸೂದೆಯನ್ನು ನೋಡಿದಾಗಲೇ ಸಂದೇಹ ಮೂಡಿಸಿತ್ತು. ಒಂದು ಶಕ್ತಿಯುತ ಲೋಕಪಾಲ ವ್ಯವಸ್ಥೆಯನ್ನು ನಿರ್ಮಿಸುವ ಆಶಯವೇ ಈ ಸರಕಾರಕ್ಕೆ ಇದ್ದಂತಿಲ್ಲ. ರಾಜ್ಯಸಭೆಯಲ್ಲಿ ನಡೆದ ಘಟನೆಗಳು ಮತ್ತು ಅದನ್ನು ಅನಿರ್ದಿಷ್ಟ ಕಾಲದ ವರೆಗೆ ಮುಂದೂಡಿರುವುದು ಇದಕ್ಕೆ ಈಗ ಸಾಕ್ಷಿ.

★

ಔಷಧಿ ನೀತಿಯ ಕರಡು: ಆಮ್ ಆದ್ಮಿಗೆ ಮತ್ತೊಂದು ಮೋಸ

'ರಾಷ್ಟ್ರೀಯ ಔಷಧಿ ಬೆಲೆ ನಿರ್ಧಾರಣೆ ನೀತಿ'ಯ ಕರಡನ್ನು ಈಗ ಎಲ್ಲ ಸಂಸತ್ ಸದಸ್ಯರಿಗೆ ಹಂಚಲಾಗಿದೆ. ಔಷಧಿಗಳು ಕೈಗೆಟಕುವಂತೆ ಮಾಡಬೇಕೆನ್ನುವುದು ಇದರ ಘೋಷಿತ ಉದ್ದೇಶ. ಪ್ರತಿ ವರ್ಷ ಔಷಧಿಗಾಗಿ ಮಾಡಬೇಕಾದ ಖರ್ಚು 3ಶೇ.ದಷ್ಟು ಜನಗಳನ್ನು ಬಡತನದ ರೇಖೆಯ ಕೆಳಗೆ ದೂಕುತ್ತಿದೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಈ ಉದ್ದೇಶ ಉನ್ನತವಾದುದೇ. ಆದರೆ ಇಲ್ಲಿಯೂ ಯುಪಿಎ–2 ಸರಕಾರದ ನವ-ಉದಾರವಾದಿ ಪದ್ಧತಿಗಳು ಅದರ ಬೆನ್ನು ಬಿಟ್ಟಿಲ್ಲ. ಅದರಿಂದಾಗಿ ಈ 'ರಾಷ್ಟ್ರೀಯ ನೀತಿ'ಯನ್ನೂ ಮೋಸದ ಬೆಳೆಯುತ್ತಿರುವ ಪಟ್ಟಿಗೇ ಸೇರಿಸಿದೆ.

1962ರಿಂದ ಭಾರತ ಸರಕಾರ ಔಷಧಿ ಬೆಲೆ ನಿಯಂತ್ರಣದ ಪ್ರಯತ್ನ ನಡೆಸುತ್ತಾ ಬಂದಿದೆ. 1979ರಲ್ಲಿ ಹೊರಡಿಸಿದ ಔಷಧಿ ಬೆಲೆ ಹತೋಟಿ ಆದೇಶ (ಡಿಪಿಸಿಒ) 347 ಔಷಧಿಗಳನ್ನು ಬೆಲೆ ನಿಯಂತ್ರಣದೊಳಕ್ಕೆ ತಂದರೆ ನಂತರ ಇದಕ್ಕೆ ತಂದ ತಿದ್ದುಪಡಿಗಳು ಒಂದೊಂದಾಗಿ ಹಲವಾರು ಔಷಧಿಗಳನ್ನು ಈ ಬೆಲೆ ಹತೋಟಿಯಿಂದ 'ಮುಕ್ತಗೊಳಿಸುತ್ತಾ' ಬಂದವು. ಜತೆಗೇ, ಔಷಧಿ ಕಂಪನಿಗಳಿಗೆ ಲಾಭದ ಪ್ರಮಾಣವನ್ನು



अजय सक्सेना

ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸುತ್ತ ಬಂದವು. 1979ರಲ್ಲಿ 347 ಔಷಧಿಗಳು ಬೆಲೆ ಹತೋಟಿಗೆ ಒಳಪಟ್ಟಿದ್ದವು, 'ಜೀವವುಳಿಸುವ' ಮತ್ತು 'ಅಗತ್ಯ' ಔಷಧಿಗಳ ಮೇಲೆ ಅನುಕ್ರಮವಾಗಿ 40 ಶೇ. ಮತ್ತು 50 ಶೇ. ಲಾಭದ ಪ್ರಮಾಣಕ್ಕೆ ಅವಕಾಶ ಕೊಡಲಾಗಿತ್ತು. 1987ರ ತಿದ್ದುಪಡಿ ಕೇವಲ 142 ಔಷಧಿಗಳನ್ನು ಬೆಲೆ ಹತೋಟಿಯೊಳಗೆ ಉಳಿಸಿಕೊಂಡಿತು; ಅತ್ತ ಲಾಭದ ಪ್ರಮಾಣವನ್ನು 75 ಮತ್ತು 100 ಶೇ.ಕ್ಕೆ ಏರಿಸಿತು. ಮುಂದೆ 1995ರಲ್ಲಿ ತಂದ ತಿದ್ದುಪಡಿಯ ನಂತರ ಕೇವಲ 74 ಔಷಧಿಗಳು, ಅಂದರೆ ಸುಮಾರು 25ಶೇ.ದಷ್ಟು ಔಷಧಿಗಳು ಮಾತ್ರ ಬೆಲೆ ಹತೋಟಿಗೆ ಒಳಪಟ್ಟಿವೆ. ಈ 74ರಲ್ಲಿಯೂ ಕೆಲವು ಈಗಾಗಲೇ ಮಾರುಕಟ್ಟೆಯಲ್ಲಿ ಇಲ್ಲದ ಹಳಸಲು ಔಷಧಿಗಳು. ಲಾಭದ ಪ್ರಮಾಣವನ್ನು ಈ ತಿದ್ದುಪಡಿ 100ಶೇ.ಕ್ಕೆ ಏರಿಸಿದೆ.

ಕರಡು ಔಷಧಿ ಬೆಲೆ ನೀತಿ ಈ ವಿಕೃತಿಗಳನ್ನು ಸರಿಪಡಿಸಬೇಕೆಂಬುದು ಸಹಜ ನಿರೀಕ್ಷೆ. ಬದಲಾಗಿ ಅದು ಔಷಧಿ ಬೆಲೆಗಳನ್ನು ಮಾರುಕಟ್ಟೆ ಆಧಾರಿತವಾಗಿ ನಿರ್ಧರಿಸುವುದಾಗಿ ಹೇಳಿದೆ. ನಿಜ, ಇದು ಯುಪಿಎ–2 ಸರಕಾರದ ನವ-ಉದಾರವಾದಿ ಜಾಯಮಾನಕ್ಕೆ ಅನುಗುಣವಾದ ಸಂಗತಿ. ಹಿಂದೆ ಔಷಧಿಯ ಬೆಲೆ ಒಂದು



ವೇದರಾಜ ಎನ್.ಕೆ.

ಔಷಧಿಯನ್ನು ತಯಾರಿಸುವ ಖರ್ಚು ಮತ್ತು ಸೂಕ್ತ ಲಾಭದ ಆಧಾರದಲ್ಲಿ ಬೆಲೆ ನಿರ್ಧಾರವಾಗಬೇಕೆಂದಿತ್ತು. ಆದರೆ ಈ ಕರಡಿನ ಪ್ರಕಾರ ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಮಾರಾಟವಾಗುವ ಬ್ರಾಂಡುಗಳ ಸರಾಸರಿ ಬೆಲೆಯನ್ನು ಗರಿಷ್ಟ ಬೆಲೆಯಾಗಿ ನಿರ್ಧರಿಸಲಾಗುವುದಂತೆ. ಅಂದರೆ ಈ 'ರಾಷ್ಟ್ರೀಯ ನೀತಿ'ಯ ಗುರಿ ಲಕ್ಷ ಕೋಟಿ ರೂ.ಗಳ ಔಷಧಿ ಉದ್ದಿಮೆಯ ಹಿತ ರಕ್ಷಿಸುವುದೇ ಹೊರತು ಔಷಧಿ ಬೆಲೆಗಳಿಂದಾಗಿ ಪ್ರತಿ ವರ್ಷ ಬಡತನದ ರೇಖೆಯ ಕೆಳಗೆ ತಳ್ಳಲ್ಪಡುತ್ತಿರುವ , ಜೀವ ಕಳಕೊಳ್ಳುತ್ತಿರುವ ಲಕ್ಷಾಂತರ ಮಂದಿಯ ಹಿತಗಳಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತದೆ.

ಭಾರತದ ಸರಕಾರ ಸಾರ್ವಜನಿಕ ಆರೋಗ್ಯಕ್ಕಾಗಿ ಅತಿ ಕಡಿಮೆ ಖರ್ಚುಮಾಡುವ ವಿಶ್ವದ ಸರಕಾರಗಳಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಚೆನ್ನಾಗಿ ಬೆಳೆದಿರುವ ದೇಶಗಳಲ್ಲಿ ಜನರು ತಮ್ಮ ಜೇಬಿನಿಂದ ಔಷಧಿಗಳಿಗಾಗಿ ಮಾಡಬೇಕಾದ ಖರ್ಚುಗಳು ಬಹಳ ಕಡಿಮೆ. ಭಾರತದಲ್ಲಿ ಮಾತ್ರ ಔಷಧಿಗಳಲ್ಲಿ 85 ಶೇ.ದಷ್ಟು ಜನರೇ ಖರೀದಿಸಬೇಕಾಗಿದೆ. ಆದ್ದರಿಂದ ಇಲ್ಲಿ ಔಷಧಿ ಬೆಲೆಗಳನ್ನು ಹತೋಟಿಯಲ್ಲಿಡುವ ಸಂಗತಿ ಬಹಳ ಮಹತ್ವದ್ದಾಗುತ್ತದೆ. ಆದರೆ 'ಆಮ್ ಆದ್ಮಿ'ಯ ರಾಗ ಆಲಾಪಿಸುವ ಯುಪಿಎ–2 ಸರಕಾರಕ್ಕೆ ಔಷಧಿ ಉದ್ದಿಮೆಯ ಮಹಾಕುಳಗಳ ಹಿತಗಳೇ ಮುಖ್ಯ

★

ರಫ್ತು ಬೆಳವಣಿಗೆಯಲ್ಲೂ ಇಳಿಕೆ, ಆಮದಿನಲ್ಲಿ ಏರಿಕೆ

ಅಮೆರಿಕಾದಲ್ಲಿನ ಆರ್ಥಿಕ ನಿಧಾನಗತಿ ಮತ್ತು ಯುರೋಪಿನ ಸಾಲ ಬಿಕ್ಕಟ್ಟಿನ ಪರಿಣಾಮ ಕ್ರಮೇಣ ಭಾರತದ ಆರ್ಥಿಕವನ್ನೂ ತಟ್ಟಲಾರಂಭಿಸಿದೆ. ಕೈಗಾರಿಕಾ ಉತ್ಪಾದನಾ ಸೂಚ್ಯಂಕಗಳಲ್ಲಿ ಗಮನಾರ್ಹ ಇಳಿಕೆಯ ಮತ್ತು ರೂಪಾಯಿ ಮೌಲ್ಯದಲ್ಲಿ ಸತತ ಇಳಿಕೆಯ ಸುದ್ದಿಗಳ ನಂತರ ಈಗ ರಫ್ತು ಬೆಳವಣಿಗೆಯ ದರದಲ್ಲೂ ಗಮನಾರ್ಹ ಇಳಿಕೆಯಾಗಿರುವ ಸುದ್ದಿ ಬಂದಿದೆ. ನವಂಬರ್ ತಿಂಗಳಲ್ಲಿ ರಫ್ತು ಬೆಳವಣಿಗೆಯ ದರ 3.8ಶೇ.ಕ್ಕೆ ಇಳಿದಿದ್ದು , ಇದು ಕಳೆದ ಎರಡು ವರ್ಷಗಳಲ್ಲಿ ಅತೀ ಕಡಿಮೆ ಎಂದು ಹೇಳಲಾಗಿದೆ. ತದ್ವಿರುದ್ಧವಾಗಿ ಆಮದು ಪ್ರಮಾಣ 24.ಶೇ. ಹೆಚ್ಚಿರುವುದರಿಂದ ವ್ಯಾಪಾರ ಕೊರತೆಯ ಸಮಸ್ಯೆಯೂ ಭಾರತದ ಅರ್ಥಿಕವನ್ನು ಬಾಧಿಸುತ್ತಿದೆ.

ನವಂಬರಿನಲ್ಲಿ ರಫ್ತು ಮೊತ್ತ 2128 ಕೋಟಿ ಡಾಲರುಗಳಾದರೆ, ಆಮದು ಪ್ರಮಾಣ 3590 ಕೋಟಿ ಡಾಲರುಗಳು .ಅಮದರೆ 1360 ಕೋಟಿ ಡಾಲರುಗಳ ವ್ಯಾಪಾರ ಕೊರತೆ.

ರಫ್ತು ಬೆಳವಣಿಗೆ ದರ ಜುಲೈ 2011ರಲ್ಲಿ 82ಶೇ.ಕ್ಕೇರಿತ್ತು, ನಂತರ ಇಳಿಕೆ ಆರಂಭವಾಯಿತು. ಆಗಸ್ಟ್ ನಲ್ಲಿ 44.26ಶೇ.ಕ್ಕೆ, ಸಪ್ಟಂಬರಿನಲ್ಲಿ 36.36ಶೇ.ಕ್ಕೆ , ಅಕ್ಟೋಬರಿನಲ್ಲಿ 10.8ಶೇ.ಕ್ಕೆ ಇಳಿಯಿತು. ಈಗ 3.8ಶೇ.ಕ್ಕೆ ಇಳಿದಿದೆ. ಈ ಹಣಕಾಸು ವರ್ಷದಲ್ಲಿ ಒಟ್ಟು ರಫ್ತು 300 ಬಿಲಿಯ(ಅಥವ 30ಸಾವಿರ ಕೋಟಿ) ಡಾಲರುಗಳಾಗಬೇಕೆಂಬುದು ಸರಕಾರದ ಗುರಿ. ಆದರೆ ಅದೀಗ ಈಡೇರುವ ಸಾಧ್ಯತೆಗಳಿಲ್ಲ ಎನ್ನಲಾಗುತ್ತಿದೆ. ಹೆಚ್ಚೆಂದರೆ 275 ಬಿಲಿಯ ಡಾಲರ್ ತಲುಪಬಹುದು. ವ್ಯಾಪಾರ ಕೊರತೆ 150 ಬಿಲಿಯ ಡಾಲರುಗಳಷ್ಟಾಗಬಹುದು.

★

ಕಾಂಗ್ರೆಸ್ – ತೃಣಮೂಲ ಕಿತ್ತಾಟ

ಯುಪಿಎ–2 ಮೈತ್ರಿಕೂಟದ ನೇತೃತ್ವ ದಲ್ಲಿರುವ ಕಾಂಗ್ರೆಸ್ ಪಕ್ಷ ಮೈತ್ರಿಕೂಟದ ಎರಡನೇ ದೊಡ್ಡ ಪಕ್ಷವೆನಿಸಿದ ತೃಣಮೂಲ ಕಾಂಗ್ರೆಸಿನಿಂದ ದಿನೇದಿನೇ ಹೆಚ್ಚೆಚ್ಚಾಗಿ ಇರಿಸು ಮುರಿಸನ್ನು ಎದುರಿಸಬೇಕಾಗಿ ಬರುತ್ತಿದೆ. ಕೊಲ್ಕತಾದಲ್ಲಿರುವ ಇಂದಿರಾ ಭವನದ ಹೆಸರು ಬದಲಿಸಿ ನಝ್ರುಲ್ ಭವನ ಎಂದು ಮರು ನಾಮಕರಣ ಮಾಡಬೇಕೆಂಬ ಮಮತಾ ಸರಕಾರದ ನಿರ್ಧಾರ ತಮ್ಮನ್ನು ಕೆಣಕಲಿಕ್ಕಾಗಿಯೇ ಎಂದು ಪಶ್ಚಿಮ ಬಂಗಾಳದ ಕಾಂಗ್ರೆಸ್ ಮುಖಂಡರ ಅನಿಸಿಕೆ. ಎಡರಂಗವನ್ನು ಹೇಗಾದರೂ ಅಧಿಕಾರದಿಂದ ಇಳಿಸಬೇಕೆಂದು ಮಾಡಿಕೊಂಡಿರುವ ಮೈತ್ರಿ ಕೂಟ ತಮಗೇ ಮುಳುವಾಗುತ್ತಿದೆ ಎಂದು ಅವರಿಗೆ ಹೆಚ್ಚೆಚ್ಚಾಗಿ ಅನಿಸಲಾರಂಭಿಸಿದೆ. ತಮ್ಮ ಚುನಾವಣಾ ಸಮಯಸಾಧಕತನಕ್ಕೆ ತ್ಯಾಗದ ವೇಷ ತೊಡಿಸಿ ಅವರೀಗ ತಮ್ಮ 'ತ್ಯಾಗ'ಕ್ಕೆ ತೃಣಮೂಲ ಕಾಂಗ್ರೆಸ್ ಎಳ್ಳಷ್ಟು ಬೆಲೆ ಕೊಡುತ್ತಿಲ್ಲ ಎಂದು ಗೊಣಗುತ್ತಿದ್ದಾರೆ.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಮೈತ್ರಿಕೂಟದ ಸದಸ್ಯರಾಗಿದ್ದರೂ ಪ್ರತಿಪಕ್ಷದಂತೆಯೇ ವರ್ತಿಸುತ್ತಿದ್ದಾರೆ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ, ಲೋಕಪಾಲ ಮಸೂದೆ ಇತ್ಯಾದಿಗಳಲ್ಲಿ ತಲೆನೋವು ತರುತ್ತಿದ್ದಾರೆ ಎಂಬುದು ತೃಣಮೂಲ ಕಾಂಗ್ರೆಸ್ ವಿರುದ್ಧ ಇರುವ ದೂರು. ಪಶ್ಚಿಮ ಬಂಗಾಳದ ಕಾಂಗ್ರೆಸ್ ಶಾಸಕರು, ಸಂಸದರು ಮತ್ತು ಇತರ ಮುಖಂಡರು ಕೊಲ್ಕತಾದಲ್ಲಿ ಮತಪ್ರದರ್ಶನವನ್ನೂ ನಡೆಸಿದ್ದಾರೆ, ತಾವೂ ಭಾಗವಾಗಿರುವ ರಾಜ್ಯಸರಕಾರ ಜನ-ವಿರೋಧಿಕ್ರಮಗಳನ್ನು ಕೈಗೊಳ್ಳುತ್ತಿದೆ, ಸಾರ್ವಜನಿಕ ವಿತರಣಾ ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತಿಲ್ಲ, ರೈತರಿಂದ ಅವರ ಉತ್ಪನ್ನಗಳನ್ನು ಖರೀದಿಸುವ ಗುರಿ ಸಾಧನೆಯಾಗುತ್ತಿಲ್ಲ ಎಂದೆಲ್ಲ ಮಮತಾ ಸರಕಾರದ ವಿರುದ್ಧ ದೋಷಾರೋಪಣೆ ಮಾಡಿದ್ದಾರೆ.

ಕೇಂದ್ರದಲ್ಲಿಯೂ, ಪಶ್ಚಿಮ ಬಂಗಾಲದಲ್ಲಿಯೂ ನವ-ಉದಾರವಾದ ನೀತಿಗಳಿಗೆ ಬದ್ಧವಾಗಿರುವ ಎರಡು "ಮಿತ್ರಪಕ್ಷಗಳ" ಸಮಯಸಾಧಕ ಗೊಂದಲ ಅರ್ಥವಾಗುವಂತದ್ದೇ.

ಸಿಪಿಐ(ಎಂ) ಪಕ್ಷದ 19ನೇ ಸಮ್ಮೇಳನದ ನಂತರ ಇಲ್ಲಿಯವರೆಗೆ ಪಕ್ಷ ಜನರ ಬದುಕಿನ ಹಲವು ಪ್ರಶ್ನೆಗಳನ್ನು ಎತ್ತಿ ನಿರಂತರ ಹೋರಾಟ ನಡೆಸುತ್ತಾ ಬಂದಿದೆ. ಒಂದು ಅವಲೋಕನ

ಸಮರಗಳ ನಾಲ್ಕು ವರುಷಗಳು


ನಿತ್ಯಾನಂದಸ್ವಾಮಿ.

ಭಾರತ (ಮಾರ್ಕ್ಸ್‌ವಾದಿ) ಕಮ್ಯೂನಿಸ್ಟ್ ಪಕ್ಷವು ಭಾರತದ ದುಡಿಯುವ ಜನತೆಯ ವಿಮೋಚನೆಗಾಗಿ ಶ್ರಮಿಸುತ್ತಿರುವ ಕ್ರಾಂತಿಕಾರಿ ಆಂದೋಲನವಾಗಿದೆ. ನಮ್ಮ ಸಮಾಜದ ಕ್ರಾಂತಿಕಾರಿ ಪುನರ್ರಚನೆಯಲ್ಲಿ ಜನತೆಯ ಪಾತ್ರ ಪ್ರಧಾನವಾಗಿರುವುದರಿಂದ ಶೋಷಿತ ಜನ ಸಮೂಹಗಳು "ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು" ಎಂಬ ಉಪಾದಿಯಲ್ಲಿ ಹರಿದು ಬರುವಂತೆ ಮಾಡುವುದು ಪಕ್ಷದ ತಕ್ಷಣದ ಮುಖ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಮೈಸೂರಿನಲ್ಲಿ 2008ರಲ್ಲಿ ನಡೆದ ಪಕ್ಷದ 19ನೇ ರಾಜ್ಯ ಸಮ್ಮೇಳನದ ನಂತರದ ಈ ಅವಧಿಯು ಅನೇಕ ಸಮರಶೀಲ ಹೋರಾಟಗಳ ಅವಧಿಯಾಗಿ ತುಂಬ ಫಲಪ್ರದವಾಗಿತ್ತು.

ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ತನ್ನ ಚೊಚ್ಚಲ ಸರ್ಕಾರವನ್ನು ಸ್ಥಾಪನೆಮಾಡುವುದರೊಂದಿಗೆ ಮುಸ್ಲಿಂ ಮತ್ತು ಕ್ರೈಸ್ತ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಫ್ಯಾಸಿಸ್ಟ್ ದಾಳಿ ತೀವ್ರವಾಯಿತು. ಕಾಂಗ್ರೆಸ್ ಮೊದಲಾದ ಇತರ ರಾಜಕೀಯ ಪಕ್ಷಗಳು ಅಲ್ಪ ಸಂಖ್ಯಾತರ ಮೇಲಿನ ಈ ದಾಳಿಗಳನ್ನು ಬಲವಾಗಿ ಖಂಡಿಸಲು ಮುಂದಾಗಲಿಲ್ಲ. ಸಿಪಿಐ(ಎಂ) ಮಾತ್ರ ಫ್ಯಾಸಿಸ್ಟ್ ಶಕ್ತಿಗಳ ದೌರ್ಜನ್ಯ ದಬ್ಬಾಳಿಕೆಯನ್ನು ನಿರ್ಧಾಕ್ಷಿಣ್ಯವಾಗಿ ಖಂಡಿಸಿತು. ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು, ದಾವಣಗೆರೆ, ಮೈಸೂರು ಮೊದಲಾದ ಜಿಲ್ಲೆಗಳಲ್ಲಿ ಕ್ರೈಸ್ತ ಚರ್ಚುಗಳ ಮೇಲೆ ಸಂಘಪರಿವಾರದವರು ಮಾಡಿದ ದಾಳಿಯನ್ನು ಸಿಪಿಐ(ಎಂ) ಬಲವಾಗಿ ಖಂಡಿಸಿತು. ಮಾತ್ರವಲ್ಲ, ದಾಳಿಗೀಡಾದ ಚರ್ಚುಗಳಿಗೆ ಭೇಟಿನೀಡಿ ನೊಂದವರಿಗೆ ಧೈರ್ಯ ನೀಡಲಾಯಿತು. ರಾಜ್ಯಾದ್ಯಂತ ಪ್ರತಿಭಟನೆಗಳನ್ನು ಏರ್ಪಡಿಸುವ ಮೂಲಕ ದುಷ್ಕರ್ಮಿಗಳನ್ನು ಬಂಧಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮಜರುಗಿಸುವಂತೆ ಒತ್ತಾಯಿಸಲಾಯಿತು.

ಕೋಮುವಾದ ಮತ್ತು ಭಯೋತ್ಪಾದನೆ ಎಂಬ ಎರಡೂ ಪಿಡುಗುಗಳ ವಿರುದ್ಧ ಜನ ಜಾಗೃತಿಯನ್ನು ಉಂಟುಮಾಡುವುದಕ್ಕಾಗಿ ಬಸವ ಕಲ್ಯಾಣ, ಬಾಬಾಬುಡನ್‌ಗಿರಿ, ಕಾರವಾರ ಮತ್ತು ಕೂಡಲಸಂಗಮದಿಂದ ನಾಲ್ಕು ವಾಹನ ಜಾಥಗಳನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 6669 ಕಿ.ಮೀ ದೂರವನ್ನು ಕ್ರಮಿಸಿ ಈ ಜಾಥಗಳು ಜನರ ಗಮನವನ್ನು ಸೆಳೆಯುವುದರಲ್ಲಿ ಯಶಸ್ವಿಯಾದವು. ಜಾಥದ ಅಂಗವಾಗಿ 67 ಮೆರವಣಿಗೆಗಳನ್ನು ಹಾಗೂ 167 ಬಹಿರಂಗ ಸಭೆಗಳನ್ನು ಏರ್ಪಡಿಸಲಾಗಿತ್ತು. ಕೋಮುವಾದ ಮತ್ತು ಭಯೋತ್ಪಾದನೆ ಎಂಬ ಪಿಡುಗುಗಳು ಪರಸ್ಪರ ಒಂದನ್ನೊಂದು ಪೋಷಿಸುತ್ತವೆ, ನಮ್ಮ ನಾಡಿನಲ್ಲಿ ಕೋಮುವಾದವನ್ನು ಕೊನೆಗಾಣಿಸದೆ ಭಯೋತ್ಪಾದನೆಯನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ಈ ಜಾಥದ ಮೂಲಕ ರಾಜ್ಯಾದ್ಯಂತ ಪಸರಿಸಲು ಸಾಧ್ಯವಾಯಿತು.

ರಾಜ್ಯ ಬಿಜೆಪಿ ಸರ್ಕಾರದ ಕುಮ್ಮಕ್ಕಿನಿಂದ



ಕರಾವಳಿ ಜಿಲ್ಲೆಗಳಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದು, ಮುಸ್ಲಿಂ ಯುವಕ, ಯುವತಿಯರು ಪರಸ್ಪರ ಮಾತನಾಡಿದರೆ, ಬಸ್ಸಿನಲ್ಲಿ ಒಟ್ಟಿಗೆ ಪ್ರಯಾಣ ಮಾಡಿದರೆ ಸಂಘ ಪರಿವಾರದ ಗುಂಡಾಗಳು ದಾಳಿಮಾಡಲಾರಂಭಿಸಿದರು, ಮಂಗಳೂರಿನ ಒಂದು ಪಬ್‌ನಲ್ಲಿ ಮಹಿಳೆಯರ ಮೇಲೆ ಹಲ್ಲೆ ಮಾಡಲಾಯಿತು. ಇಂತಹ ಪುಂಡಾಟಿಕೆಯನ್ನು ಖಂಡಿಸುವಲ್ಲಿ ಸಿಪಿಐ(ಎಂ) ಮುಂಚೂಣಿ ಪಾತ್ರವನ್ನು ನಿರ್ವಹಿಸಿತು. ಪ್ರಗತಿಪರ ಬರಹಗಾರರು ಮತ್ತು ಕಲಾವಿದರ ನೇತೃತ್ವದಲ್ಲಿ "ಮಂಗಳೂರು ಚಲೋ" ನಡೆಸಲಾಯಿತು.

ಗೋಹತ್ಯೆ ನಿಷೇದ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ತರುವ ಬಿಜೆಪಿ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಿತು. ದನಗಳ ವ್ಯಾಪಾರ, ಸಾಗಾಟ ಹಾಗೂ ಮಾಂಸ ಮಾರಾಟದ ವೃತ್ತಿಯಲ್ಲಿ ತೊಡಗಿರುವ ಮುಸ್ಲಿಂ ಅಲ್ಪ ಸಂಖ್ಯಾತರ ವಿರುದ್ಧ ಕಾಯ್ದೆಯನ್ನು ದುರ್ಬಳಕೆ ಮಾಡುವುದೇ ಸರ್ಕಾರದ ಉದ್ದೇಶವಾಗಿತ್ತು. ಪಕ್ಷ ರಾಜ್ಯಾದ್ಯಂತ ಇದರ ವಿರುದ್ಧ ಪ್ರತಿಭಟನೆಗಳನ್ನು ನಡೆಸಿತು ಮಾತ್ರವಲ್ಲ ಇತರ ಪ್ರಗತಿಪರ ಸಂಘಟನೆಗಳ ಜೊತೆ ಸೇರಿ ಸರ್ಕಾರದ ದುರುದ್ದೇಶವನ್ನು ಬಯಲಿಗೆಳೆಯಲು ಪ್ರಯತ್ನಿಸಲಾಯಿತು.

ಕೋಮುವಾದವನ್ನು ವಿರೋಧಿಸುವುದು ಸಿಪಿಐ(ಎಂ) ಪ್ರತಿಪಾದಿಸುವ ವರ್ಗ ಹೋರಾಟದ ಭಾಗವೇ ಆಗಿದೆ. ದುಡಿಯುವ ಜನರನ್ನು ಅವರ ಧರ್ಮ, ಭಾಷೆ ಮೊದಲಾದವುಗಳ ಆಧಾರದಲ್ಲಿ ಒಡೆಯುವುದನ್ನು ಸಿಪಿಐ(ಎಂ) ಸಹಿಸುವುದಿಲ್ಲ. ಕೋಮುವಾದದ ವಿರುದ್ಧ ಹೋರಾಟ ಮಾಡುತ್ತಿರುವಾಗಲೇ ಧಾರ್ಮಿಕ ಅಲ್ಪ ಸಂಖ್ಯಾತರ ನಡುವೆ ಬೆಳೆದು ಬರುತ್ತಿರುವ ಮೂಲಭೂತವಾದಿ ಶಕ್ತಿಗಳ ವಿರುದ್ಧ ಬಲವಾಗಿ ಧ್ವನಿ ಎತ್ತುತ್ತಿದೆ. ಕೋಮುವಾದಿ ಹಾಗೂ ಮೂಲಭೂತವಾದಿ ಶಕ್ತಿಗಳ ನಡೆಗಳ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಪಕ್ಷ ಮನವಿ ಮಾಡುತ್ತದೆ.

ದುಡಿಯುವ ಜನರ ಐಕ್ಯತೆಯನ್ನು ಸಾಧಿಸುವ ಭಾಗವಾಗಿ ಸಿಪಿಐ(ಎಂ) ಅವರನ್ನು ಅವರ ಸಾಮಾನ್ಯ ಪ್ರಶ್ನೆಗಳಿಗಾಗಿ ಸಂಘಟಿಸುತ್ತದೆ. ಅವರ ಆರ್ಥಿಕ ಬೇಡಿಕೆಗಳನ್ನು ಎತ್ತಿಕೊಂಡು ಎಲ್ಲರೂ ಒಂದಾಗಿ ಹೋರಾಟ ಮಾಡುವಂತೆ ಮಾರ್ಗದರ್ಶನ ಮಾಡುತ್ತದೆ.

ಬೇರೆ ಬೇರೆ ಜಾತಿ, ಧರ್ಮಗಳಿಗೆ ಸೇರಿದ ಅಸಂಘಟಿತ ವಲಯದ ಕಾರ್ಮಿಕರನ್ನು ವಿಶಾಲವಾಗಿ ಸಂಘಟಿಸಿ ಅವರನ್ನು ಸಾಮಾನ್ಯ ಹೋರಾಟಕ್ಕೆ ಇಳಿಸಲು ಸಾಧ್ಯವಾಗಿರುವುದು ಈ ಅವಧಿಯ ಒಂದು ಅತ್ಯಂತ ಮಹತ್ವದ ಹೋರಾಟವಾಗಿದೆ. ಗ್ರಾಮೀಣ ಪ್ರದೇಶದ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ 6000ರೂ. ಕನಿಷ್ಠ ಮಾಸಿಕ ವೇತನ ಹಾಗೂ ನಗರ ಪ್ರದೇಶದವರಿಗೆ ಕನಿಷ್ಠ 10,000ರೂ. ಮಾಸಿಕ ವೇತನ ನೀಡಬೇಕು ಎಂದು ಒತ್ತಾಯಿಸಿ ಸಹಿ ಸಂಗ್ರಹ ಚಳುವಳಿಯೊಂದಿಗೆ ವಿವಿಧ ಹಂತದ ಚಳುವಳಿ ನಡೆಸಲಾಯಿತು. ರಾಜ್ಯದ 161 ತಾಲ್ಲೂಕುಗಳಲ್ಲಿ ಸಾಮೂಹಿಕ ಧರ... 5ದಿನಗಳ ಕಾಲ ನಡೆಯಿತು.

ಚಿಕ್ಕಮಗಳೂರು ಜಿಲ್ಲೆಯೊಂದನ್ನು ಬಿಟ್ಟು ಉಳಿದೆಲ್ಲಾ ಜಿಲ್ಲಾ ಕೇಂದ್ರಗಳ... ಸಮರಶೀಲವಾದ ಪಿಕೆಟಿಂಗ್ ನಡೆಸಲು... ಹತ್ತಾರು ಕಡೆ ಪೊಲೀಸರು ಲಾಠಿ ಪ್ರಹಾ... ನಡೆಸಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಅನೇಕ ಜ... ಹೋರಾಟಗಾರರು ತೀವ್ರವಾ... ಗಾಯಗೊಂಡರು. ಗುಲ್ಬರ್ಗಾದ... ನೇತೃತ್ವವಹಿಸಿದ್ದ 19ಜನ ಪ್ರಮುಖರನ್ನು ಬಂಧಿಸಿ 11 ದಿನಗಳ ಜೈಲಿನಲ್ಲಿ ಇಡಲಾಗಿ... ರಾಯಚೂರು ಮತ್ತು ಹಾಸನದ... ಪೊಲೀಸರು ಹೋರಾಟಗಾರರ ಮೇ... ಅಮಾನುಷವಾಗಿ ದಾಳಿಮಾಡಿದರು... ರಾಜ್ಯಾದ್ಯಂತ ಸುಮಾರು 75ಸಾವಿ... ಕಾರ್ಮಿಕರು ಈ ಚಳುವಳಿಯ... ಭಾಗವಹಿಸಿದ್ದರು. ಪೊಲೀಸ... ದೌರ್ಜನ್ಯವನ್ನು ಎದುರಿಸಿ ಗಟ್ಟಿಯಾ... ನಿಂತವರಲ್ಲಿ ಮಹಿಳೆಯರೇ ಹೆಚ್ಚ... ಸಂಖ್ಯೆಯಲ್ಲಿದ್ದರು. "ಸೆಪ್ಟೆಂಬರ್ ಚಳುವ... ಎಂದೇ ಪ್ರಸಿದ್ದವಾಗಿರುವ ಈ ಹೋರಾ... ರಾಜ್ಯದ ಕಾರ್ಮಿಕ ಚಳುವಳಿಯಲ್ಲಿ ಒಂದು ಮೈಲುಗಲ್ಲು. ಇದರಿಂದಾಗಿ ಮುಖಂಡರ... ವಿಶ್ವಾಸ ಹೆಚ್ಚಾಯಿತು. ಕಾರ್ಯಕರ್ತರ... ಹುರುಪು ಬಂತು.

ಬೆಲೆ ಏರಿಕೆ ವಿರೋಧಿಸಿ, ಆಹಾ... ಭದ್ರತೆಗಾಗಿ ಒತ್ತಾಯಿಸಿ ಸಿಪಿಐ(ಎ... ನಡೆಸಿದ ಚಳುವಳಿ ಈ ಅವಧಿಯ... ಇನ್ನೊಂದು ಪ್ರಮುಖ ಚಳುವಳಿಯಾಗಿದೆ. 2009 ಅಕ್ಟೋಬರ್ ತಿಂಗಳ... ನವದೆಹಲಿಯಲ್ಲಿ ಎಡಪಕ್ಷಗಳ ನೇತೃತ್ವದ... ಒಂದು ಅಖಿಲ ಭಾರತ ಸಮಾವೇ... ನಡೆಯಿತು. ನಂತರ ರಾಜ್ಯ ಮಟ್ಟದ ಜ... ಸಮಾವೇಶವನ್ನು ಬೆಂಗಳೂರಿನ... ಏರ್ಪಡಿಸಲಾಗಿತ್ತು. ವಾಹನ ಜಾಥ... ಮೂಲಕ, ಗ್ರಾಮ ಮಟ್ಟದ ಸಭೆಗಳನ್ನು ನಡೆ... ಪ್ರಚಾರ ಮಾಡಲಾಯಿತು. ಹೋರಾಟ... ಅಂಗವಾಗಿ ಬೆಂಗಳೂರಿನಲ್ಲಿ ನವೆಂಬರ್ 25ರಂದು ಪ್ರತಿಭಟನಾ ರ‍್ಯಾಲಿಯನ್ನು ಸಂಘಟಿಸಲಾಯಿತು. ಕಾಂ. ಪ್ರಕಾಶ್ ಕಾರಟ್ ಪಾಲ್ಗೊಂಡಿದ್ದ ಈ ರ‍್ಯಾಲಿಯಲ್ಲಿ 4... ಸಾವಿರಕ್ಕೂ ಹೆಚ್ಚು ಜನ ರಾಜ್ಯದ ಮೂ... ಮೂಲೆಗಳಿಂದ ಬಂದಿದ್ದರು. ಇದೆ... ಬೇಡಿಕೆಗಳಿಗಾಗಿ 2010 ಎಪ್ರಿಲ್ 8ರಂದು ರಾಜ್ಯಾದ್ಯಂತ ಸರ್ಕಾರಿ ಕಚೇರಿಗ... ಪಿಕೆಟಿಂಗ್ ಮಾಡಲು ನೀಡಿದ ಕ... ಸುಮಾರು 20 ಜಿಲ್ಲೆಗಳ 30 ಕೇಂದ್ರಗಳ... ಜಾರಿಯಾಯಿತು. ರಾಜ್ಯಾದ್ಯಂತ ಸುಮಾರು 20 ಸಾವಿರ ಜನರ ಬಂಧನ... ಬಿಡುಗಡೆಯಾಯಿತು.

ಈ ನಡುವೆ ಕೇಂದ್ರ ಸರ್ಕಾ...

ಪುಟ 15

ಜನಶಕ್ತಿ
ಕನ್ನಡ ವಾರಪತ್ರಿಕೆ

ಪೆಟ್ರೋಲ್, ಡಿಸೆಲ್, ಅಡುಗೆ ಅನಿಲ ಮತ್ತು ಸೀಮೆ ಎಣ್ಣೆಗಳ ಬೆಲೆಗಳನ್ನು ಏರಿಸಿದಾಗ ಎಡಪಕ್ಷಗಳು ಎರಡು ಬಾರಿ ಅಖಿಲ ಭಾರತ ಹರತಾಳಕ್ಕೆ ಕರೆ ನೀಡಿದವು. ಈ ಕರೆಗಳನ್ನು ಸಹ ರಾಜ್ಯದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಯಿತು. ಬೆಲೆಗಳು ಮಾತ್ರ ಏರುತ್ತಾ ಇವೆ. ಜನ ಸಾಮಾನ್ಯರು ತೀವ್ರ ಸಂಕಷ್ಟದಲ್ಲಿದ್ದಾರೆ. ಬೆಲೆ ಏರಿಕೆ ತಡೆಯಬೇಕಾದರೆ-ಕೇಂದ್ರ ಸರ್ಕಾರದ ಧೋರಣೆಗಳ ಬದಲಾವಣೆ ಆಗಬೇಕಾಗಿದೆ. ಉದಾರೀಕರಣದ ನೀತಿಗಳು ಬದಲಾಗದೆ ಬೆಲೆ ಏರಿಕೆಗೆ ಕಡಿವಾಣ ಬೀಳುವುದಿಲ್ಲ. ಉದಾರೀಕರಣದ ನೀತಿಗಳ ವಿರುದ್ಧ ನಮ್ಮ ಹೋರಾಟ ತೀವ್ರಗೊಳಿಸಬೇಕಾಗಿದೆ.

ಬೆಲೆ ಏರಿಕೆಯ ವಿರುದ್ಧದ ಹೋರಾಟವು ಉದ್ಯೋಗಕ್ಕಾಗಿ ನಡೆಸುವ ಹೋರಾಟಕ್ಕೆ ಸಂಬಂಧಪಟ್ಟದ್ದಾಗಿದೆ. ಬೆಲೆಗಳು ಏರುತ್ತಿವೆ. ಆದರೆ ಬಡವರ ಆದಾಯ ಏರುವುದಿಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಗೆ ಬಂದರೆ ಗ್ರಾಮೀಣ ಬಡವರ ಆದಾಯದಲ್ಲಿ ಗಣನೀಯ ಹೆಚ್ಚಳ ಸಾಧ್ಯವಿದೆ. ಆದರೆ ರಾಜ್ಯದ ಭ್ರಷ್ಟ ಬಿಜೆಪಿ ಸರ್ಕಾರ ಬಡವರಿಗಾಗಿ ಇರುವ ಈ ಯೋಜನೆಯ ಹಣವನ್ನು ಸಹ ಲೂಟಿಮಾಡುತ್ತಿದೆ. ಮಂತ್ರಿಗಳು ಮೇಲ್ಮಟ್ಟದಲ್ಲಿ ಲೂಟಿ ಮಾಡುತ್ತಿದ್ದರೆ ಮರಿ ಪುಡಾರಿಗಳಿಗೆ ಕೆಳ ಮಟ್ಟದಲ್ಲಿ ಲೂಟಿ ಮಾಡಲು ಬಿಟ್ಟಿದ್ದಾರೆ. ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ ಸಿಪಿಐ(ಎಂ) ರಾಜ್ಯದಲ್ಲಿ ಶ್ರಮಿಸುತ್ತಾ ಬಂದಿದೆ. ಯೋಜನೆ ಜಾರಿಗಾಗಿ ಕೆಲಸಮಾಡುವಾಗ ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಬಯಲಿಗೆಳೆದು ಪಟ್ಟಭದ್ರರ ಕೆಂಗೆಣ್ಣಿಗೆ ಗುರಿಯಾಗಿದೆ. ಪಕ್ಷದ ಕಾರ್ಯಕರ್ತರು ಅನೇಕ ಕಡೆಗಳಲ್ಲಿ ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳಿಂದ, ಗುತ್ತಿಗೆದಾರರಿಂದ ಹಲ್ಲೆಗೊಳಗಾಗಿದ್ದಾರೆ. ಹೋರಾಟ ನಡೆದಿದೆ. ಈ ಅವಧಿಯಲ್ಲಿ ಪಕ್ಷದ ಮುತುವರ್ಜಿಯಿಂಧ ಕನಿಷ್ಠ 50ಸಾವಿರ ಕೂಲಿಕಾರ ಕುಟುಂಬಗಳಿಗೆ ಕೆಲಸ ಒದಗಿಸಲು ಸಾಧ್ಯವಾಗಿದೆ, ಕೆಲಸ ಬಯಸಿ ಬಂದವರಲ್ಲಿ ಪ್ರತಿಶತ 80ರಷ್ಟು ಜನ ಮಹಿಳೆಯರು. ಈ ಹೋರಾಟವನ್ನು ಇನ್ನೂ ವ್ಯವಸ್ಥಿತವಾಗಿ ಮುಂದುವರೆಸಬೇಕಾಗಿದೆ.

ಮನೆಗಳಿಗಾಗಿ, ಮನೆ ನಿವೇಶನಗಳಿಗಾಗಿ ಹಾಗೂ ಭೂಮಿಗಾಗಿ ನಡೆಸಲಾದ ಆಂದೋಲನ ಈ ಅವಧಿಯ ಇನ್ನೊಂದು ಪ್ರಮುಖ ಚಟುವಟಿಕೆಯಾಗಿದೆ. ಮೊದಲ ಹಂತವಾಗಿ, ಸ್ವಂತ ಮನೆ ಇಲ್ಲದವರು, ಸ್ವಂತ ನಿವೇಶನ ಇಲ್ಲದವರು, ಸರ್ಕಾರಿ ಜಾಗೆಯಲ್ಲಿ ಗುಡಿಸಲು/ಮನೆಕಟ್ಟಿಕೊಂಡಿದ್ದು ಹಕ್ಕು ಪತ್ರ ಪಡೆಯದಿದ್ದವರು, ಸರ್ಕಾರ/ಅರಣ್ಯ ಭೂಮಿ ಸಾಗುವಳಿ ಮಾಡುತ್ತಿದ್ದು ಸಾಗುವಳಿ ಚೀಟಿ ಸಿಗದಿದ್ದವರಿಂದ ಅರ್ಜಿಗಳನ್ನು ಹಾಕಿಸುವ ಕೆಲಸ ಕೈಗೊಳ್ಳಲಾಯಿತು. ಒಂದು ಲಕ್ಷಕ್ಕೂ ಹೆಚ್ಚು ವೈಯಕ್ತಿಕ ಅರ್ಜಿಗಳನ್ನು ಸಲ್ಲಿಸಿ ಸ್ವೀಕೃತಿ ಪತ್ರಗಳನ್ನು ಪಡೆಯಲು ಸಾಧ್ಯವಾಯಿತು. ಅರ್ಜಿಗಳ ಪರೀಶೀಲನೆ ಆರಂಭವಾಗಿದ್ದು ಚಳುವಳಿಯನ್ನು ಹಂತಹಂತವಾಗಿ ತೀವ್ರಗೊಳಿಸಬೇಕಾಗಿದೆ.

ಈ ಅವಧಿಯಲ್ಲಿ ದಲಿತರ ಹಕ್ಕುಗಳಿಗಾಗಿ ಪಕ್ಷದ ಮಧ್ಯಪ್ರವೇಶ ಗಣನೀಯವಾಗಿ ಹೆಚ್ಚಾಗಿದೆ. ದಲಿತರ ಮೇಲೆ ಸವರ್ಣೀಯರಿಂದ ದೌರ್ಜನ್ಯಗಳು ನಡೆದಾಗ ಪಕ್ಷದ ಸಮಿತಿಗಳು ತಕ್ಷಣ ಮಧ್ಯಪ್ರವೇಶ ಮಾಡುತ್ತಿವೆ. ನಮ್ಮ ಸಮಾಜದಲ್ಲಿ ಜಾರಿಯಲ್ಲಿರುವ ಅಸ್ಪೃಶ್ಯತಾ ಆಚರಣೆಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ನಿರ್ದಿಷ್ಟ ಅಸ್ಪ್ರಶ್ಯತಾ ಆಚರಣೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಹೋರಾಟಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಆದಿವಾಸಿ ಬುಡಕಟ್ಟು ಸಮುದಾಯಗಳ ನಡುವೆಯೂ ಕೆಲಸ ಆರಂಭವಾಗಿದೆ. ಕೊಡಗು. ಮೈಸೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಹಾಸನ, ರಾಮನಗರ ಮೊದಲಾದ ಜಿಲ್ಲೆಗಳಲ್ಲಿ ಇರುವ ಅದಿವಾಸಿ ಹಾಡಿಗಳಿಗೆ ಬೇಟಿಕೊಟ್ಟು, ಅವರ ಸಂಪರ್ಕ ಪಡೆದುಕೊಂಡು ರಾಜ್ಯ ಮಟ್ಟದ ಪ್ರಥಮ ಸಮಾವೇಶ ನಡೆಸಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಅದರಂತೆಯೇ ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ಸಮಿತಿ ರಚಿಸಿಕೊಂಡು, ಸಾಚಾರ್ ಆಯೋಗ, ರಂಗನಾಥ್ ಮಿಶ್ರಾ ಆಯೋಗಗಳ ಶಿಫಾರಸುಗಳ ಪ್ರಚಾರಮಾಡಿ ಆ ವಿಭಾಗದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರ ಹಕ್ಕುಗಳಿಗಾಗಿ ಹೋರಾಡುವ ಧಿಕ್ಕಿನಲ್ಲಿ ಪಯತ್ನ ಆರಂಭವಾಗಿದೆ.

ಈ ಅವಧಿಯಲ್ಲಿ ಗಣಿ ಮಾಫಿಯಾ ವಿರುದ್ಧ ಪಕ್ಷವು ನಡೆಸಿದ ಪ್ರಚಾರ-ಪ್ರಕ್ಷೋಭೆ ಗಮನಾರ್ಹವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ನಡೆಯುತಿದ್ದ ಅಕ್ರಮ ಗಣಿಗಾರಿಕೆಯ ವಿರುದ್ಧ ಮೊದಲು ಧ್ವನಿ ಎತ್ತಿದ್ದು ಸಿಪಿಐ(ಎಂ), ಬಳ್ಳಾರಿಯ ಗಣಿರೆಡ್ಡಿಗಳನ್ನು ಬಂಧಿಸುವಂತೆ, ಅವರ ಅಕ್ರಮ ಆಸ್ತಿಯನ್ನು ಮುಟ್ಟುಗೋಲು ಹಾಕುವಂತೆ ಒತ್ತಾಯಿಸಿ ಸಿಪಿಐ(ಎಂ) ಹೋರಾಟಗಳನ್ನು ನಡೆಸುತ್ತಾ ಬಂದಿದೆ. ಸಂಸತ್ತಿನಲ್ಲಿ ಪಕ್ಷದ ಮುಖಂಡರಾಗಿರುವ ಕಾಂ. ಬಸುದೇವ ಆಚಾರ್ಯ ಅವರ ನಿಯೋಗ ಬಳ್ಳಾರಿಗೆ ಬೇಟಿ ನೀಡಿ ಪರೀಶೀಲನೆಮಾಡಿದೆ. ಈ ಹೋರಾಟ ಮುನ್ನಡೆಯಬೇಕಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭ್ರಷ್ಟಾಚಾರದ ವಿರುದ್ಧವೂ ಈ ಅವಧಿಯಲ್ಲಿ ಪಕ್ಷ ಹೋರಾಟಗಳನ್ನು ಮಾಡುವ ಮೂಲಕ ಜನರ ಪ್ರಜ್ಞೆಯನ್ನು ಎತ್ತರಿಸುವ ಕೆಲಸವನ್ನು ಮಾಡಿದೆ. 2011 ಜನವರಿ 24 ರಂದು ರಾಜ್ಯಾದ್ಯಂತ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿದೆ. ಎಪ್ರಿಲ್ 19ರಂದು ರಾಜ್ಯಾದ್ಯಂತ ನಡೆಸಲಾದ ತಾಲ್ಲೂಕು ಕಛೇರಿ ಮುತ್ತಿಗೆ ಕಾರ್ಯಕ್ರಮದಲ್ಲಿ 29 ಜಿಲ್ಲೆಗಳ 130 ತಾಲ್ಲೂಕುಗಳಲ್ಲಿ 54, 000 ಜನ ಬಾಗವಹಿಸಿದ್ದಾರೆ. ಕೇಂದ್ರ ಸರ್ಕಾರದ ಭ್ರಷ್ಟಾಚಾರದ ಕುರಿತಾಗಿ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ರಾಜಕೀಯ ಸಮಾವೇಶಗಳನ್ನು ನಡೆಸಲಾಗಿದೆ, ಲೋಕಾಯುಕ್ತರ ವರದಿ ಆಧರಿಸಿ ಕ್ರಮ ಜರುಗಿಸುವಂತೆ ಒತ್ತಾಯಿಸಿ, ಬಿಜೆಪಿ ಸರ್ಕಾರದ ರಾಜಿನಾಮೆಗೆ ಆಗ್ರಹಿಸಿ ಧರಣಿ ನಡೆಸಲಾಗಿದೆ.

ಬಲವಂತವಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ಬೆಂಗಳೂರಿನಲ್ಲಿ ನೈಸ್ ರಸ್ತೆ, ದೇವನಹಳ್ಳಿ ವಿಮಾನ ನಿಲ್ದಾಣ ದೊಡ್ಡಬಳ್ಳಾಪುರ ಅಪ್ರೆಲ್ ಪಾರ್ಕ್, ಕೆಂಪೆಗೌಡ ಬಿ.ಡಿ.ಎ ಬಡವಣೆ ಮೊದಲಾದ ಸಂದರ್ಭಗಳಲ್ಲಿ ಬಳ್ಳಾರಿಯ ವಿಮಾನ ನಿಲ್ದಾಣಕ್ಕಾಗಿ ಮತ್ತು ಸ್ಟೀಲ್ ಕಾರ್ಖಾನೆಗಳಿಗಾಗಿ ನಡೆದ ಭೂಸ್ವಾಧೀನ ವಿರೋಧಿ ಹೋರಾಟಗಳಲ್ಲಿ ಪಕ್ಷ ಗಮನಾರ್ಹ ಪಾತ್ರ ವಹಿಸಿದೆ. ವಿಶ್ವ ಕೃಷಿ ಹೂಡಿಕೆದಾರರ ಸಮಾವೇಶದ ವಿರುದ್ಧವೂ ಪ್ರತಿಭಟನೆಯನ್ನು ನಡೆಸಲಾಗಿದೆ.

ಕಳೆದ ನಾಲ್ಕು ವರುಷಗಳ ಅವಧಿಯಲ್ಲಿ ಪಕ್ಷ ನಡೆಸಿದ ಮತ್ತು ಬೆಂಬಲಿಸಿದ ಹೋರಾಟಗಳಿಂದ ಹೋರಾಟದಲ್ಲಿ ಪಾಲ್ಗೊಂಡ ಜನಸಮೂಹಗಳ ಪ್ರಜ್ಞೆ ಗಣನೀಯವಾಗಿ ಉತ್ತಮಗೊಂಡಿದೆ. ಇದರ ಪ್ರತಿಫಲ ಈ ಅವಧಿಯಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ವ್ಯಕ್ತವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷ ತನ್ನ ಪ್ರಾತಿನಿಧ್ಯವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದೆ.

ಇಂದು ರಾಜ್ಯದಲ್ಲಿ ಜನತೆಯ ಮುಂದೆ ಆಯ್ಕೆ ಇಲ್ಲದಂತಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಸಮನಾಗಿ ಮೋಸಕ್ಕೊಳಗಾದ ಜನ ಪರ್ಯಾಯಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ. ಸಿಪಿಐ(ಎಂ) ಮಾತ್ರ ಈ ಭ್ರಷ್ಟ ಬಂಡವಾಳಶಾಹಿ ಭೂಮಾಲಿಕ ಪಕ್ಷಗಳಿಗೆ ಪರ್ಯಾಯವನ್ನು ಒದಗಿಸಬಲ್ಲದು. ಈ ಪರ್ಯಾಯವು ಹೋರಾಟಗಳ ನಡುವೆ ಮೂಡಿ ಬರಬೇಕಾಗಿದೆ, ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು, "ಸಮಯದ ಕೂಗ"ನ್ನು ಕೇಳಿಸಿಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಿಸಲು ಮುಂದೆಬರಬೇಕಾಗಿದೆ. ಚಿಕ್ಕಬಳ್ಳಾರದಲ್ಲಿ ನಡೆಯುವ 20ನೇ ರಾಜ್ಯ ಸಮ್ಮೇಳನ ಮುಂದಿನ 3ವರ್ಷಗಳ ಸಮರಶೀಲ ಹೋರಾಟಗಳಿಗೆ ನಾಂದಿಯಾಗುವುದರಲ್ಲಿ ಸಂಶಯವಿಲ್ಲ.

"ಪ್ರಮೋದ್ ಮುತಾಲಿಕ್ ಬಂಧಿಸಿ, ಶ್ರೀರಾಮಸೇನೆ ನಿಷೇಧಿಸಿ"

ಸಿಂದಗಿಯ ತಹಸೀಲ್ದಾರ್ ಕಛೇರಿ ಆವರಣದ ಧ್ವಜ ಸ್ತಂಭಕ್ಕೆ ಪಾಕ್ ಧ್ವಜಾರೋಹಣ ಮಾಡಿ ಗುಲ್ಲೆಬ್ಬಿಸಿ, ವಾಹನಗಳ ಮೇಲೆ ಕಲ್ಲೆಸೆದು ದಾಂಧಲೆ ನಡೆಸಿದ ಶ್ರೀರಾಮ ಸೇನೆಯವರೆನ್ನಲಾದ ಏಳು ಜನರ ಮೇಲೆ ಬಿಜಾಪುರ ಪೋಲಿಸರು ಆರೋಪ ಹೊರಿಸಿ 6 ಜನರನ್ನು ಬಂಧಿಸಿದ್ದಾರೆ. ಶ್ರೀರಾಮಸೇನೆಯ ಈ ಕೃತ್ಯವನ್ನು ದೇಶ ದ್ರೋಹದ ಕೃತ್ಯವೆಂದು ಸಿಪಿಐ(ಎಂ) ರಾಜ್ಯ ಸಮಿತಿ ಖಂಡಿಸಿದೆ.

'ಶ್ರೀರಾಮಸೇನೆ ಇಂತಹ ಕುಕೃತ್ಯಗಳನ್ನು ನಡೆಸಿರುವುದು ಇದೇ ಮೊದಲೇನಲ್ಲ. ಈಗಾಗಲೇ ಕೆಲವು ಪ್ರಕರಣಗಳಲ್ಲಿ ಅವರು ಭಾಗಿಯಾಗಿರುವುದು ಬಹಿರಂಗವಾಗಿದೆ. ಉದಾ:- ಬೆಂಗಳೂರಿನ ತಿಲಕ್‌ನಗರದ ಮಸೀದಿಗೆ ಹಂದಿ ಮಾಂಸ ಎಸೆದ ಪ್ರಸಂಗ. ಜೊತೆಗೆ ಇತ್ತೀಚೆಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚುತ್ತಿವೆ.

ಬಿಜೆಪಿ ಪಕ್ಷದ ಅಪರಿಮಿತ ಭ್ರಷ್ಟಾಚಾರ ಮತ್ತು ಒಳಜಗಳಗಳಿಂದ ಜನತೆ ಬೇಸತ್ತಿರುವ ಈ ಸಮಯದಲ್ಲಿ ಕೋಮುವಾದಿ ಗಲಭೆಗಳನ್ನು ಹಬ್ಬಿಸುವುದಕ್ಕೆ ಕೋಮುವಾದೀ ಶಕ್ತಿಗಳು ಅಧಿಕಾರ ಉಳಿಸಿಕೊಳ್ಳುವುದಕ್ಕೆ ಹೆದ್ದಾರಿ ಎಂದು ಭಾವಿಸಿದ ಕೋಮುವಾದಿ ಸಂಘಟನೆಗಳ ಇಂತಹ ಅನೇಕ ಕುಕೃತ್ಯಗಳ ಸಂಚು ರೂಪಿಸುತ್ತಿವೆ.

ತಕ್ಷಣವೇ ಶ್ರೀರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್‌ರವರನ್ನು ಬಂಧಿಸಿ ಈ ಪ್ರಕರಣ ಮತ್ತು ಇತರ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಪ್ರಮೋದ್ ಮುತಾಲಿಕ್‌ರವರು 'ಈ ವಿದ್ಯಾರ್ಥಿಗಳು ಶ್ರೀರಾಮಸೇನೆಯವರಲ್ಲ, ಆರೆಸ್ಸೆಸ್‌ನವರು' ಅದಕ್ಕೆ ನನ್ನ ಬಳಿ ದಾಖಲೆಗಳಿವೆ ಎಂದು ಹೇಳಿದ್ದಾರೆ.

ಆರೆಸ್ಸೆಸ್ ಕೂಡ ಇಂತಹ ಕುಕೃತ್ಯಗಳಲ್ಲಿ ಎತ್ತಿದ ಕೈ ಎಂಬುದು ಅನೇಕ ನ್ಯಾಯಾಂಗ ಆಯೋಗಗಳು ಹೇಳಿವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಸರ್ಕಾರ ಒಂದು ಪ್ರಾಮಾಣಿಕ, ವಸ್ತುನಿಷ್ಠ ತನಿಖೆ ನಡೆಸುವುದು ಸಂಶಯಕರ. ಪ್ರಮೋದ್ ಮುತಾಲಿಕ್ ಮತ್ತು ಶ್ರೀರಾಮಸೇನೆಯ ಹಿಂದಿನ ಪ್ರಕರಣಗಳ ಬಗ್ಗೆ ಬಿಜೆಪಿ ಸರ್ಕಾರ ದೃಢವಾದ ತನಿಖೆ ನಡೆಸಲಿಲ್ಲ, ಮಾತ್ರವಲ್ಲ ಅವರ ಮೇಲಿದ್ದ ಹಲವು ಕ್ರಿಮಿನಲ್ ಕೇಸುಗಳನ್ನು ಬಿಜೆಪಿ ಸರ್ಕಾರ ವಾಪಸ್ ಪಡೆಯಿತು. ಈ ಎಲ್ಲಾ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

RNI No. KARKAN /2006/17926 Posted on every Satuarda
Postal Reg. No. RNP/KA/BGS/2078/2010-12 Posted at MBC Bangalore GP

ಜಗದಗಲ

ಸಿರಿಯಾ ಯುದ್ಧದತ್ತ ?

ಇರಾಕ್, ಲಿಬ್ಯಾಗಳಲ್ಲಿ ಮಾಡಿದ್ದನ್ನು ಅಮೆರಿಕ ಮತ್ತು ಅದರ ಅರಬ್ ಬೆಂಬಲಿಗರು ಸಿರಿಯಾದಲ್ಲಿ ಮಾಡ ಹೊರಟಿದ್ದಾರೆ. ಅಮೆರಿಕಕ್ಕೆ ಇಷ್ಟವಿಲ್ಲದ ಸರ್ಕಾರವನ್ನು 'ದಮನಕಾರಿ' 'ಸರ್ವಾಧಿಕಾರಿ' ಇತ್ಯಾದಿಯಾಗಿ ದೂಷಿಸಿ, ಸಶಸ್ತ್ರ ಆಂತರಿಕ ಯುದ್ಧ ಅಥವಾ 'ಮಾನವೀಯ' ಮಧ್ಯಪ್ರವೇಶದ ಹೆಸರಲ್ಲಿ ಮಿಲಿಟರಿ ದಾಳಿ ನಡೆಸಿ ಕೈಗೊಂಬೆ ಸರ್ಕಾರ ರಚಿಸಿ, ಅಲ್ಲಿನ ಸಂಪತ್ತು ಕಬಳಿಸುವುದು. ಸಿರಿಯಾದಲ್ಲಿ ಆಗಲೇ 'ಅರಬ್ ವಸಂತ'ದ ಹೆಸರಲ್ಲಿ ವಿರೋಧಿ ಶಕ್ತಿಗಳು ಸಶಸ್ತ್ರ ಆಂತರಿಕ ದಂಗೆ ನಡೆಸಿವೆ. ಸರ್ಕಾರಿ ಮತ್ತು ವಿರೋಧಿ ಗುಂಪುಗಳ ನಡುವೆ ಹಲವು ಪ್ರದೇಶಗಳಲ್ಲಿ ಘರ್ಷಣೆ ನಡೆದಿದೆ. ಆದರೆ ಅದು ನಿಜವಾದ ಜನತಾ ಚಳುವಳಿ ಆಗಿದೆ ಎಂಬ ಯಾವ ಸೂಚನೆಗಳು ಸಿಕ್ಕಿಲ್ಲ. ಬದಲಾಗಿ ನೆರೆಯ ತುರ್ಕಿಯಲ್ಲಿ ನೆಲೆಗೊಂಡ 'ಸ್ವತಂತ್ರ ಸಿರಿಯನ್ ಸೈನ್ಯ' ಎಂಬ ವಿರೋಧಿ ಗುಂಪು ಗಡಿಯಾಚೆಯಿಂದ ಸಶಸ್ತ್ರ ಕಾರ್ಯಾಚರಣೆ ಮಾಡುತ್ತಿದೆ. ದೇಶದೊಳಗೂ 'ಮುಸ್ಲಿಂ ಬ್ರದರ್ ಹುಡ್', ಅಲ್-ಖೈದಾ ಮತ್ತು ಅಮೆರಿಕದ ಬಾಲಬಡುಕರು ಸೇರಿದ ಮಿಶ್ರ ಪಡೆ ಇದು. ಫೈಸಲ್ ಅಲ್ ಮಿಕದಾದ್ ಎಂಬ ಗುಂಪು ಸಿರಿಯಾದ ಒಳಗೆ ಹಲವು ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಿದೆ. ಅವರಿಗೆ ತುರ್ಕಿ, ಸೌದಿ ಅರೇಬಿಯಾ ಸೈನ್ಯ ಶಸ್ತ್ರಾಸ್ತ್ರ ಮತ್ತು ತರಬೇತಿ ಕೊಡುತ್ತಿದೆ. ದುಬೈ, ಕತಾರ್ ಇತ್ಯಾದಿ ಧನಸಹಾಯ ಮಾಡುತ್ತಿದೆ.

ಎಲ್ಲಾ ಅರಬ್ ದೇಶಗಳಂತೆ ಸಿರಿಯಾದಲ್ಲೂ ಪ್ರಜಾಪ್ರಭುತ್ವದ ಅಭಾವದ ಬಗ್ಗೆ ತೀವ್ರ ಅತೃಪ್ತಿ ಇದೆ. ಆದರೆ ಅಧ್ಯಕ್ಷ ಅಸದ್ ವಿರೋಧಿ ಗುಂಪುಗಳನ್ನು ಮಾತುಕತೆಗೆ ಕರೆದು, ಮುಂದಿನ ವರ್ಷ ಚುನಾವಣೆ ಘೋಷಿಸಿದ್ದಾರೆ ಮತ್ತು ಹಲವು ಕ್ರಮಗಳನ್ನು ಘೋಷಿಸಿದ್ದಾರೆ. ಆದರೆ ಅಮೆರಿಕನ್- ಬೆಂಬಲಿಗ ವಿರೋಧಿಗಳು ಈ ಸುಧಾರಣೆಗಳಿಗೆ ಕಾಯಲು ತಯಾರಿಲ್ಲ. ಅಧ್ಯಕ್ಷ ಅಸದ್ ರಾಜೀನಾಮೆ ಕೊಡಬೇಕು. ತಕ್ಷಣ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಅವರೇ ಹರಡಿರುವ ಹಿಂಸಾತ್ಮಕ ಘಟನೆಗಳನ್ನು ತೋರಿಸಿ, ಅಂತರ್ರಾಷ್ಟ್ರೀಯ



ಅಮೆರಿಕಾದ ಹಸ್ತಕ್ಷೇಪದ ವಿರುದ್ಧ ಸಿರಿಯಾದ ಅಧ್ಯಕ್ಷರನ್ನು ಬೆಂಬಲಿಸಿ ನೆರೆದಿರುವ ಜನಸಮೂಹ

ದಿಗ್ಬಂಧನಕ್ಕೆ ಒತ್ತಡ ಹಾಕುತ್ತಿದ್ದಾರೆ. ಲಿಬ್ಯಾದಲ್ಲಿ 'ಪಾಠ ಕಲಿತ' ಚೀನಾ, ರಶ್ಯಾಗಳು ವಿಶ್ವಸಂಸ್ಥೆಯ ದಿಗ್ಬಂಧನ ಬೆಂಬಲಿಸಲು ನಿರಾಕರಿಸಿವೆ. ಆದ್ದರಿಂದ ಅಮೆರಿಕದ ಕೆಲವು ಬಾಲಬಡುಕ ದೇಶಗಳು ಅರಬ್ ಲೀಗ್ ಬಳಸಲು ಪ್ರಯತ್ನಿಸಿದವು.

ಅರಬ್ ಲೀಗ್ ಸಿರಿಯಾದ ಮೇಲೆ ಏಕಪಕ್ಷೀಯ ತೀವ್ರವಾದ ದಿಗ್ಬಂಧನ ಘೋಷಿಸಿದೆ. 1991 ರಲ್ಲಿ ಕುವೈತಿನ ಮೇಲೆ ದಾಳಿ ಮಾಡಿದಾಗಲೂ ಲೀಗ್ ಇರಾಕ್ ಮೇಲೆ ದಿಗ್ಬಂಧನ ವಿಧಿಸಿರಲಿಲ್ಲ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಹಿಂಸಾತ್ಮಕ ಘಟನೆಗಳು ನಡೆದಿರುವ ಪ್ರದೇಶಗಳಿಗೆ ಲೀಗ್ ತಂಡ ಭೇಟಿಗೆ ಅವಕಾಶ ಮಾಡಲು ಸಿರಿಯಾ ತಯಾರಿದೆ. ಆದರೆ ಸರ್ಕಾರದ ಪ್ರತಿನಿಧಿಗಳೂ ಇರಬೇಕು ಎಂಬ ಷರತ್ತಿಗೆ ಲೀಗ್ ತಯಾರಿಲ್ಲ. ಶಾಂತಿಪಾಲನೆಗೆ ಸರ್ಕಾರದ ಪಡೆಗಳು ಆ ಪ್ರದೇಶಗಳಿಂದ ಖಾಲಿ ಮಾಡಬೇಕು ಎಂದು ಒತ್ತಾಯಿಸುವ ಲೀಗ್ ವಿರೋಧಿ ಸಶಸ್ತ್ರ ಗುಂಪುಗಳಿಗೆ ಅದನ್ನು ಹೇಳಲು ತಯಾರಿಲ್ಲ. ಸಿರಿಯಾ ಅರಬ್ ಲೀಗಿನ ಸ್ಥಾಪಕ ಸದಸ್ಯ ಆಗಿದ್ದು, ಅದಕ್ಕೆ ಏನೂ ಹಕ್ಕುಗಳೇ ಇಲ್ಲವೇನೋ, ಸಿರಿಯಾದ ಸರ್ಕಾರ ಸಾರ್ವಭೌಮತೆ ಎನ್ನುವುದು ಇಲ್ಲವೇನೋ ಎಂಬಂತೆ ಲೀಗ್ ನಟಿಸುತ್ತಿದೆ. ಲೀಗ್ ತಂಡ ಸಿರಿಯಾ ಭೇಟಿ ನೀಡಿದ ಭಾರಿ ಭಯೋತ್ಪಾದಕ ಸ್ಫೋಟ ನಡೆಯಿತು. ಅದನ್ನು ಖಂಡಿಸಲು ಸಹ ಅದು ತಯಾರಿಲ್ಲ. ಬದಲಾಗಿ ಸರ್ಕಾರವೇ ಅದನ್ನು ಮಾಡಿಸಿತು ಎಂಬ ವಿರೋಧಿ ಗುಂಪುಗಳ ಪ್ರಚಾರಕ್ಕೆ ಕುಮ್ಮಕ್ಕು ಕೊಡುತ್ತಿದೆ. ಹಿಂಸಾತ್ಮಕ ಘಟನೆಗಳಲ್ಲಿ ಸತ್ತವರು ಬಹುಪಾಲು ಸೈನಿಕರು-ಪೋಲೀಸರು ಮತ್ತು ಭಯೋತ್ಪಾದಕ ಘಟನೆಗಳಲ್ಲಿ ಬಲಿಯಾದವರು ಎಂಬ ಸಿರಿಯಾದ ಹೇಳಿಕೆ ಬಗ್ಗೆ ತನಿಖೆ ನಡೆಸಲು ಲೀಗ್ ತಯಾರಿಲ್ಲ.

ಸಿರಿಯಾದ ಆಂತರಿಕ ರಾಜಕೀಯ ಹೋರಾಟವನ್ನು ಅಂತರ್ರಾಷ್ಟ್ರೀಯಗೊಳಿಸಲು ಅಮೆರಿಕ ಎಲ್ಲಾ ಪ್ರಯತ್ನ ಮಾಡುತ್ತಿದೆ, ಅದರ ಅರಬ್ ಲೀಗಿನಲ್ಲಿರುವ ತನ್ನ ಬೆಂಬಲಿಗರ ಮೂಲಕ. ಸಿರಿಯಾದ ಮೇಲೆ ನಾಟೋ ಸದಸ್ಯ ದೇಶವಾದ ತುರ್ಕಿ 'ಮಾನವೀಯ ದಾಳಿ' ಮಾಡಿ ಸಿರಿಯಾದಲ್ಲಿ ತನ್ನ ಕೈಗೊಂಬೆ ಸರ್ಕಾರ ಸ್ಥಾಪಿಸುವ ಯೋಜನೆ ಅಮೆರಿಕದ್ದು. ಅದಕ್ಕೆ ರಂಗ ಸಿದ್ಧ ಮಾಡಲಾಗುತ್ತಿದೆ. ಇರಾನ್ ಮತ್ತು ಸಿರಿಯಾ ಘನವಾದ ಸಂಬಂಧ ಹೊಂದಿದ್ದು, ಇರಾನನ್ನು ಏಕಾಂಗಿಗೊಳಿಸಲು ಸಿರಿಯಾದಲ್ಲಿ ಕೈಗೊಂಬೆ ಸರ್ಕಾರ ಸ್ಥಾಪಿಸಿದರೆ ಸಹಾಯಕವಾಗುತ್ತದೆ ಎಂಬುದು ಅದರ ಲೆಕ್ಕಾಚಾರ. ಆದರೆ ಅದರ ಲೆಕ್ಕಾಚಾರದಂತೆ ಎಲ್ಲಾ ನಡೆಯುತ್ತಿಲ್ಲ. ಇರಾಕ್, ಲೆಬನಾನುಗಳು ಲೀಗಿನ ದಿಗ್ಬಂಧನ ಜಾರಿ ಮಾಡುವುದಿಲ್ಲ ಎಂದು ಹೇಳಿವೆ. ಜೋರ್ಡಾನು ಸಹ ಜಾರಿ ಮಾಡುವುದಿಲ್ಲ ಎಂದು ಹಲವು ಮೂಲಗಳು ಹೇಳಿವೆ.

ಶರತ್‌ಚಂದ್ರ

ಡೋ ಕೆಮಿಕಲ್ಸ್‌ಗೆ ಮುಖಭಂಗ

ಲಂಡನ್ ಒಲಿಂಪಿಕ್ಸ್ ಕಮಿಟಿ ಡೋ ಕೆಮಿಕಲ್ಸ್ ಪ್ರಾಯೋಜನೆ ಬಿಟ್ಟು ಕೊಡಲು ಕೊನೆಗೂ ನಿರ್ಧರಿಸಿದೆ. ಈ ಮೊದಲು ಭೋಪಾಲ್ ನರಮೇಧ'ದ ಅಪರಾಧಿಯಾಗಿರುವ ಡೋ ಕೆಮಿಕಲ್ಸ್ ಲಂಡನ್ ಒಲಿಂಪಿಕ್ಸಿನ ಪ್ರಮುಖ ಪ್ರಾಯೋಜಕ ಎಂದು ಘೋಷಿಸಲಾಗಿತ್ತು. ಇದು ಮುಂದುವರೆದಿದ್ದರೆ, ಎಲ್ಲಾ ಲಂಡನ್ ಒಲಿಂಪಿಕ್ಸ್ ಸ್ಟೇಡಿಯಂಗಳಲ್ಲಿ ಮತ್ತು ಪ್ರಚಾರ ಸಾಮಗ್ರಿಗಳಲ್ಲಿ ಡೋ ಲೋಗೋ ರಾರಾಜಿಸುತ್ತಿತ್ತು. ಆದರೆ ಭೋಪಾಲ್ ಸಂತ್ರಸ್ತರ ಸಂಘಟನೆಗಳು ಸೇರಿದಂತೆ ಜಗತ್ತಿನಾದ್ಯಂತ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ನೋಮ್ ಚೋಮ್ಸ್ಕಿ ಸೇರಿದಂತೆ ಜಗತ್ತಿನ ಹಲವು ಪ್ರಮುಖ ಬುದ್ಧಿಜೀವಿಗಳು ಸಹ ಇದನ್ನು ಪ್ರತಿಭಟಿಸಿದ್ದರು.

ಡೋ ಕೆಮಿಕಲ್ಸ್ ಭೋಪಾಲ್ ನರಮೇಧಕ್ಕೆ ಕಾರಣವಾದ ಮತ್ತು ಅದರ ಜವಾಬ್ದಾರಿ ತೆಗೆದುಕೊಳ್ಳಲು ನಿರಾಕರಿಸಿದ ಯೂನಿಯನ್ ಕಾರ್ಬೈಡ್ ಜತೆ ಸಮ್ಮಿಳಿತವಾದ್ದು ಈ ಪ್ರತಿಭಟನೆಗೆ ಒಂದೇ ಕಾರಣವಲ್ಲ. ಡೋ ಕೆಮಿಕಲ್ಸ್ ತನಗೂ ಭೋಪಾಲ್ ನರಮೇಧಕ್ಕೂ ಏನೂ ಸಂಬಂಧ ಇಲ್ಲ ಎನ್ನುತ್ತಾ, ಭೋಪಾಲ್ ಸಂತ್ರಸ್ತರಿಗೆ ಯಾವುದೇ ಪರಿಹಾರ ಕೊಡಲು ನಿರಾಕರಿಸಿದೆ. ಆದರೆ ಇದಲ್ಲದೆ, ಡೋ ಕೆಮಿಕಲ್ಸ್ ತನ್ನದೇ ಆದ 'ನರಮೇಧ'ಗಳನ್ನು ಹೊಂದಿದೆ. ವಿಯೆಟ್ನಾಂನಲ್ಲಿ ಯುದ್ಧದಲ್ಲಿ ಬಳಸಿ ಲಕ್ಷಾಂತರ ಜನರ ದಾರುಣ ಸಾವಿಗೆ ಕಾರಣವಾದ ಮತ್ತು ಇನ್ನೂ ಬತ್ತ ಬೆಳೆ ಸೇರಿದಂತೆ ಪರಿಸರ ವಿಷವನ್ನು ಉಗುಳುತ್ತಿರುವ ಏಜೆಂಟ್ ಆರೇಂಜ್ ಡೋ ಕೆಮಿಕಲ್ಸ್‌ನ 'ವರಪ್ರಸಾದ'. ಇಂತಹ ಹಲವು ಮಾರಕ ರಾಸಾಯನಿಕ ಅಸ್ತ್ರಗಳಿಂದ ದೋಚಿದ ಹಣದಿಂದಲೇ ಡೋ ಜಗತ್ತಿನ ಅತಿ ದೊಡ್ಡ ವಹಿವಾಟು ಇರುವ ರಾಸಾಯನಿಕ ಕಂಪನಿ ಆಗಿದ್ದು.

ಡೋ ಕೆಮಿಕಲ್ಸ್ ನ ನರಮೇಧಗಳ ಘಾಟು ವಿಶ್ವಭ್ರಾತೃತ್ವ ಸುವಾಸನೆ ಹರಡಬೇಕಾದ ಒಲಿಂಪಿಕ್ಸಿನಂತಹ ನೆಮ್ಮದಿ ತರುವ ವಿಷಯ. ಆದರೆ ಇಂತಹ ಹಲವು ರೀತಿಯ ಘಾಟು ಸೂಸುವ ಬಹುರಾಷ್ಟ್ರೀಯ ಕಂಪನಿಗಳ ಪ್ರಾಯೋಜನೆಗಳಿಂದ ಒಲಿಂಪಿಕ್ಸ್ ಕಲುಷಿತವಾಗುವುದನ್ನು ತಡೆಯಲು ಚಳುವಳಿ ಅಗತ್ಯ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH